
ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

ಜನವರಿ 09, 2013 ಪುಟ 20 ರೂ. 14/-




ಆರೀಫ್ ರಾಜಾಗೆ ಅಕಾಡೆಮಿ ಪ್ರಶಸ್ತಿ



ಉದಾಸಿ & ಸನ್ಸ್ 680 ಕೋಟಿ ಲೂಟಿ




ಬ್ಬಳ್ಳಿ: ಡಿಸಿಪಿ ಪ್ರತಾಪನ ಇಸ್ಪೀಟ್ ಅಡ್ಡೆ



ಗಳೂರು ಶಾಸಕನ ಮಚಂದ್ರೋತ್ಸವ




ಮೈಸೂರು ಬ್ರಾಹ್ಮಣರ ರಾಜಕೀಯ



ಕಮಲಹಾಸನ್ ವಿಶ್ವರೂಪ ದರ್ಶನ

ಟರಿಗೆ ಆಶ್ರಯ ಸೈಟ್ ಹಂಚಿದ ಶಾಸಕ ಶ್ರೀನಿವಾಸ



•ಪಾರ್ವತೀಶ್ ಬಿಡಿ ಚಿತ್ರಗಳು

ಸಿದ್ದರಾಮಯ್ಯನವರೇ.... ಸಮಸ್ಯೆಗಳಿಗೆ ಹತಾಶೆ ಪರಿಹಾರವಲ್ಲ




ಇಲ್ಲಿ ಒಂದೆರಡು ಪುಟ್ಟ ಘಟನೆಗಳನ್ನು ಪ್ರಸ್ತಾಪಿಸಿ ಆಮೇಲೆ ಮುಖ್ಯ ವಿಚಾರಕ್ಕೆ ಬರಬಹುದೆನಿಸುತ್ತಿದೆ.

ಪ್ರೊ. ಕೆ.ರಾಮದಾಸ್‌ಗೆ ಕ್ಯಾನ್ಸರ್ ಆಗಿದ್ದಾಗ ನಾವೊಂದಿಷ್ಟು ಮಂದಿ ಅವರನ್ನು ನೋಡಲು ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಗೆ ಹೋಗಿದ್ದೆವು. ಸಾವು ಖಚಿತ ಎಂದು ಗೊತ್ತಿದ್ದರೂ ಅವತ್ತು ಲವಲವಿಕೆಯಿಂದ ನಮ್ಮೊಂದಿಗೆ ಗಂಟೆಗಟ್ಟಲೆ ಹರಟಿದ ರಾಮದಾಸರ ಮಾತೆಲ್ಲಾ ಕರ್ನಾಟಕದ ಜನಜೀವನ, ಯುವಜನತೆ, ರಾಜಕೀಯದ ಬಗ್ಗೆಯೇ ಇತ್ತು. ಅವತ್ತು ರಾಮದಾಸ್ ಪದೇಪದೇ ನೆನಪಿಸಿಕೊಂಡ ವ್ಯಕ್ತಿ ಸಿದ್ದರಾಮಯ್ಯ!

ಶಾಸಕ, ಮಂತ್ರಿ, ಉಪಮುಖ್ಯಮಂತ್ರಿಯಾಗಿದ್ದಾಗಲೂ ಇವರಿಬ್ಬರ ನಡುವೆ ವೈಯಕ್ತಿಕ ಗೆಳೆತನವಿತ್ತು. 'ಖಂಡಿತವಾದಿ ಲೋಕವಿರೋಧಿ!' ಎಂಬ ಮಾತಿಗೆ ಉದಾಹರಣೆಯಂತಿದ್ದ ರಾಮದಾಸ್ ಸಿದ್ದರಾಮಯ್ಯನವರ ಸರಳತೆ, ಕಚ್ಚಾ ರಾಜಕೀಯ ಶೈಲಿ, ಮಾಸ್ ಲೀಡರ್ ಆಗಿದ್ದಾಗಲೂ ಕುಟುಂಬದ ವೈಯಕ್ತಿಕ ವಿಚಾರಗಳನ್ನೆಲ್ಲ ಹಂಚಿಕೊಳ್ಳುತ್ತಿದ್ದ **humbleness**, ಅಕ್ರಮ ಹಣ ಗಳಿಕೆಗೆ ಹಿಂಜರಿಯುತ್ತಿದ್ದ ಸ್ವಭಾವಗಳ ಬಗ್ಗೆ ಅನೇಕ ಪ್ರಸಂಗಗಳನ್ನು ನೆನೆದುಕೊಂಡರು.

ಸಾರಾಂಶದಲ್ಲಿ ಹೇಳಬೇಕೆಂದರೆ ಇವತ್ತಿನ ಸಂಸದೀಯ ಚುನಾವಣಾ ಹೊಲಸು ರಾಜಕೀಯದಲ್ಲಿ ಜನ ಸ್ವಲ್ಪವಾದರೂ



ಅಹಿಂದ ರ್ಯಾಲಿ

ನಿರೀಕ್ಷೆ ಇಡಬಹುದಾದ ನಾಯಕನೆಂದರೆ ಅದು ಸಿದ್ದರಾಮಯ್ಯ ಎಂಬುದಾಗಿತ್ತು.

ರಾಮದಾಸ್ ತಮ್ಮ ಬದುಕಿನುದ್ದಕ್ಕೂ ದುರ್ಬಲರ-ದಮನಿತರ ಪರವಾಗಿ ಹೋರಾಡಿದವರು. ಅಂದು ಅವರಾಡಿದ ಮಾತುಗಳು ಆ ಸಮುದಾಯಗಳ ಆಶೋತ್ತರಗಳನ್ನು ಪ್ರತಿನಿಧಿಸುವಂತಿದ್ದವು.

ಇನ್ನೊಮ್ಮೆ 2008ರ ನವೆಂಬರ್‌ನಲ್ಲಿ ನಾನು ಹಾಗು ಕ್ಯಾಪ್ಟನ್ ಗೌರಿ ಸಿದ್ದರಾಮಯ್ಯನವರನ್ನು ನೋಡಲು ವಿಜಯನಗರದ ಅವರ ಮನೆಗೆ ಹೋಗಿದ್ದೆವು. ಅಷ್ಟರಲ್ಲಿ ಸಿದ್ದರಾಮಯ್ಯ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿದ್ದರು.

ಚಾಮುಂಡೇಶ್ವರಿ ಕ್ಷೇತ್ರದ ಉಪಚುನಾವಣೆಯ ದಿನ ಹತ್ತಿರದಲ್ಲೇ ಇತ್ತು.

ಆ ಕ್ಷೇತ್ರದ ರಾಜಕೀಯ ವಾತಾವರಣದ ಬಗ್ಗೆ ನಿರಂತರ ನಿಗಾ ಇಟ್ಟಿದ್ದ ನಮಗೆ ಸಿದ್ದರಾಮಯ್ಯ ಈ ಬಾರಿ ಗೆಲ್ಲಲಾರರೆಂಬ ಅನುಮಾನ ತರಿಸಿತ್ತು. ಆಗ ಮುಖ್ಯಮಂತ್ರಿಯಾಗಿದ್ದ ಕುಮಾರಸ್ವಾಮಿ ತಮ್ಮ ಇಡೀ ಸರ್ಕಾರವನ್ನೇ ಸಿದ್ದರಾಮಯ್ಯ ವಿರುದ್ಧ ತಂದು ನಿಲ್ಲಿಸಿ ಅವರನ್ನು ರಾಜಕೀಯವಾಗಿ ಮುಗಿಸಿ ಬಿಡಲು ಸಜ್ಜಾಗಿದ್ದರು. ಅವತ್ತು ಸುದೀರ್ಘವಾಗಿ ನಮ್ಮೊಂದಿಗೆ ಮಾತನಾಡಿದ ಸಿದ್ದರಾಮಯ್ಯ "ನಾನು ಈ ಸಾರಿ ಚಾಮುಂಡೇಶ್ವರಿಲಿ ಗೆಲ್ಲೋದು ತುಂಬಾ ಕಷ್ಟ ಇದೆ" ಎಂದು ತಮ್ಮ ಮನಸ್ಸಿನಾಳದ ಆತಂಕವನ್ನು ಹೇಳಿಕೊಂಡರು. ನಮಗೆ ಅದರ ಅರಿವಿದ್ದಾಗಲೂ ಅವರ ಮಾತನ್ನು ನಂಬಲು ಇಷ್ಟವಾಗಿರಲಿಲ್ಲ. ಅವತ್ತಿನ ಚುನಾವಣಾ ಸಮರದಲ್ಲಿ 'ಲಂಕೇಶ್' ತಂಡವು ದೇವೇಗೌಡರ ಕುಟುಂಬದ ದುಷ್ಟತನದ ವಿರುದ್ಧ ತನ್ನ ಶಕ್ತಿ ಮೀರಿ ಹೋರಾಡಿತು. ಕೊನೆಗೆ ಫಲಿತಾಂಶ ಬಂದಾಗ ಸಿದ್ದರಾಮಯ್ಯ ಗೆದ್ದಿದ್ದರು.

ಆದರೆ ಜುಜುಬಿ 247 ಓಟುಗಳ ಗೆಲುವದು!

ಕರ್ನಾಟಕದಲ್ಲಿ 'ಆಪರೇಷನ್ ಕಮಲ'ದ ಮೂಲಕ ಬಿಜೆಪಿಗಳು ರಾಜಕೀಯ ಚುನಾವಣಾ ಭ್ರಷ್ಟಾಚಾರ ಶುರು ಮಾಡಿದರೆಂದು ಎಲ್ಲರೂ ನಂಬಿದ್ದಾರೆ. ಆದರೆ ಅದು ಪೂರ್ತಿ ನಿಜವಲ್ಲ. ಈ ಗಲೀಜು ಗಿಡವನ್ನು ಕರ್ನಾಟಕ ರಾಜಕೀಯ ರಂಗಸ್ಥಳಕ್ಕೆ ತಂದು ನೆಟ್ಟವರು ದೇವೇಗೌಡ-ಕುಮಾರಸ್ವಾಮಿ.

ಅವತ್ತು ಸಿದ್ದರಾಮಯ್ಯನವರನ್ನು ಸೋಲಿಸಲು ಗೌಡರ ಕುಟುಂಬ ಹಾಗೂ ಸರ್ಕಾರ ಸೇರಿ ಖರ್ಚು ಮಾಡಿದ್ದು 30 ಕೋಟಿ ರೂಪಾಯಿ. ಸಿದ್ದರಾಮಯ್ಯ ಅದರ ಶೇ.5 ರಷ್ಟನ್ನು ಖರ್ಚು ಮಾಡಿರಲಿಲ್ಲ. ಅಷ್ಟು ಹಣವೂ ಅವರ ಹತ್ತಿರ ಇರಲಿಲ್ಲ. ಗೆಲುವಿನ ಮಾರ್ಜಿನ್ ಚಿಕ್ಕದೇ ಇರಬಹುದು. ಆದರೂ ಜನ ಸಿದ್ದರಾಮಯ್ಯನವರನ್ನು ಗೆಲ್ಲಿಸಿದ್ದರು.


ಇದರರ್ಥ ಜನರಿಗೆ ಸಿದ್ದರಾಮಯ್ಯ ಬೇಕಾಗಿದ್ದಾರೆ ಎಂಬುದೇ ಆಗಿತ್ತು.

ಮೊನ್ನೆ ಮೈಸೂರಲ್ಲಿ ತಾವು ರಾಜಕೀಯ ಪ್ರವೇಶಿಸಿ 40 ವರ್ಷವಾದ ನೆನಪಿನ ಸಭೆಯೊಂದರಲ್ಲಿ ಸಿದ್ದರಾಮಯ್ಯ ಮಾತನಾಡಿದ್ದಾರೆ.

"ಇದೊಂದು ಬಾರಿ ಚುನಾವಣೆಗೆ ನಿಲ್ಲುತ್ತೇನೆ. ಆಮೇಲಿಂದ ನನಗಿದೆಲ್ಲಾ ಬೇಡ. ನನಗೆ ಈ ಭ್ರಷ್ಟಾಚಾರ, ಜಾತಿ, ದುಡ್ಡಿನ ಬಲದ ರಾಜಕೀಯ ಸಾಕಾಗಿ ಹೋಗಿದೆ" ಎಂದಿದ್ದಾರೆ.

ಅವರೊಳಗಿನ ಸೂಕ್ಷ್ಮತೆಗೆ ಇದೇ ಸಾಕ್ಷಿ.

ಆದರೆ ಇಲ್ಲೊಂದು ವಿಪರ್ಯಾಸವೂ ಇದೆ.



ಈಗ ಎಪ್ಪತ್ತು ವರ್ಷವಾಗಿರುವ ಯಡಿಯೂರಪ್ಪ ಕೆಜೆಪಿ ಅಧ್ಯಕ್ಷರಾದಾಗ "ನನ್ನನ್ನು ಇನ್ನೂ ಹತ್ತು ವರ್ಷ ಯಾವ ಶಕ್ತಿಯೂ ತಡೆದು ನಿಲ್ಲಿಸಲು ಸಾಧ್ಯವಿಲ್ಲ" ಅಂದಿದ್ದಾರೆ. 80 ವರ್ಷ ದಾಟಿರುವ ಎಸ್.ಎಂ.ಕೃಷ್ಣ ಮಾಡಬಾರದ್ದನ್ನೆಲ್ಲ ಮಾಡಿ, ತಿನ್ನಬಾರದ್ದನ್ನೆಲ್ಲಾ ತಿಂದು ಈಗಲೂ ಮತ್ತೆ ಅಧಿಕಾರ ಸಿಗಬಹುದೇ ಎಂದು ಹೊಂಚು ಹಾಕುತ್ತಿದ್ದಾರೆ. ಇಷ್ಟೇ ವಯಸ್ಸಾಗಿರುವ, ಸರಿಯಾಗಿ ಕಿವಿ ಕೇಳಿಸದಿದ್ದರೂ ಶ್ಯಾಮನೂರು ಶಿವಶಂಕರಪ್ಪಗೆ ತಾನು ಕೆಪಿಸಿಸಿ ಪ್ರೆಸಿಡೆಂಟಾಗಿ, ಕಾಂಗ್ರೆಸ್ ಗೆದ್ದರೆ ಸಿಎಂ ಆಗುವ ಕನಸು ಬೀಳುತ್ತಿದೆ. ವೃದ್ಧ ಮಾಂತ್ರಿಕ ದೇವೇಗೌಡರು ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡುವಾಗ **"I will rise again from the ash"** ಎಂಬ ವಿಭಿನ್ನ ಇಂಗ್ಲಿಷ್‌ನಲ್ಲಿ ಮಾತಾಡಿ ಸವಾಲ್ ಹಾಕಿ ಬಂದಿದ್ದರು. ಅವರು ಪುನಃ ದಿಲ್ಲಿಯಲ್ಲಿ ತಲೆ ಎತ್ತಲಾಗದಿದ್ದರೂ ಜನತಾದಳವಂತೂ ಕರ್ನಾಟಕದಲ್ಲಿ ಚಿಗುರಿಕೊಂಡಿತು. ದೇವೇಗೌಡ ಇವತ್ತೂ ಕೂಡ ಪುರುಸೊತ್ತಿರದೆ ರಾಜ್ಯಾದ್ಯಂತ ಸರ್ಕೀಟು ನಡೆಸುತ್ತಲೇ ಇದ್ದಾರೆ.

ಆದರೆ ಇವರೆಲ್ಲರಿಗಿಂತ ವಯಸ್ಸಲ್ಲಿ ಚಿಕ್ಕವರಾಗಿರುವ, ಈಗಿನ್ನೂ ಅರವತ್ತೈದಷ್ಟೇ ಆಗಿರುವ ಸಿದ್ದರಾಮಯ್ಯ ನಿರುತ್ಸಾಹದ ಮಾತಾಡುತ್ತಿದ್ದಾರೆ!

ಸಿದ್ದರಾಮಯ್ಯ ಭ್ರಷ್ಟರಲ್ಲ, ಜಾತಿ ಭಾವನೆ, ಕೋಮುವಾದ ಕೆರಳಿಸಿ ಮಾತನಾಡುವವರಲ್ಲ. ಚಾಮುಂಡೇಶ್ವರಿ ಎಲೆಕ್ಷನ್‌ನಲ್ಲಿ ಮುಖ್ಯಮಂತ್ರಿ ಕುಮಾರಸ್ವಾಮಿ ಮಾಡಿದಂತೆ ಮತದಾರರ ಕೈಗೆ ತನ್ನ ಕೈಯಾರೆ ಸಾವಿರ ರೂಪಾಯಿಗಳ ನೋಟು ತುರುಕಿ ಓಟು ಕೇಳುವ ನಿರ್ಲಜ್ಜತೆಯನ್ನು ಪ್ರಾಣ ಹೋದರೂ ತೋರುವುದಿಲ್ಲ. ಚೆನ್ನಿಗಪ್ಪ ಮಾಡಿದಂತೆ ನೋಟಿನ ಬಂಡಲ್‌ಗಳನ್ನು ಆಕಾಶಕ್ಕೆಸೆದು ಬಡ ಜನ ಆಯ್ದೊಂಡು ತಿನ್ನುವಂತ ಸೀನ್ ಸೃಷ್ಟಿಸುವುದಿಲ್ಲ. ಹಣಕಾಸು ಮಂತ್ರಿಯಾಗಿದ್ದಾಗ ಕೋಟಿಗಟ್ಟಲೆ ರೂಪಾಯಿಗಳ ಡೀಲ್ ಕುದುರಿಸಿಕೊಳ್ಳುವ ಅವಕಾಶಗಳು ಮನೆ ಬಾಗಿಲಿಗೇ ಹುಡುಕಿಕೊಂಡು ಬಂದಾಗಲೂ ಸಿದ್ದರಾಮಯ್ಯ ತಮ್ಮ ಹಳ್ಳಿಗನ ಸಜ್ಜನಿಕೆ, ಘನತೆ, ಜನಪರ ಕಾಳಜಿಗಳನ್ನು ಬಿಟ್ಟುಕೊಡಲಿಲ್ಲ. ಅವರ ಬಜೆಟ್‌ಗಳ ರೂಪುರೇಷೆಗಳನ್ನು ಅಮೆರಿಕಾ ತೀರ್ಮಾನಿಸುತ್ತಿತ್ತಾದರೂ ಸ್ಥಳೀಯವಾಗಿ ಇಲ್ಲೆಲ್ಲೂ ಹಣ ಮಾಡುವ ದಾರಿ ಹುಡುಕಲಿಲ್ಲ. ಅವರು ಹಣಕಾಸು ಮಂತ್ರಿಯಾಗಿದ್ದಾಗೊಮ್ಮೆ ವಿಪ್ರೋ ಕಂಪನಿಯ ಅಜೀಂ ಪ್ರೇಂಜಿ ಭೇಟಿಯಾಗಿ ತೆರಿಗೆ ಕಡಿಮೆ ಮಾಡುವಂತೆ ಕೇಳಿದಾಗ ಸಿದ್ದರಾಮಯ್ಯ "ಅಲ್ರೀ, ಪ್ರತಿ ಮೂರು ತಿಂಗಳಿಗೊಮ್ಮೆ ಸಾವಿರಾರು ಕೋಟಿ ರೂಪಾಯಿ ಲಾಭ ಬಂತು ಅಂತಾ ಅನೌನ್ಸ್ ಮಾಡ್ತೀರಿ. ಆ ಲಾಭದ ಒಂದಂಶವನ್ನು ತೆರಿಗೆಯಾಗಿ ಕೊಡಿ ಸಾಕು, ಆ ಹಣ ಬಡವರ ನೆರವಿಗೆ ಖರ್ಚಾಗುತ್ತೆ" ಅಂದು ಕಳಿಸಿದ್ದರು.

ಸಿದ್ದರಾಮಯ್ಯ ಜಾಗಕ್ಕೆ ಬೇರೆಯವರು ಬಂದ ಮೇಲೆ ಇಂತಾ ಸನ್ನಿವೇಶ ಬಂದಾಗೆಲ್ಲಾ "ನಂಗೆಷ್ಟು ಕೊಡ್ತೀಯಾ?" ಎನ್ನುತ್ತಾ ನೇರವಾಗಿ ಡೀಲು ಕುದುರಿಸಲು ಹೊರಡುತ್ತಿದ್ದಾರೆ.

ಇವೆಲ್ಲಾ ಚುನಾವಣಾ ರಾಜಕೀಯ, ಭ್ರಷ್ಟಾಚಾರಗಳ ವಿಚಾರವಾಯಿತು. ಆದರೆ ಅದರಾಚೆಗೂ ಸಿದ್ದರಾಮಯ್ಯ ಗಮನದಲ್ಲಿಟ್ಟುಕೊಳ್ಳಬೇಕಾದ ಇನ್ನೂ ಹಲವು ಸಂಗತಿಗಳಿವೆ.

ನಾವೆಲ್ಲಾ ಗಮನಿಸುತ್ತಿರುವಂತೆ ಇವತ್ತಿನ ಕರ್ನಾಟಕದ ರಾಜಕೀಯವು ಜಾತಿ ಧ್ರುವೀಕರಣದ ಹೊಸ ರೂಪ ಪಡೆಯುತ್ತಿದೆ. ಲಿಂಗಾಯತರಿಗೆ ಕೆಜೆಪಿ, ಒಕ್ಕಲಿಗರಿಗೆ ಜೆಡಿಎಸ್ ಹಾಗೂ ಬ್ರಾಹ್ಮಣರಿಗೆ ಬಿಜೆಪಿ ಎಂಬ ಸನ್ನಿವೇಶ ನಿರ್ಮಾಣವಾಗುತ್ತಿದೆ. ಇಲ್ಲಿ ಈಗ ತಮಗಾಗಿ ಒಂದು ರಾಜಕೀಯ ಪಕ್ಷ ಅಂತ ಇಲ್ಲದಿರುವುದು ಹಿಂದುಳಿದ ದಲಿತ ಮತ್ತು ಅಲ್ಪಸಂಖ್ಯಾತ ಸಮುದಾಯಗಳಿಗೆ. ಆದರೆ ಇವರಿಗೆ ಒಂದು ಪಕ್ಷ ಇರದಿದ್ದಾಗಲೂ ಒಬ್ಬ ನಾಯಕನನ್ನಂತೂ ಕಂಡುಕೊಳ್ಳಲು ಬಯಸಿದ್ದರು. ಅರ್ಥಾತ್ ಸಿದ್ದರಾಮಯ್ಯನವರಿಗೆ ಆ ಸಾಧ್ಯತೆ ಆಗ ಇತ್ತು.

2005 ರಲ್ಲಿ ಧರ್ಮಸಿಂಗ್ ಸರ್ಕಾರದಲ್ಲಿ ಸಿದ್ದರಾಮಯ್ಯ ಉಪಮುಖ್ಯಮಂತ್ರಿಯಾಗಿದ್ದಾಗ ಆಗಿನ್ನು ಈಗಿನಂತೆ ಮೇಲ್ಜಾತಿಗಳ ರಾಜಕೀಯ ಧ್ರುವೀಕರಣದ ಸನ್ನಿವೇಶ ಇರಲಿಲ್ಲ. 2005 ರ ಜುಲೈ 16 ರಂದು ಹುಬ್ಬಳ್ಳಿಯಲ್ಲಿ ನಡೆದ 'ಅಹಿಂದಾ ರ್ಯಾಲಿ'ಗೆ ಲಕ್ಷಾಂತರ ಜನ ಬಂದಿದ್ದರು. ಅದೇ ರೀತಿ ಅಹಿಂದಾ ರ್ಯಾಲಿಗಳು ಹಾಸನ, ಮೈಸೂರು, ತುಮಕೂರು, ದಾವಣಗೆರೆ, ರಾಯಚೂರು, ಚಿತ್ರದುರ್ಗಗಳಲ್ಲೂ ನಡೆದವು. ಎ.ಕೆ.ಸುಬ್ಬಯ್ಯ, ಡಾ.ಹೆಚ್.ಸಿ. ಮಹಾದೇವಪ್ಪ ಉಗ್ರಪ್ಪ ಸತೀಶ್ ಜಾರಕಿಹೊಳಿ, ಬಸವರಾಜ ಬೊಮ್ಮಾಯಿ, ಸಿ.ಎಂ.ಇಬ್ರಾಹಿಂ ಸೇರಿದಂತೆ ಅನೇಕ ನಾಯಕರು ಅವತ್ತು ಸಿದ್ದರಾಮಯ್ಯನವರ ನಾಯಕತ್ವ ಒಪ್ಪಿಕೊಂಡು ಭಾಗವಹಿಸಿದ್ದರು. ಸಿದ್ದರಾಮಯ್ಯ ಆವಾಗ ಗಟ್ಟಿ ಮನಸ್ಸು ಮಾಡಿದಿದ್ದರೆ, ಧೈರ್ಯವಾಗಿ ಮುಂದಡಿ ಇಟ್ಟಿದಿದ್ದರೆ ಇವತ್ತು ನಾವು ನೋಡುತ್ತಿರುವ ಮೇಲ್ಜಾತಿ-ಮೇಲ್ವರ್ಗಗಳ ರಾಜಕೀಯ ಧ್ರುವೀಕರಣ ಆಗುವುದು ಅಷ್ಟು ಸುಲಭವಾಗುತ್ತಿರಲಿಲ್ಲ. ದೇವರಾಜ ಅರಸರ ನಂತರ ಎರಡು ದಶಕಗಳಾದ ಮೇಲೆ ತಲೆ ಎತ್ತಬಹುದಾಗಿದ್ದ

>>>5

ಗುಲ್ಬರ್ಗಾದ ವೈದ್ಯಮಿತ್ರ ಡಾ.ಗುಬ್ಬಿ

ಕಳೆದ ವಾರ ಎಂಥದ್ದೋ ಕೆಲಸಕ್ಕಾಗಿ ಗುಲಬರ್ಗಾಗೆ ಹೋಗಿದ್ದಾಗ ವಕೀಲ ಮಿತ್ರ ವಿಲಾಸ್‌ಕುಮಾರ್ ಮನೆಯಲ್ಲಿ ಡಜನ್‌ಗಟ್ಟಲೆ ಸ್ನೇಹಿತರ ಭೇಟಿ, ಹರಟೆ ಎಲ್ಲಾ ನಡೆದವು. ಬರಹಗಾರ ಮಿತ್ರ





ವಿಕ್ರಮ್ ವಿಸಾಜಿ ಮತ್ತವರ ಸ್ನೇಹಿತರೊಂದಿಗೆ ಕನ್ನಡ ಸಾಹಿತ್ಯ ಅದು ಇದೆಂದು ಹರಟಿದ ಮೇಲೆ ಒಬ್ಬರಾದ ಮೇಲೊಬ್ಬರಂತೆ ವಿಲಾಸ್ ಮನೆಗೆ ಬಂದಿಳಿದಿದ್ದ ಡಾಕ್ಟರ್‌ಗಳ ತಂಡ: ನಮ್ಮಲ್ಲೊಬ್ಬರಿಗೆ ಹಲ್ಲು ನೋವೆಂದು, ಮತ್ತೊಬ್ಬರಿಗೆ ಕುತ್ತಿಗೆ ನೋವೆಂದು ಮಾತಿನ ನಡುವೆ ಹೇಳಿದ್ದೇ ಸಾಕಾಯಿತು. ವಿಲಾಸ್ ಗುಲಬರ್ಗಾದ ದೊಡ್ಡ ವೈದ್ಯರಿಗೆಲ್ಲಾ ಕರೆ ಕಳುಹಿಸಿ ಮನೆಗೆ ಬರಮಾಡಿಕೊಂಡಿದ್ದರು. ಡೆಂಟಿಸ್ಟ್, ಫಿಜಿಶಿಯನ್, ಆರ್ಥೋಪಿಡಿಸ್ಟ್ ವೈದ್ಯ ಮಿತ್ರರು ಬಂದು ಮಾತಾಡುತ್ತಾ ಕುಳಿತಾಗ ವಿಲಾಸ್ 'ಬೇಕೆಂದರೆ ಫೊರೆನ್ಸಿಕ್ ತಜ್ಞರು ನಮಗೆ ಗೊತ್ತು' ಅಂದರು ನಗುತ್ತಾ, ನಾವು "ಸದ್ಯಕ್ಕೆ ಬೇಡ" ಎಂದು ಎಲ್ಲರನ್ನೂ ಪುನಃ ನಗಿಸಿದೆವು.

ಅಲ್ಲೆ ನಮಗೆ ಡಾ. ಎಸ್.ಎಸ್. ಗುಬ್ಬಿಯವರ ಪರಿಚಯವಾದದ್ದು. ಗುಲಬರ್ಗಾದ ಪ್ರಖ್ಯಾತ ಆರ್ಥೋಪಿಡಿಶಿಯನ್ ಆಗಿರುವ ಡ್ಯಾ. ಗುಬ್ಬಿ ಸಂಕೋಚದಿಂದಲೇ ತಮ್ಮ ಹೊಸ ಹಾಗೂ ಮೊದಲ ಕವನಸಂಕಲನ 'ಚೈತನ್ಯ'ವನ್ನು ಓದಲು ಕೊಟ್ಟರು. ಅನಗತ್ಯ ಬೌದ್ಧಿಕ ಪಾಂಡಿತ್ಯ ತೋರದೆ, ವೈದ್ಯಲೋಕದಲ್ಲಿ ತಾವು ಕಂಡದ್ದನ್ನೂ ಅನಾರೋಗ್ಯವನ್ನೂ ಹಾವಾಗಿಯೇ ಆಹ್ವಾನಿಸಿಕೊಳ್ಳುವ ಹುಲುಮಾನವರ ಪೇಚಾಟಗಳನ್ನು ತಮ್ಮದೇ ಆದ ಸರಳಶೈಲಿಯಲ್ಲಿ ಡಾ. ಗುಬ್ಬಿ ಬರೆಯುತ್ತಾರೆ. ಬಸವರಾಜ ಕಲೆಗಾರ್ ಎಂಬ ಯುವ ಕಲಾವಿದ ಈ ಸಂಕಲನಕ್ಕೆ ಹಲವು ರೇಖಾಚಿತ್ರಗಳನ್ನು ರಚಿಸಿದ್ದಾರೆ. ಅವಷ್ಟೂ ಅದ್ಭುತವಾಗಿದೆ. ಸದ್ಯಕ್ಕೆ ಹಂಪೆ ವಿಶ್ವವಿದ್ಯಾಲಯದಲ್ಲಿ ಕಲಿಯುತ್ತಿರುವ ಕಲೆಗಾರ್ ಕರ್ನಾಟಕದ ಅಗ್ರಮಾನ್ಯ ಯುವ ಕಲಾವಿದರಾಗುವ ದಿನ ದೂರವಿಲ್ಲ ಎನಿಸುತ್ತದೆ. ಡಾ. ಗುಬ್ಬಿ ಪ್ರಖ್ಯಾತ ವೈದ್ಯರಾಗಿ ಕೀರ್ತಿ-ಹಣ ಎಲ್ಲಾ ಪಡೆದಿದ್ದರೂ ಅವರೀಗಲೂ ಸರಳ ಹಳ್ಳಿಗನಂತಿದ್ದಾರೆ. ಅವರ ಯೋಚನೆ, ಬರಹಗಳೂ ಕೂಡಾ ತಮ್ಮ ಹಳ್ಳಿಯ ಸಾಮಾನ್ಯ ಜನರ ಬಗ್ಗೆಯೇ ಇರುವುದು ನೋಡಿ ನಮಗೆಲ್ಲ ಬೆರಗನ್ನಿಸಿದ್ದು ನಿಜ.

...ಯಡಿಯೂರಪ್ಪರೊಂದಿಗೆ ಹೀಗೊಂದು ಸಂದರ್ಶನ

ಆ ...ವತ್ತು ಮಧ್ಯಾಹ್ನ ಸ್ವಲ್ಪ ಬಿಡುವಿತ್ತಾದ್ದರಿಂದ ಇಂಗ್ಲಿಷ್ ...ಕೆಯೊಂದನ್ನು ಓದುತ್ತಾ ಕೂತಿದ್ದೆ. ನನ್ನ ಮೊಬೈಲ್ ...ನ್ ರಿಂಗಾಯಿತು. ಫೋನ್ ಮಾಡಿದ್ದವರ ನಂಬರ್ ...ರಿಚಿತವಾಗಿತ್ತು, ನಾನು "ಹಲೋ?" ಎಂದಾಗ ಅತ್ತ ... ಇದ್ದವರು "ನಮಸ್ಕಾರ ಸಹೋದರಿ ಗೌರಿ ಅವರಿಗೆ. ...ಸ್ ಹಬ್ಬದ ಶುಭಾಷಯಗಳು" ಎಂದರು.

... ಯಾರದ್ದು ಈ ದನಿ, ಎಲ್ಲೋ ಕೇಳಿದಂತಿದೆಯಲ್ಲಾ ...ಮ ಯೋಚಿಸುತ್ತಲೇ "ನಮಸ್ಕಾರ. ತಮಗೂ ಕ್ರಿಸ್ಮಸ್ ...ಬ್ಬದ ಶುಭಾಶಯಗಳು. ತಾವು ಯಾರೆಂದು ...ಬಹುದೇ?" ಎಂದೆ.

"ನಾನು ಯಡಿಯೂರಪ್ಪ" ಎಂದಿತು ದನಿ.

"ಓ. . . . ಏನು ಸಮಾಚಾರ? ಹೇಗಿದ್ದೀರಿ? ...ಮ್ಮನ್ನು ಸಂದರ್ಶಿಸಬೇಕು, ಅಪಾಯಿಂಟ್‌ಮೆಂಟ್ ಕೊಡಿ ...ದು ನಿಮ್ಮ ಮಗ ವಿಜಯೇಂದ್ರರಿಗೆ ನಮ್ಮ ತಂಡ ...ತ್ತು. ಆದರೆ ನೀವು ತುಂಬಾ ಬ್ಯುಸಿ ಇದ್ದೀರಿ, ...ಧ್ಯವಾಗುವುದಿಲ್ಲ ಎಂದರಂತೆ ವಿಜಯೇಂದ್ರ. . . ." ...ದೆ ನಾನು.

"ಯಾರಿಗೆ ಯಾವಾಗ ಅಪಾಯಿಂಟ್‌ಮೆಂಟ್ ...ಡಬೇಕು ಅಂತ ಅವನಿಗೆ ಗೊತ್ತಾಗಲ್ಲ, ಪೆದ್ದ ಶಿಖಾಮಣಿ. ...ವಿಜಯೇಂದ್ರ, ರಾಘವೇಂದ್ರ, ಸೋಹನ್ ಕುಮಾರ್.... ...ತಹ ಪುತ್ರರತ್ನರೂ, ಅಳಿಯನೂ ನನಗೆ ...ವುದರಿಂದಲೇ ಅಲ್ಲವೇ ನಾನು ಜೈಲುವಾಸ ...ಭವಿಸುವಂತಾಗಿದ್ದು. ಇವತ್ತು ಸಂಜೆ ಬಿಡುವಿರುತ್ತೇನೆ. ... ಭೇಟಿ ಆಗೋಣ" ಅಂದರು ಯಡಿಯೂರಪ್ಪ.

...ಕರ್ನಾಟಕ ಜನತಾ ಪಕ್ಷದ ಚುಕ್ಕಾಣಿಯನ್ನು ...ದನಂತರ ತಾನು ಈಗ ಸಂಪೂರ್ಣವಾಗಿ ಜಾತ್ಯತೀತ ...ು ಹೇಳುತ್ತಿರುವ ಯಡಿಯೂರಪ್ಪನವರು ನಿಜವಾಗಲೂ ...ಾಗಿದ್ದಾರೆಯೇ ಎಂದು ತಿಳಿದುಕೊಳ್ಳಲು ಅವರನ್ನು ...ರ್ಶಿಸಲು ಇಚ್ಛಿಸಿದ್ದೆವು. ಆದರೆ ಆದು ಸಾಧ್ಯವಾಗಿರಲಿಲ್ಲ. ... ನೋಡಿದರೆ ಅವರೇ ಕರೆಯುತ್ತಿದ್ದಾರೆ. ಹೋಗಿ ... ಆಗೋಣ ಎಂದು ನಾನು ಮತ್ತು ನಮ್ಮ ತಂಡದ ... ಕ್ಯಾಪ್ಟನ್ ಪಾರ್ವತೀಶ ನಿರ್ಧರಿಸಿದೆವು. ನಮ್ಮ ...ಕೆ ಕಳೆದ ಹಲವಾರು ವರ್ಷಗಳಿಂದ ...ಯೂರಪ್ಪನವರನ್ನು, ಅವರು ಪ್ರಮುಖ ಅಂಗವಾಗಿದ್ದ ...ಪಿಯನ್ನು, ಅವರ ಸರ್ಕಾರದ ಭ್ರಷ್ಟಾಚಾರಗಳನ್ನು ...ಲಿಗೆಳೆಯುತ್ತಾ, ಟೀಕಿಸುತ್ತಾ ಬಂದಿದ್ದರೂ ಅವರು ...ಬ್ಬರನ್ನು ಆತ್ಮೀಯವಾಗಿಯೇ ಬರಮಾಡಿಕೊಂಡರು. ...ಡ್ಡದಾದ ಹಾಲ್‌ನಲ್ಲಿ ಸೋಫಾ ಮೇಲೆ ನಮಗೆ ...ಕೊಳ್ಳಲು ಹೇಳಿ ಪಕ್ಕದಲ್ಲೇ ಇದ್ದ ಇನ್ನೊಂದು ...ಫಾ ಮೇಲೆ ಆಸೀನರಾದರು ಯಡಿಯೂರಪ್ಪ.

"ನಾವಿಬ್ಬರೂ ಮುಖತಃ ಭೇಟಿಯಾಗಿ ಹಲವಾರು ...ಗಳೇ ಆಗಿವೆಯಲ್ಲವೇ?" ಎಂದು ಹೇಳುತ್ತಾ ಅವರ ...ಯಕರು ನಮ್ಮ ಮುಂದಿಟ್ಟಿದ್ದ ಕಾಫೀ ಮತ್ತು ...ಡಂಬಿಯನ್ನು ಸ್ವೀಕರಿಸುವಂತೆ ಕೋರಿದರು.

"ವರ್ಷಗಳಲ್ಲ, ದಶಕಗಳೇ ಆಗಿವೆ. ನಾವು ಮೊದಲ ... ಕೊನೆ ಬಾರಿಗೆ ನಿಮ್ಮನ್ನು ಭೇಟಿ ಆಗಿದ್ದು ಪ್ಯಾಲೆಸ್ ...ಡ್ಸ್ ಹತ್ತಿರವಿದ್ದ ನಿಮ್ಮ ಸರ್ಕಾರಿ ಮನೆಯಲ್ಲಿ. ಅದು ...3ರ ಆರಂಭದ ತಿಂಗಳುಗಳು. ಅವತ್ತು ನೀವು ನನ್ನ ...ದೆ ಕುರ್ಚಿಯಲ್ಲಿ ಕೂತಿದ್ದರೆ ನಿಮ್ಮ ಪಕ್ಕ ನಿಮ್ಮ ...ಯಕನಂತೆ, ಸೇವಕನಂತೆ ಅನಂತಕುಮಾರ್ ...ದ್ದರು...." ಎಂದು ನೆನಪಿಸಿಕೊಂಡೆ.

ಅನಂತಕುಮಾರ್ ಹೆಸರು ಕೇಳುತ್ತಿದ್ದಂತೆ ...ಯೂರಪ್ಪನವರ ಮುಖ ಕೆಂಪೇರಿತು. "ನೋಡಿ, ...ಡಿ. ಅವತ್ತು ಹೇಗಿದ್ದ, ಇವತ್ತು ಹೇಗಾಗಿದ್ದಾನೆ..... ...ವಿರುದ್ಧ ಪಿತೂರಿ ನಡೆಸಿ ನಾನು ಮುಖ್ಯಮಂತ್ರಿ ...ಂದ ಕೆಳಗಿಳಿಯುವಂತೆ ಮಾಡಿದ್ದೇ ಅವನು. ಇರಲಿ ... ಬಿಜೆಪಿಗೆ ತಾಕತ್ತಿದ್ದರೆ ಬರುವ ಚುನಾವಣೆಯಲ್ಲಿ ...ತಕುಮಾರನೇ ಬಿಜೆಪಿಯ ನಾಯಕ, ಆತನೇ ಮುಂದಿನ ಮುಖ್ಯಮಂತ್ರಿ ಎಂದು ಘೋಷಿಸಲಿ. ಆ ಪಕ್ಷಕ್ಕೆ ಹತ್ತು ಸೀಟ್ ಬಂದರೆ ನನ್ನಾಣೆ" ಎಂದು ಗುಡುಗಿದರು.

"ಅವತ್ತು ನಮ್ಮಿಬ್ಬರ ನಡುವೆ ಇನ್ನೊಂದು ಮುಖ್ಯ ವಿಚಾರ ಕುರಿತು ಚರ್ಚೆ ನಡೆದಿತ್ತು, ಅಯೋಧ್ಯೆಯಲ್ಲಿದ್ದ ಬಾಬ್ರಿ ಮಸೀದಿಯನ್ನು ಸಂಘ ಪರಿವಾರ ಕೆಡವಿದ್ದನ್ನು ನೀವು ಸಮರ್ಥಿಸಿಕೊಂಡಿದ್ದಲ್ಲದೆ ನಿಮ್ಮ ಅಭಿಪ್ರಾಯದೊಂದಿಗೆ ನನ್ನ ಸಮ್ಮತಿಯೂ ಇದೆ ಎಂಬಂತೆ ಮಾತನಾಡಿದ್ದಿರಿ. ಆಗ ನಾನು ನನ್ನ ವಿರೋಧವನ್ನು ವ್ಯಕ್ತಪಡಿಸಿದ್ದೆ. ಅದರಿಂದ ನಿಮಗೆ ಒಂದಿಷ್ಟು ಕಸಿವಿಸಿ ಆಗಿತ್ತು" ಎಂದು ನೆನಪಿಸಿದೆ.

"ಹೌದು ಗೌರಿಯವರೆ. ಬಾಬ್ರಿ ಮಸೀದಿಯನ್ನು ಕೆಡವಿದ್ದರ ಬಗ್ಗೆ ನಿಮಗೆ ಆದಷ್ಟೇ ನೋವು ನನಗೂ ಆಗಿತ್ತು. ಆದರೆ ಏನು ಮಾಡುತ್ತೀರಾ? ಬಿಜೆಪಿಯಲ್ಲಿ ನಾನು ಆಗ ಇದ್ದಿದ್ದರಿಂದ ನಾನು ಆ ಪಕ್ಷದ ನೀತಿಯನ್ನೇ ಪಾಲಿಸುವುದು ಅನಿವಾರ್ಯವಾಗಿತ್ತು. ನನ್ನ ಹೃದಯ ಈ ದೇಶದ ಅಲ್ಪಸಂಖ್ಯಾತರ ಸ್ಥಿತಿಗತಿ, ಆತಂಕ, ನೋವುಗಳೊಂದಿಗೆ ಮಿಡಿಯುತ್ತಿದ್ದರೂ ನನ್ನ ನಾಲಿಗೆ ಮಾತ್ರ ಅದರ ವಿರುದ್ಧ ಮಾತನಾಡುತ್ತಿತ್ತು. ಆಗ ನಾನು ತುಂಬಾ ನೋವು ಅನುಭವಿಸಿದೆ" ಎಂದು ಹೇಳುತ್ತ ಯಡಿಯೂರಪ್ಪ ತಮ್ಮ ಹ್ಯಾಂಡ್ ಕರ್ಚೀಫಿನಿಂದ ತಮ್ಮ ಕಣ್ಣುಗಳ ಅಂಚಿನಲ್ಲಿ ಮೂಡಿದ್ದ ನೀರನ್ನು ಒರೆಸಿಕೊಂಡರು.

ಕಾಫೀ ಹೀರುತ್ತಿದ್ದ ಪಾರ್ವತೀಶ ಅವರು "ಬಾಬ್ರಿ ಮಸೀದಿ ಇದ್ದ ಜಾಗದಲ್ಲಿ ರಾಮ ದೇವಸ್ಥಾನವನ್ನು ಕಟ್ಟಬೇಕೆಂಬುದು ಬಿಜೆಪಿಯ ನಿಲುವು. ಈ ಬಗ್ಗೆ ನಿಮ್ಮ ಮತ್ತು ನಿಮ್ಮ ಕೆಜೆಪಿ ಪಕ್ಷದ ನಿಲುವೇನು?" ಎಂದು ಕೇಳಿದರು.

"ನೋಡಿ, ಇತಿಹಾಸವನ್ನು ಮರು ಸೃಷ್ಟಿಮಾಡಲಾಗುವುದಿಲ್ಲ. ಆದ್ದರಿಂದ ನಾವು ಹೊಸ ಇತಿಹಾಸವನ್ನು ನಿರ್ಮಿಸಲು ಆಶಿಸುತ್ತೇವೆ. ನಮ್ಮ ಪ್ರಕಾರ ಮಸೀದಿ ಇದ್ದ ಜಾಗದಲ್ಲಿ ಮಹಾತ್ಮ ಗಾಂಧಿ, ಜಯಪ್ರಕಾಶ್ ನಾರಾಯಣ್ ಮತ್ತು ಅಂಬೇಡ್ಕರ್ ಅವರ ಪ್ರತಿಮೆಗಳನ್ನು ಸ್ಥಾಪಿಸಬೇಕು. ಆ ಮೂಲಕ ನಮ್ಮ ದೇಶದ ಜಾತ್ಯತೀತ ಪರಂಪರೆಯನ್ನು ಒತ್ತಿಹೇಳಬೇಕು" ಎಂದು ಉತ್ತರಿಸಿದರು ಯಡಿಯೂರಪ್ಪ.

"ನೀವು ಕಳೆದ ನಲವತ್ತು ವರ್ಷಗಳ ಕಾಲ ಆರೆಸ್ಸೆಸ್ ಸಿದ್ಧಾಂತವನ್ನೇ ಅನುಸರಿಸಿಕೊಂಡು ಬಂದವರು. ಆದರೀಗ ನಿಮ್ಮ ಹೊಸ ಪಕ್ಷ ಮತ್ತು ಆರೆಸ್ಸೆಸ್ ಸಿದ್ಧಾಂತದ ನಡುವೆ ಎಂತಹ ನಂಟಿದೆ?" ಪಾರ್ವತೀಶರ ಪ್ರಶ್ನೆ.

"ನೋಡಿ, ನನ್ನ ತಾಯಿಯಾಣೆ ಆಗ ವಿಧಿ ಇಲ್ಲದೆ ನಾನು ಆರೆಸ್ಸೆಸ್ ಮತ್ತು ಬಿಜೆಪಿಯನ್ನು ಸೇರಿಕೊಂಡೆ. ಯಾಕೆಂದರೆ ಆಗ ಕಾಂಗ್ರೆಸ್‌ನಲ್ಲಿ ವೀರೇಂದ್ರ ಪಾಟೀಲ್, ರಾಜಶೇಖರ ಮೂರ್ತಿ ತರಹದ ದಿಗ್ಗಜರು ಇದ್ದರು. ಇನ್ನು ವಿರೋಧಿ ಪಾಳಯದಲ್ಲಿ ಜೆ.ಎಚ್.ಪಟೇಲ್ ತರಹದವರು ಆಗಲೇ ತಮ್ಮ ಛಾಪನ್ನು ಮೂಡಿಸಿದ್ದರು. ಅಂತಹ ಪರಿಸ್ಥಿತಿಯಲ್ಲಿ ನಾನು ಆ ಪಕ್ಷಗಳನ್ನು ಸೇರಿದ್ದರೆ ನನಗೆ ಭವಿಷ್ಯವಿರಲಿಲ್ಲ, ಆ ಕಾರಣಕ್ಕೇ ನಾನು ಬಿಜೆಪಿಯನ್ನು ಸೇರಿದನೇ ಹೊರತು ಸ್ವಂತ ಇಚ್ಛೆಯಿಂದಾಗಲಿ, ಸೈದ್ಧಾಂತಿಕ ಮೆಚ್ಚುಗೆಯಿಂದಾಗಲಿ ಅಲ್ಲವೇ ಅಲ್ಲ. ನಾನು ಲಿಂಗಾಯತ. ಶರಣರು ಸಾರಿದ ಸಹಬಾಳ್ವೆ, ಸಮಬಾಳು, ಸಮಪಾಲು ಆದರ್ಶಗಳಲ್ಲಿ ನಂಬಿಕೆ ಇಟ್ಟಿರುವವನು. ಹಾಗಿರುವಾಗ ನನಗೆ ಅದು ಹೇಗೆ ಪುರೋಹಿತಶಾಹಿ ಬಿಜೆಪಿಯ ಸಿದ್ಧಾಂತ ಇಷ್ಟವಾಗಲು ಸಾಧ್ಯ. ನಿಮ್ಮ ಪ್ರಶ್ನೆಗೆ ಉತ್ತರ ಏನೆಂದರೆ ನಮ್ಮ ಕೆಜೆಪಿಗೆ ಶರಣರ ಆದರ್ಶಗಳೇ ಮುಖ್ಯ ಹೊರತು ರಾಷ್ಟ್ರೋತ್ಥಾನ ಪರಿಷತ್ತಿನ ಪುರೋಹಿತಶಾಹಿ ಧೋರಣೆ ಅಲ್ಲ" ಎಂದು ದಿಟ್ಟವಾಗಿ ಉತ್ತರಿಸಿದರು ಯಡಿಯೂರಪ್ಪ.



ಕಂಡಹಾಗೆ

editorlankesh@gmail.com • ಗೌರಿ ಲಂಕೇಶ್

"ಆರೆಸ್ಸೆಸ್ ಅನ್ನು ಹುಟ್ಟುಹಾಕಿದ, ಮಹಾತ್ಮ ಗಾಂಧಿ ಅವರ ಕೊಲೆಯಲ್ಲಿ ಆರೋಪಿಯೂ ಆಗಿದ್ದ ವಿ.ಡಿ.ಸಾವರ್ಕರ್ ಬಗ್ಗೆ ನಿಮ್ಮ ಈಗಿನ ಅಭಿಪ್ರಾಯವೇನು? ಈಗಲೂ ನೀವು ಅವರನ್ನು ಮೆಚ್ಚುತ್ತೀರಾ?" ಎಂದು ನಾನು ಕೇಳಿದೆ.

"ಸಹೋದರಿ ಗೌರಿಯವರೆ, ಗಾಂಧಿಯೇ ನಮ್ಮ ನೂತನ ಪಕ್ಷದ ಪ್ರೇರಣೆ ಎಂದು ಸಾರ್ವಜನಿಕವಾಗಿ ಘೋಷಿಸಿರುವಾಗ ಅವರ ಪ್ರಾಣವನ್ನೇ ತೆಗೆದುಕೊಂಡ ಸಾವರ್ಕರ್ ಅವರ ಸಿದ್ಧಾಂತವಾಗಲಿ, ವ್ಯಕ್ತಿತ್ವವಾಗಲಿ ನಮಗೆ ಹೇಗೆ ಆಪ್ತವಾಗುತ್ತವೆ, ನೀವೇ ಹೇಳಿ" ಎಂದು ಮರುಪ್ರಶ್ನೆ ಹಾಕಿದರು.

"ನೀವು ಮುಖ್ಯಮಂತ್ರಿ ಆಗಿದ್ದಾಗ ರಾಜ್ಯದ ಶಾಲೆ ಕಾಲೇಜುಗಳಲ್ಲಿ ಭಗವದ್ಗೀತೆ ಪಠಣವನ್ನು ಆಯೋಜಿಸಲಾಗಿತ್ತು, ನಾಳೆ ಕೆಜೆಪಿ ಅಧಿಕಾರಕ್ಕೆ ಬಂದರೆ ಅದನ್ನು ನಿಮ್ಮ ಸರ್ಕಾರ ಮುಂದುವರೆಸುತ್ತದೆಯೇ?"

"ಖಂಡಿತವಾಗಿಯೂ ಇಲ್ಲ. ಬದಲಾಗಿ ಶರಣರ ವಚನಗಳನ್ನು ಹೇಳಿಕೊಡುತ್ತೇವೆ."

"ನೀವು ಅಧಿಕಾರದಲ್ಲಿದ್ದಾಗ ಜಾನುವಾರು ಹತ್ಯಾ ನಿಷೇಧ ಕಾಯ್ದೆಯನ್ನು ಜಾರಿಗೆ ತರಲು ಪ್ರಯತ್ನಿಸಿದಿರಿ. ನಮ್ಮ ಪ್ರಕಾರ ಆ ಕಾಯಿದೆಯು ಬರೀ ಅಲ್ಪಸಂಖ್ಯಾತರ ವಿರುದ್ಧದ ಕಾಯಿದೆಯಾಗಿರಲಿಲ್ಲ, ಅದಕ್ಕಿಂತ ಮುಖ್ಯವಾಗಿ ಅದು ರೈತರನ್ನೇ ನಾಶಮಾಡುವಂತಹ ಕಾಯಿದೆಯಾಗಿದೆ. ಈ ಕುರಿತು ಈಗಿನ ನಿಮ್ಮ ಅಭಿಪ್ರಾಯವೇನು?"

"ನಾನು ತುಂಬಾ ತಪ್ಪು ಮಾಡಿಬಿಟ್ಟೆ. ಯಾವಾಗ ಜಾನುವಾರು ಹತ್ಯೆ ನಿಷೇಧ ಕಾಯಿದೆಯಿಂದ ನಮ್ಮ ನಾಡಿನ ರೈತರಿಗೆ ಕಷ್ಟವಾಗುತ್ತೆ ಎಂದು ನನಗೆ ಅರ್ಥವಾಯಿತೋ ಅವತ್ತು ನಾನು ಪ್ರಮಾಣವಚನ ಸ್ವೀಕರಿಸಿದಾಗ ಹೊದ್ದುಕೊಂಡಿದ್ದ ಹಸಿರು ಶಾಲನ್ನು ಇಟ್ಟುಕೊಂಡು ಬಿಕ್ಕಿಬಿಕ್ಕಿ ಅತ್ತೆ. ಕೆಜೆಪಿ ಅಧಿಕಾರಕ್ಕೆ ಬಂದಾಗ ನಾವು ಅದನ್ನು ರೈತಪರ ಕಾಯಿದೆಯಾಗಿ ಬದಲಾಯಿಸುತ್ತೇವೆ."

"ನಿಮ್ಮ ಸರ್ಕಾರ ಆರೆಸ್ಸೆಸ್ಸಿಗೆ ಮತ್ತು ಅದರ ಇತರೆ ಅಂಗಸಂಸ್ಥೆಗಳಿಗೆ ರಾಜ್ಯದಾದ್ಯಂತ ಕಡಿಮೆ ದರದಲ್ಲಿ ಭೂಮಿಯನ್ನು, ಕಟ್ಟಡಗಳನ್ನು, ಇತರೆ ಸವಲತ್ತುಗಳನ್ನು ಕೊಟ್ಟಿತ್ತು, ಅದರ ಬಗ್ಗೆ ನಿಮಗೆ ಈಗ ಹೇಗನಿಸುತ್ತದೆ?" ಎಂದು ಕೇಳಿದೆವು.

"ಪಾಪಪ್ರಜ್ಞೆ ನನ್ನನ್ನು ಕಿತ್ತು ತಿಂದುಹಾಕುತ್ತಿದೆ. ನೋಡಿ ಅವರು ನನ್ನನ್ನು ಉಪಯೋಗಿಸಿಕೊಂಡು ಲಾಭ ಮಾಡಿಕೊಂಡರು. ಆಚಾರ ಹೇಳೋಕೆ ಬದನೆಕಾಯಿ ತಿನ್ನೋಕೆ ಎಂಬಂತೆ ಅವರು ರಾಷ್ಟ್ರಸೇವಕರಂತೆ ಪೋಸು ಕೊಟ್ಟುಕೊಂಡು ಭಾರಿ ಆಸ್ತಿ ಲಪಟಾಯಿಸಿದರು. ನಾನು ಮತ್ತೆ ಮುಖ್ಯಮಂತ್ರಿ ಆದಾಗ ಅವರ ಇಂತಹ ಹೀನಕೃತ್ಯಗಳನ್ನು ಕುರಿತು ಒಂದು ವೈಟ್‌ಪೇಪರ್ ಪ್ರಕಟಿಸುತ್ತೇನೆ."

"ನಮ್ಮ ನಾಡಿನ ಸೌಹಾರ್ದ ಪರಂಪರೆಯ ಸಂಕೇತದಂತಿರುವ ಬಾಬಾಬುಡನ್ ದರ್ಗಾವನ್ನು ದೇವಸ್ಥಾನವಾಗಿ ಪರಿವರ್ತಿಸಬೇಕೆಂಬುದು ಬಿಜೆಪಿಯ ಉದ್ದೇಶ. ಇದನ್ನು ನಾಡಿದ ಪ್ರಜ್ಞಾವಂತರೆಲ್ಲರೂ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯಡಿ ಪ್ರತಿಭಟಿಸಿದಾಗ ನೀವು ಉಪಮುಖ್ಯಮಂತ್ರಿಯಾಗಿದ್ದಿರಿ, ನಮ್ಮನ್ನೆಲ್ಲ ಜೈಲಿಗೆ ಕಳುಹಿಸಿದ್ದಿರಿ. ನಿಮ್ಮ ಅಭಿಪ್ರಾಯದಲ್ಲಿ ಆ ದರ್ಗಾ ದೇವಸ್ಥಾನವಾಗಬೇಕೋ ಅಥವಾ ಈಗಿರುವಂತೆ ಸೌಹಾರ್ದದ ತಾಣವಾಗಿರಬೇಕೋ?"

"ಸದ್ಯದಲ್ಲೇ ನಾನು ಮತ್ತು ನನ್ನ ಹೊಸ ಫ್ರೆಂಡ್ ಜನಾಬ್ ಜಬ್ಬರ್ ಖಾನ್ ಹೊನ್ನಾಳಿ ಅವರು ಜೊತೆಜೊತೆಯಾಗಿ ಬಾಬಾಬುಡನ್ ದರ್ಗಾಕ್ಕೆ ಹೋಗಿ ಅಲ್ಲಿನ ಮುಜಾವರರಿಂದ ಆಶೀರ್ವಾದ ಪಡೆದು, ಪಾದುಕೆಗಳಿಗೆ ನಮಸ್ಕರಿಸಿ ಬರುತ್ತೇವೆ. ಆಗ ನಿಮಗೆ ಮಾತ್ರವಲ್ಲ ಈ ನಾಡಿದ ಆರು ಕೋಟಿ ಜನರಿಗೂ ಅರ್ಥವಾಗುತ್ತೆ ನಾನು ನಿಮ್ಮೆಲ್ಲರಂತೆ ನಿಜವಾಗಲೂ ಸ್ಯೂಡೊ ಸೆಕ್ಯುಲರ್, ಅಲ್ಲಲ್ಲ, ಸೋಕಾಲ್ಡ್ ಸೆಕ್ಯುಲರ್ ಅಂತ..."

ಯಡ್ಡಿಯ ಈ ಉತ್ತರ ಕೇಳಿ ನಗಬೇಕೋ, ಕೋಪಗೊಳ್ಳಬೇಕೋ ಗೊತ್ತಾಗಲಿಲ್ಲ. ...

ಅದೇ ಹೊತ್ತಿಗೆ ನಮ್ಮ ಆಫೀಸ್ ಅಸಿಸ್ಟೆಂಟ್ ಲಕ್ಷ್ಮಣ ಬಾಗಿಲನ್ನು ತಟ್ಟಿ "ಅಕ್ಕಾ ಕಾಫೀ" ಎಂದು ಕರೆದಾಗ ಅರೆನಿದ್ರೆಯಲ್ಲೇ ನಡೆಸುತ್ತಿದ್ದ ಸಂದರ್ಶನದಿಂದ ಎಚ್ಚರವಾಯಿತು. ಹೊಸ ವರ್ಷದಲ್ಲಾದರೂ ನಮ್ಮ ರಾಜ್ಯಕ್ಕೆ ಒಳ್ಳೆಯದಾಗಲಿ ಎಂದು ಆಶಿಸುತ್ತ ಕಾಫೀ ಹೀರಲಾರಂಭಿಸಿದೆ.

.....



...ಚಿಕೆ-ಮರ್ಯಾದೆ ಬಿಟ್ಟ ಈಶ್ವರಪ್ಪ

...ರಾಜ್ಯದ ಉಪಮುಖ್ಯಮಂತ್ರಿ ಹಾಗೂ ಬಿಜೆಪಿಯ ... ಈಶ್ವರಪ್ಪ ಶತಭ್ರಂಡನೆಂಬುದು ಮತ್ತೆ ಸಾಬೀತಾಗುತ್ತಿದೆ. ...ಈಶ್ವರಪ್ಪನ ಮನೆಯ ಮೇಲೆ ಲೋಕಾಯುಕ್ತ ...ಯಾಗಿದೆ. ಅಲ್ಲಿ ಸಿಕ್ಕಿರುವ ಚಿನ್ನ, ಬೆಳ್ಳಿ, ಕ್ಯಾಷ್ ... ಆಸ್ತಿ ದಾಖಲೆಗಳನ್ನೆಲ್ಲಾ ಗಮನಿಸಿದರೆ ಕಳೆದ ನಾಲ್ಕು



ವರ್ಷದ ಅಧಿಕಾರಾವಧಿಯಲ್ಲಿ ಈತ ಅನ್ನ ತಿನ್ನುವ ಬದಲಾಗಿ ಬರೀ ದುಡ್ಡನ್ನೇ ತಿನ್ನುತ್ತಿದ್ದಿರಬೇಕೆಂಬ ಅನುಮಾನವೂ ಬರುತ್ತಿದೆ.

ಕಳೆದ ಮೂರು ವರ್ಷದಿಂದಲೂ 'ಲಂಕೇಶ್' ಈಶ್ವರಪ್ಪ ಮತ್ತವರ ಕುಟುಂಬದವರ ಅಕ್ರಮ ಆಸ್ತಿ ಗಳಿಕೆಯ ಬಗ್ಗೆ ದಾಖಲೆ ಪುರಾವೆಸಹಿತ ಹಲವು ತನಿಖಾ ವರದಿಗಳನ್ನೂ ಪ್ರಕಟಿಸುತ್ತಾ ಬಂದಿತ್ತು. ಈ ಹಿಂದೆ ದೇವೇಗೌಡರ ಕುಟುಂಬ ಹಾಗೂ ಯಡಿಯೂರಪ್ಪ ಮತ್ತವರ ಪಟಾಲಂನ ಅಕ್ರಮ ವ್ಯವಹಾರಗಳ ಬಗ್ಗೆಯೂ 'ಲಂಕೇಶ್'ನಲ್ಲಿ ತನಿಖಾ ವರದಿಗಳು ಪ್ರಕಟಗೊಂಡಿದ್ದವು. ಅವರೆಲ್ಲಾ ಈಗ 'ಉಪ್ಪು ತಿಂದು ನೀರು ಕುಡಿಯುತ್ತಿದ್ದಾರೆ.'

ಈಗ ಈಶ್ವರಪ್ಪನ ಸರದಿ ಬಂದಿದೆ ಅಷ್ಟೆ. ಈ ಬಿಜೆಪಿಗಳು ಅದೆಂಥ ಭಂಡರೆಂದರೆ ಈಶ್ವರಪ್ಪನ ಮೇಲೆ ಅಕ್ರಮ ಆಸ್ತಿ ಗಳಿಕೆಯ ದೂರು ದಾಖಲಾಗಿದೆ, ಲೋಕಾಯುಕ್ತರ ದಾಳಿಯೂ ಆಗಿದೆ, ರಾಜ್ಯದ ಜನ ಈತನ ಬ್ರಹ್ಮಾಂಡಭ್ರಷ್ಟ ಅವತಾರವನ್ನು ನೋಡುತ್ತಲೂ ಇದ್ದಾರೆ.

ಆದರೂ.....

'ನಾನು ರಾಜೀನಾಮೆ ಕೊಡಲ್ಲ' ಅಂತ ಈಶ್ವರಪ್ಪ ಹೇಳಿದರೆ, ಮುಖ್ಯಮಂತ್ರಿ ಶೆಟ್ಟರ್ "ಈಶ್ವರಪ್ಪ ರಾಜೀನಾಮೆ ನೀಡುವ ಅಗತ್ಯವಿಲ್ಲ, ಪ್ರಕರಣ ಈಗಿನ್ನು ತನಿಖೆಯ ಹಂತದಲ್ಲಿದೆ" ಎನ್ನುತ್ತಿದ್ದಾರೆ.

ಸಾರ್ವಜನಿಕ ಜೀವನದಲ್ಲಿ ರಾಜಕಾರಣಿಗಳು ಪಾಲಿಸಬೇಕಾದ ಕನಿಷ್ಠ ನೀತಿಸಂಹಿತೆಯ ಬಗ್ಗೆಯೂ ಬಿಜೆಪಿಗೆ ನಂಬಿಕೆಯಿಲ್ಲ, ಅಂತಹ ನಂಬಿಕೆ ಇದ್ದಿದ್ದೇ ಆಗಿದ್ದರೆ ನಿರಾಣಿ, ಯಡ್ಡಿ, ರೇಣುಕಾಚಾರ್ಯ, ಕೃಷ್ಣಯ್ಯ ಶೆಟ್ಟಿ, ಈಶ್ವರಪ್ಪ, ಸುರೇಶ್ ಕುಮಾರ್, ಸದಾನಂದ ಗೌಡ, ಸಿ.ಟಿ. ರವಿ, ರಾಮದಾಸ್, ಸೋಮಣ್ಣ ಅಧಿಕಾರದಲ್ಲಿ ಮುಂದುವರೆಯಲು ಹೇಗೆ ಸಾಧ್ಯವಿತ್ತು?

ಮತ್ತೊಂದೆಡೆ ಈಶ್ವರಪ್ಪನ ಭ್ರಷ್ಟಾಚಾರದ ವಿರುದ್ಧ



ಒಂದು ಜುಜುಬಿ ಹೇಳಿಕೆ ಬಿಸಾಡಿರುವ ಕಾಂಗ್ರೆಸ್ ನಾಯಕರು ಮತ್ತೆ ಆಕಳಿಸುತ್ತಾ ಕೂತಿದ್ದಾರೆ.


ಬಿಜೆಪಿ ಭ್ರಷ್ಟರಿಗೆ ಆರ್ಡರ್ ನೀಡಿ ತಯಾರಿಸಿ ತಂದಂತಿಲ್ಲವೆ ವಿರೋಧ ಪಕ್ಷ ಎನಿಸಿಕೊಂಡಿರುವ ಕಾಂಗ್ರೆಸ್.

ಸರ್ಕಾರಿ ಕಾಲೇಜಿನಲ್ಲೊಬ್ಬ ಮಹಾವಂಚಕ

ಹೋಮಿಯೋಪತಿ ಪ್ರಾಂಶುಪಾಲನ ಕಿತಾಪತಿ!

ವ್ಯಕ್ತಿಯಲ್ಲಿ ಆತ ವೈದ್ಯ ಅಧಿಕಾರದಲ್ಲಿ ಸರ್ಕಾರಿ ಹೋಮಿಯೋಪತಿ ಮಹಾವೈದ್ಯಾಲಯದ ಪ್ರಾಂಶುಪಾಲ. ಆದರೆ ಪ್ರವೃತ್ತಿ ಮತ್ತು ಸೈಡ್ ವೃತ್ತಿಗಳಲ್ಲಿ ಮಾತ್ರ ಮಹಾನ್ ಭ್ರಷ್ಟ. ಪ್ರತಿಭಾವಂತ ವಿದ್ಯಾರ್ಥಿಗಳ ಸ್ಕಾಲರ್‌ಶಿಪ್‌ನಿಂದ ಹಿಡಿದು ವಿ.ವಿ.ಯಿಂದ ಬರುವ ಅನುದಾನದವರೆಗೆ ಒಂದೇ ಏಟಿಗೆ, ಯಾವ ಮುಚ್ಚುಮರೆಯೂ ಇಲ್ಲದೆ ಸ್ವಾಹಾ ಮಾಡಿಬಿಡುವ ಇವನಿಂದಾಗಿ ಬೆಂಗಳೂರಿನ ಆ ಸರ್ಕಾರಿ ಕಾಲೇಜು ತಿಂದು ತೇಗುವವರ ಅಡ್ಡೆಯಾಗಿ ಬದಲಾಗಿದೆ. ಅಷ್ಟಕ್ಕೂ ಇವನ ಹೆಸರು ಎ.ಎಲ್. ಪಾಟೀಲ್. ಲಿಂಗಸೂಗೂರು ಎಂ.ಎಲ್.ಎ ಕಮ್ ಮಾಜಿ ಮಂತ್ರಿ ಅಮರೇಗೌಡ ಪಾಟೀಲ್ ಬಯ್ಯಾಪುರನ ದೂರದ ಸಂಬಂಧಿ, ಹತ್ತಿರದ ಚೇಲಾ ಎನ್ನುವುದೇ ಈತನ ಜೀವಾಳ.

2005ರಲ್ಲಿ ಕಾಲೇಜಿಗೆ ಪ್ರಾಂಶುಪಾಲನಾಗಿ ವಕ್ಕರಿಸಿದ ಗಳಿಗೆಯಿಂದ ಪಾಟೀಲ್ ನಡೆಸಿರುವ ಅವ್ಯವಹಾರಗಳು ಒಂದೆರಡಲ್ಲ. ತನಗಿರುವ ಬಯ್ಯಾಪುರನ ಪೊಲಿಟಿಕಲ್ ಸಪೋರ್ಟನ್ನೇ ನೆಪ ಮಾಡಿಕೊಂಡು ರಾಜಾರೋಷವಾಗಿ ಮುಕ್ಕುವ ದಂಧೆಗಿಳಿದಿದ್ದಾನೆ. ಇವನ ಅಕ್ರಮಗಳಿಗೆ ರೋಸಿ ಹೋದವರು ಇಲ್ಲಿಗೆ ಎರಡು ವರ್ಷಗಳ ಹಿಂದೆಯೇ ಈತನ ವಿರುದ್ಧ ಆಯುಷ್ ಇಲಾಖೆಯ ನಿರ್ದೇಶಕರಿಗೆ ದೂರು ನೀಡಿದ್ದರು. ಅದಕ್ಕೆ ಪ್ರತಿಯಾಗಿ ಇಲಾಖೆಯ ಲೆಕ್ಕಾಧಿಕಾರಿ ಶ್ರೀನಿವಾಸ ಮೂರ್ತಿ ನೇತೃತ್ವದಲ್ಲಿ ತನಿಖೆಯೂ ನಡೆದಿತ್ತು.



ಅಮರೇಗೌಡ ಬಯ್ಯಾಪೂರ

ತನಿಖೆಗೆ ಅಂತ ಶ್ರೀನಿವಾಸ ಮೂರ್ತಿ ಜೊತೆಗೆ ನಳಿನಿ ಮತ್ತು ಬಸವರಾಜಯ್ಯ ಎಂಬ ತ್ರಿಸದಸ್ಯರ ತಂಡ ಕಾಲೇಜಿನ ಆವರಣ ಹೊಕ್ಕುತ್ತಿದ್ದಂತೆಯೇ ಪಾಟೀಲಪ್ಪನ ಅವ್ಯವಹಾರದ ಸುಳಿವು ಸ್ಪಷ್ಟವಾಗಿ ಅವರಿಗೆ ಸಿಕ್ಕಿತ್ತು. ಯಾಕಂದರೆ ತಗುಲಿಕೊಳ್ಳಬಹುದೆನ್ನುವ ಕನಿಷ್ಠ ಕಾಳಜಿಯೂ ಇಲ್ಲದ ಪಾಟೀಲನ ಹಗರಣಗಳು ಮೇಲ್ನೋಟಕ್ಕೆ ಸಿಕ್ಕಿಬಿದ್ದಿದ್ದವು ಅಥವಾ ತನಗೆ ಯಾರೂ ಏನೂ ಮಾಡಲಾಗದು ಎಂಬ ದರ್ಪದಿಂದಲೇ ಆತ ಅಗಲ್ಲ ಮೇಯ್ದಿದ್ದಿರಬಹುದು.


ಪ್ರಾಂಶುಪಾಲ ಪಾಟೀಲನ ಅವ್ಯವಹಾರದ ಅಧ್ಯಾಯ ಆರಂಭವಾಗುವುದೇ ವಿದ್ಯಾರ್ಥಿಗಳ ಸುಲಿಗೆಯ ಮೂಲಕ. ಸಾಮಾನ್ಯವಾಗಿ ಯಾವುದೇ ಒಂದು ಕಾಲೇಜಿನ ಅಥವಾ ಕೋರ್ಸ್‌ನ ಶುಲ್ಕವನ್ನು ಸಂಬಂಧಪಟ್ಟ ವಿವಿಗಳೇ ನಿರ್ಧರಿಸುತ್ತವೆ. ಅದಕ್ಕೂ ಮೀರಿ ಕಾಲೇಜಿಗೆ ಹೆಚ್ಚುವರಿ ಅವಶ್ಯಕತೆ ಇದ್ದರೆ ನಿರ್ದೇಶಕರಿಗೆ ಮೇಲ್ಮನವಿ ಸಲ್ಲಿಸಿ, ಸೂಕ್ತ ಸಮಜಾಯಿಷಿ ನೀಡಿ ಹೆಚ್ಚುವರಿ ಶುಲ್ಕಕ್ಕೆ ಅನುಮೋದನೆ ಪಡೆದುಕೊಳ್ಳಬೇಕು. ಆದರೆ ಪಾಟೀಲ್‌ನ ಸುಲಿಗೆ ವೈಖರಿ ಎಂತದ್ದಿತ್ತೆಂದರೆ ಆತ ವಿ.ವಿ.ಯ ಗಮನಕ್ಕೂ ತರದಂತೆ ನಿಗದಿತ ಶುಲ್ಕಕ್ಕಿಂತ ದುಬಾರಿ ಶುಲ್ಕವನ್ನು ವಸೂಲಿ ಮಾಡಿದ್ದ. ಪ್ರತಿ ವಿದ್ಯಾರ್ಥಿಯಿಂದ ಮಿಸಲೇನಿಯಸ್ ಫೀ ಅಂತ ರೂ.1500/-, ಅಲುಮ್ನಿ ಅಸೋಸಿಯೇಷನ್ ಫೀ ಎಂದು 100 ರೂ., ಟೀಚರ್ಸ್ ಬೆನೆಫಿಟ್ ಫಂಡ್ ಹೆಸರಿನಲ್ಲಿ ರೂ.75- ಹೀಗೆ ಮನಸೋ ಇಚ್ಛೆ ದುಬಾರಿ ಶುಲ್ಕಗಳನ್ನು ನಿಗದಿಪಡಿಸಿದ್ದ. ಇದ್ಯಾವ ಮಾಹಿತಿಯೂ ರಾಜೀವ್ ಗಾಂಧಿ ವಿವಿಗೆ ತಿಳಿದೇ ಇರಲಿಲ್ಲ. ಈ ಹೆಚ್ಚುವರಿ ಶುಲ್ಕವನ್ನು ವಿವಿಗೆ ಕಟ್ಟುವ ಬದಲು ಪ್ರಾಂಶುಪಾಲರೇ ಉಪಯೋಗಿಸಿರಬಹುದಾದ ಪಿ.ಡಿ ಖಾತೆಯಲ್ಲಿಟ್ಟುಕೊಂಡು ತನ್ನ ಸ್ವಂತ ಖರ್ಚುಗಳಿಗೆ ಬಳಸಿಕೊಂಡಿದ್ದ.

ಇನ್ನು ಸರ್ಕಾರಿ ಕಾಲೇಜಿನ ಉದ್ಧಾರಕ್ಕೆಂದು ಕೇಂದ್ರ ಸರ್ಕಾರ ಬರೋಬ್ಬರಿ 1 ಕೋಟಿ 50 ಲಕ್ಷಗಳಷ್ಟು ಬೃಹತ್ ಅನುದಾನವನ್ನು ಬಿಡುಗಡೆ ಮಾಡಿತ್ತು. ನಿಯಮದ ಪ್ರಕಾರ ಈ ಹಣವನ್ನು ಪ್ರಾಂಶುಪಾಲ ಮತ್ತು ಕಾರ್ಯದರ್ಶಿ ಇಬ್ಬರೂ ಒಟ್ಟಿಗೆ ವ್ಯವಹರಿಸಬೇಕಾದ ಜಂಟಿ ಖಾತೆಯನ್ನು ಸರ್ಕಾರದ ಖಜಾನೆಯಲ್ಲಿ ತೆರೆದು ಅಲ್ಲಿ ಡಿಪಾಸಿಟ್ ಮಾಡಬೇಕು. ಆದರೆ ಪಾಟೀಲಪ್ಪನ ದೌಲತ್ತೆಂದರೆ, ಕಾರ್ಯದರ್ಶಿಯನ್ನು ಲೆಕ್ಕಕ್ಕೇ ತೆಗೆದುಕೊಳ್ಳದೇ ನಿಯಮಬಾಹಿರವಾಗಿ ಎಸ್.ಬಿ.ಎಂ.ನ ಮಾಗಡಿ ರಸ್ತೆ ಶಾಖೆಯಲ್ಲಿ ಪಿ.ಡಿ. ಖಾತೆಯನ್ನು ತೆರೆದು ಅಲ್ಲಿ ಮಡಗಿದ್ದ. ಕಾರ್ಯದರ್ಶಿಯ ಸಹಿಯೇ ಇಲ್ಲದ ಕಾರಣಬ್ಬನೇ ಬೋಗಸ್ ವೋಚರ್ ಸೃಷ್ಟಿಸಿ ಆ ಹಣವೆಲ್ಲ ಲೂಟಿ ಮಾಡಲು ಪಾಟೀಲ್ ಕಂಡುಕೊಂಡ ಮಾರ್ಗ ಅದಾಗಿತ್ತು. ಆಮೇಲೆ ಆ ಹಣಕ್ಕೆ ಏನು ಗತಿಯಾಯಿತೆಂದು ವಿವರಿಸುವ ಅಗತ್ಯವೇ ಇಲ್ಲ ಬಿಡಿ.

ಈ ಪಾಟೀಲ್ ಪರಾಕ್ರಮ ಕೇವಲ ವಿದ್ಯಾರ್ಥಿ ಮತ್ತು ಕೇಂದ್ರ ಸರ್ಕಾರದ ಅನುದಾನಕ್ಕಷ್ಟೇ ಸೀಮಿತವಾಗಿಲ್ಲ, ಬದಲಾಗಿ ಖುದ್ದು ಆರೋಗ್ಯ ವಿವಿಯಿಂದಲೂ ಸಾಕಷ್ಟು ಗಿಂಜಿಕೊಂಡಿದ್ದಾನೆ. ಪರೀಕ್ಷೆ ನಡೆಸುವ ಸಂದರ್ಭದಲ್ಲಿ ಕರ್ತವ್ಯಕ್ಕೆ ಹಾಜರಾಗುವ ಸಿಬ್ಬಂದಿಗಳಿಗೆ ವಿ.ವಿ.ಯೇ ಗೌರವಧನ ಬಿಡುಗಡೆ ಮಾಡುತ್ತದೆ. 2008 ರಿಂದ 2010ರ ವರೆಗಿನ ಪರೀಕ್ಷೆಯ ಖರ್ಚಗೆಂದು ವಿವಿ 6,31,871 ರೂಪಾಯಿಯ ಚೆಕ್ಕುಗಳನ್ನು ಕಾಲೇಜಿಗೆ ನೀಡಿತ್ತು. ಆದರೆ ಬಟವಾಡೆ ಆಗಿರುವುದು ಕೇವಲ ಮೂರು ಲಕ್ಷ ಮಾತ್ರ. ಅದೂ ಬೋಗಸ್ ಲೆಕ್ಕ. ಬಟವಾಡೆ ಪುಸ್ತಕದಲ್ಲಿ ನಮೂದಾಗಿರುವ ಹಣವನ್ನು ಹೆಚ್ಚಿನ ಮೊತ್ತಕ್ಕೆ ತಿದ್ದಿಕೊಂಡಿದ್ದ ಪಾಟೀಲ್ ಕೆಲವು ಕಡೆ ಪರೀಕ್ಷೆ ಮೇಲ್ವಿಚಾರಣೆಗೆ ಹಾಜರಾಗದೆ ಇರುವವರ ಹೆಸರಿನಲ್ಲಿ ಬೋಗಸ್ ಸಹಿ ಮಾಡಿ ಹಣ ನುಂಗಿದ್ದ.

ಪರೀಕ್ಷೆಗಳಲ್ಲಿ ನಡೆಯುವ ಅಕ್ರಮಗಳನ್ನು ತಡೆಯುವ ನಿಟ್ಟಿನಿಂದ ಪರೀಕ್ಷೆಯ ಸಮಯದಲ್ಲಿ ಪ್ರಶ್ನೆಪತ್ರಿಕೆಗಳನ್ನು ಆನ್‌ಲೈನ್ ಮೂಲಕ ರವಾನಿಸಲು ಮತ್ತು ಪರೀಕ್ಷಾ ಕೊಠಡಿಯ ಚಿತ್ರೀಕರಣ ಮಾಡಲು ಆಯಾ ಕಾಲೇಜಿಗೆ ಆತ್ಯಾಧುನಿಕ ತಂತ್ರಜ್ಞಾನದ ಮೊಬೈಲ್ ಕೊಂಡುಕೊಳ್ಳಲು ಹಣ ನೀಡುತ್ತದೆ. ಅದರಂತೆ ಪಾಟೀಲ್ ಸಹ ಹದಿನೆಂಟು ಸಾವಿರದ ದುಬಾರಿ ನೋಕಿಯಾ ಹ್ಯಾಂಡ್‌ಸೆಟ್ ಖರೀದಿಸಿದ್ದ. ಮೇಲಿನ ಎರಡು ಉದ್ದೇಶದ ಹೊರತಾಗಿ ಬೇರಾವುದಕ್ಕೂ ಸದರಿ ಮೊಬೈಲನ್ನು ಉಪಯೋಗಿಸುವಂತಿಲ್ಲ. ಆದರೆ ಡಾಕ್ಟರ್ ಪಾಟೀಲ್, ಕೇಂದ್ರ ಸರ್ಕಾರದಿಂದ ಬಂದಿದ್ದ ಅನುದಾನದ ಹಣದಲ್ಲಿ ಎರಡು ಸಾವಿರ ರೂಪಾಯಿಯ ಸಿಮ್ ಖರೀದಿ ಮಾಡಿ, ಕೆಲವೇ ದಿನಗಳಲ್ಲಿ ಬರೋಬ್ಬರಿ 57,904 ರೂಪಾಯಿ ಬಿಲ್ ಬರುವಷ್ಟು ಬೇಕಾಬಿಟ್ಟಿ ಕರೆ ಮಾಡಿದ್ದ. Once again ಅದೆಲ್ಲಾ ಅಮೌಂಟು ಪಾವತಿಯಾಗಿದ್ದು ಸರ್ಕಾರದ ಬೊಕ್ಕಸದಿಂದಲೇ. ಹಾಗೆ ನೋಡಿದರೆ ಪರೀಕ್ಷಾ ಅಕ್ರಮಗಳನ್ನು ತಡೆಗಟ್ಟಲು ವಿ.ವಿ ಕೊಠಡಿಗಳಲ್ಲಿ ಸಿ.ಸಿ ಟಿವಿ ಕ್ಯಾಮೆರಾಗಳನ್ನು ಅಳವಡಿಸಿತ್ತು. ಅದಾದನಂತರ ಈ ಮೊದಲು ನೀಡಿದ್ದ ಮೊಬೈಲ್‌ಗಳನ್ನು ವಾಪಸ್ಸು ಕೊಡುವಂತೆ ಎಲ್ಲಾ ಕಾಲೇಜುಗಳಿಗೂ ತಿಳಿಸಲಾಗಿದೆ. ಆದರೆ ಪಾಟೀಲ್ ವಿ.ವಿ ನಿರ್ದೇಶನಕ್ಕೆ ಕ್ಯಾರೇ ಎನ್ನದೆ ಮೊಬೈಲನ್ನು ತನ್ನ ಬಳಿಯೇ ಉಳಿಸಿಕೊಂಡಿದ್ದ.

ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ್ದ ಅನುದಾನವನ್ನು ಇಂತಿಂತಹ ಕಾರ್ಯಗಳಿಗೆ ಮಾತ್ರವೇ ಉಪಯೋಗಿಸಬೇಕೆನ್ನುವ ಸ್ಪಷ್ಟ ಉಲ್ಲೇಖಗಳಿವೆ. ಆದರೆ ಪಾಟೀಲ್ ಅದ್ಯಾವುದನ್ನೂ ಪಾಲಿಸುವ ಗೋಜಿಗೇ ಹೋಗಿಲ್ಲ. ತನ್ನ ಕಾರ್ ರಿಪೇರಿಯಿಂದ, ಮೊಬೈಲ್ ಬಿಲ್‌ವರೆಗೆ ಎಲ್ಲವೂ ಅದರಲ್ಲೇ ನಡೆದುಹೋಗಿದೆ. ಅಲ್ಲದೆ ಇಲಾಖೆಯ ಮೇಲಧಿಕಾರಿಗಳ ಅನುಮತಿಯನ್ನು ಪಡೆಯದೆ ಡಾಟಾ ಎಂಟ್ರಿ ಆಪರೇಟರ್ ಹುದ್ದೆಯನ್ನು ತಾನೇ ಸೃಷ್ಟಿಸಿ, ತನಗೆ ಬೇಕಾದವರಿಗೆ ಕೆಲಸ ಕೊಟ್ಟಿದ್ದ. ಪ್ರತಿ ತಿಂಗಳು ನಾಲ್ಕು ಸಾವಿರದಂತೆ ತನಿಖೆ ನಡೆಯುವ ವೇಳೆಗೆ ಅಜಮಾಸು ಒಂದು ಲಕ್ಷದಷ್ಟು ವೇತನವನ್ನು ಅನುದಾನದಿಂದಲೇ ಬಿಡುಗಡೆ ಮಾಡಿಸಿದ್ದ. ಈ ಕುರಿತು ಸದರಿ ಹುದ್ದೆಗೆ ಈ ಹಣವನ್ನು ಬಿಡುಗಡೆ ಮಾಡಲು ಅಸ್ಪದವಿಲ್ಲ ಎಂಬುದಾಗಿ ನಿರ್ವಾಹಕರು ಆಕ್ಷೇಪ ವ್ಯಕ್ತಪಡಿಸಿದ ನಂತರವೂ ಸಿ.ಎಸ್.ಎಸ್ ಯೋಜನೆಯಲ್ಲಿ ಹಣ ಮಂಜೂರು ಮಾಡುವಂತೆ ಒಳದಾರಿ ಬೋಧಿಸಿದ್ದ ಈ ಪಾಟೀಲಪ್ಪ.



ನಿರ್ದೇಶಕ ಶ್ರೀನಿವಾಸ


ಗ್ರಂಥಾಲಯದ ಪುಸ್ತಕ ಖರೀದಿಯಲ್ಲೂ ಈತ ಭಾರೀ ಅವ್ಯವಹಾರ ನಡೆಸಿದ್ದ. ಪುಸ್ತಕ ಖರೀದಿಗೆಂದು ಸರ್ಕಾರ ಹತ್ತು ಲಕ್ಷ ಬಿಡುಗಡೆ ಮಾಡಿತ್ತು. ಈ ಕುರಿತು ಟೆಂಡರ್ ಪ್ರಕ್ರಿಯೆ ನಡೆದು ದೆಹಲಿ ಮೂಲದ ಜೈನ್ ಪಬ್ಲಿಷರ್ಸ್ ಸಂಸ್ಥೆಯಿಂದ 7,85,696 ರೂಪಾಯಿ ಮೌಲ್ಯದ ಪುಸ್ತಕ ಖರೀದಿಸುತ್ತೇವೆಂದು ಪಾಟೀಲ್ ನಿರ್ದೇಶನಾಲಯಕ್ಕೆ ಪ್ರಸ್ತಾವನೆಯನ್ನೂ ಸಲ್ಲಿಸಿದ್ದ. ನಿಯಮದ ಪ್ರಕಾರ ನಿರ್ದೇಶನಾಲಯದಿಂದ ಅನುಮತಿ ದೊರೆತ ನಂತರವಷ್ಟೆ ಖರೀದಿ ನಡೆಸಬೇಕು. ಆದರೆ ಅತ್ತ ಪ್ರಸ್ತಾವನೆಯನ್ನು ಕಳುಹಿಸುತ್ತಿದ್ದಂತೆ, ಬಿಳಿ ಹಾಳೆಯ ಮೇಲೆ ಪ್ರಕಾಶನ ಸಂಸ್ಥೆಯೊಂದಿಗೆ ಅನಧಿಕೃತ ಒಪ್ಪಂದ ಮಾಡಿಕೊಂಡು ಭಾರೀ ಗೋಲ್‌ಮಾಲ್ ನಡೆಸಿದ್ದ. ಇಷ್ಟಲ್ಲದೆ ಶಿಕ್ಷಕರ ದಿನಾಚರಣೆಯಂದು ಮಾರಾಟ ಮಾಡುವ ಸ್ಟ್ಯಾಂಪ್ ಮತ್ತು ಫ್ಲ್ಯಾಗ್‌ಗಳ ವ್ಯವಹಾರದಲ್ಲೂ ಪಾಟೀಲ್ ಚೆನ್ನಾಗಿ ಮೇಯ್ದಿದ್ದ.

ಈ ಪಾಟೀಲನ ದರ್ಬಾರು ಅದೆಷ್ಟು ದಿಕ್ಕೆಟ್ಟುಹೋಗಿದೆ ಎನ್ನುವುದಕ್ಕೆ 524148 ನಂಬರಿನ ಚೆಕ್ ಸಾಕ್ಷಿಯಾಗಿ ನಿಲ್ಲುತ್ತದೆ. ಈ ಚೆಕ್ ಅನ್ನು ಕಾಲೇಜಿನ ಗುಮಾಸ್ತಾದ ಗಂಗರಂಗಯ್ಯ ಎಂಬಾತ ಸಮಾಜ ಕಲ್ಯಾಣ ಇಲಾಖೆ ಹೆಸರಿಗೆ 2007ರ ಡಿಸೆಂಬರ್ 18 ರಂದು issue ಮಾಡಿದ್ದ. ಸಾಮಾನ್ಯವಾಗಿ ಒಂದು ಚೆಕ್ issue ಮಾಡಲ್ಪಟ್ಟ ದಿನದಿಂದ ಮೂರು ತಿಂಗಳು ಅಥವಾ ಹೆಚ್ಚೆಂದರೆ ಆರು ತಿಂಗಳವರೆಗೆ ಚಾಲ್ತಿಯಲ್ಲಿರುತ್ತದೆ. ಅಷ್ಟರ ಒಳಗೆ ಅದು ಡ್ರಾ ಆಗದಿದ್ದರೆ, ಅದಕ್ಕೆ ಮೌಲ್ಯ ಉಳಿಯುವುದಿಲ್ಲ. ಆದರೆ ಪಾಟೀಲನ ಪವಾಡದಿಂದಾಗಿ ಈ ಚೆಕ್ ಬರೋಬ್ಬರಿ ಒಂದು ವರ್ಷದ ನಂತರ ಅಂದರೆ 23.12.2008 ರಂದು ನಗದಾಗಿತ್ತು. ಅಚ್ಚರಿಯ ವಿಷಯವೆಂದರೆ ಆ ಚೆಕ್‌ಗೆ ಸಹಿ ಮಾಡಿದ್ದ ಗಂಗರಂಗಯ್ಯ ಚೆಕ್ ನಗದಾಗುವ ಒಂಬತ್ತು ತಿಂಗಳು ಮೊದಲೇ ಇಲಾಖೆಯಿಂದ ವರ್ಗವಾಗಿ ಹೋಗಿದ್ದ. ಒಂದು ವರ್ಷದ ತರುವಾಯ ಚೆಕ್ ನಗದಾಗುವ ವೇಳೆಯು ಅದರ ಮೇಲೆ ಗಂಗರಂಗಯ್ಯನ ಸಹಿಯೇ ಉಳಿದಿತ್ತು ಮತ್ತು ಅದನ್ನು ರೀಡೇಟೆಡ್ ಮಾಡಿಕೊಡಲು ಆತ ಅಲ್ಲಿ ಇರಲೇ ಇಲ್ಲ. ಹಾಗಾಗಿ ಅದರಲ್ಲಿ ಪಾಟೀಲನ ಹಸ್ತಕ್ಷೇಪವಿರುವುದು ಸ್ಪಷ್ಟವಾಗಿ ಸಾಬೀತಾಗಿತ್ತು.

ಹೀಗೆ ಪಾಟೀಲನ ಅಂಧಾದುಂಧಿಗಳು ಸಾಗುತ್ತಲೇ ಹೋಗುತ್ತವೆ. ತನಿಖೆಗೆ ಬಂದ ತಂಡ ಇವೆಲ್ಲವನ್ನು ದಾಖಲೆ ಸಮೇತ ದೃಢೀಕರಿಸಿ ಇದರಲ್ಲಿ ಪ್ರಾಂಶುಪಾಲನನ್ನೇ ನೇರ ಹೊಣೆಯನ್ನಾಗಿಸಿ ಇಲಾಖೆಗೆ ವರದಿ ಸಲ್ಲಿಸಿತ್ತು. ಆದರೆ ವರದಿ ಸಂದಾಯವಾಗಿ ಎರಡು ವರ್ಷ ಕಳೆದರೂ ಪಾಟೀಲನ ಮೇಲೆ ಇದುವರೆವಿಗೂ ಕ್ರಮ ಕೈಗೊಂಡಿಲ್ಲ. ಈಗಲೂ ಆತನೇ ಕಾಲೇಜಿನ ಪ್ರಾಂಶುಪಾಲನಾಗಿ ಮುಂದುವರೆಯುತ್ತಿದ್ದಾನೆ ಮಾತ್ರವಲ್ಲ, ತನ್ನ ದಂಧೆಗಳಾದ ಹೆಚ್ಚುವರಿ ಶುಲ್ಕ ವಸೂಲಿ, ಬೋಗಸ್ ಲೆಕ್ಕಗಳ ಸೃಷ್ಟಿ, ಸ್ವಂತಕ್ಕೆ ಅನುದಾನದ ಖರ್ಚು ಮುಂತಾದವನ್ನು ಎಗ್ಗಿಲ್ಲದಂತೆ ನಡೆಸುತ್ತಿದ್ದಾನೆ.

ಈತನ ಬೆನ್ನಿಗಿರುವ ಅಮರೇಗೌಡ ಬಯ್ಯಾಪುರನ ಸಪೋರ್ಟು ಒಂದು ಕಡೆಯಾದರೆ ಆಯುಷ್ ಇಲಾಖೆಯ ನಿರ್ದೇಶಕ ಮತ್ತಿತರರಿಗೆ ಈತ ಖುಷಾಗಿ 'ತೃಪ್ತಿ' ಪಡಿಸಿರುವ ಕಾರಣಗಳೂ ಪಾಟೀಲನ ರಕ್ಷಣೆಗೆ ನಿಂತಿವೆ ಎಂದು ಹೇಳಲಾಗುತ್ತಿದೆ. ತನಿಖಾ ವರದಿಯಲ್ಲಿ ಡಾ.ಎ.ಎಲ್.ಪಾಟೀಲ್ ತಪ್ಪಿತಸ್ಥ ಎನ್ನುವುದು ಸ್ಪಷ್ಟವಾಗಿ ನಮೂದಾಗಿದೆ, ಅಷ್ಟೂ ಅವ್ಯವಹಾರಗಳಿಗೆ ತಕ್ಕ ಪುರಾವೆಗಳಿವೆ, ಆದರೂ ಆಯುಷ್ ಇಲಾಖೆಯ ನಿರ್ದೇಶಕರು ಮಾತ್ರ ಪಾಟೀಲನ ತಲೆ ನೇವರಿಸುತ್ತಾ ಹಗರಣಗಳಿಗೆ ಅಸ್ತು ಎನ್ನುತ್ತಿರುವುದು ಅಚ್ಚರಿ ಮೂಡಿಸುತ್ತದೆ.

● ವರದಿಗಾರ



ಪ್ರಾಂಶುಪಾಲ ಪಾಟೀಲ



ಹೋಮಿಯೋಪತಿ ಕಾಲೇಜ್

ಗಿಡುಗನ ಪಾರು ಮಾಡಲು ಗುಬ್ಬಚ್ಚಿಗೆ ಬರೆ

ಇದೀಗ ಆಯುಷ್ ಇಲಾಖೆ ಮತ್ತು ಆರೋಗ್ಯ ವಿ.ವಿ.ಯಲ್ಲಿ ಡಾ.ಎ.ಎಲ್ ಪಾಟೀಲ್ ಅದೆಷ್ಟು ಪ್ರಭಾವಿ ಎನ್ನುವುದಕ್ಕೆ ಇಲ್ಲೊಂದು ನಿದರ್ಶನವಿದೆ. ಸರ್ಕಾರಿ ಹೋಮಿಯೋಪತಿ ಕಾಲೇಜಿನಲ್ಲಿ ತಿಮ್ಮಪ್ಪ ಎಂಬ ಪ್ರಥಮ ದರ್ಜೆ ಸಹಾಯಕನಿದ್ದಾನೆ. ಪ್ರಾಂಶುಪಾಲನ ಆಜ್ಞೆಯನ್ನು ಈಡೇರಿಸಬೇಕಾದ ದರ್ದಿಗೋ ಅಥವಾ ಎಂಜಲು ಕಾಸಿನ ಆಸೆಗೋ ಈ ತಿಮ್ಮಪ್ಪ ಅಕೌಂಟ್ ಪುಸ್ತಕದಲ್ಲಿ ಪಾಟೀಲನಿಗೆ ಅನುಕೂಲವಾಗುವಂತೆ ಒಂದೆರಡು ಅಕೌಂಟುಗಳ ಯಡವಟ್ಟು ಮಾಡಿದ್ದ. ತನಿಖೆ ಮಾಡಿದ ತಂಡ ಪಾಟೀಲ್‌ನ ಜೊತೆಗೆ ಇದಕ್ಕೆ ಕಾರಣನಾದ ತಿಮ್ಮಪ್ಪನ ತಪ್ಪನ್ನೂ ಉಲ್ಲೇಖಿಸಿತ್ತು. ಇದೀ ವರದಿಯಲ್ಲಿ ಪ್ರಾಂಶುಪಾಲ ಪಾಟೀಲ್ ಮೇನ್ ವಿಲನ್ ಆದರೆ ಈ ತಿಮ್ಮಪ್ಪ ಒಂದು ಸೀನ್‌ನಲ್ಲಿ ಮಾತ್ರ ಕಾಣಿಸಿಕೊಳ್ಳುವ ಯಃಕಶ್ಚಿತ್ ಒಬ್ಬ ಪುಡಿ ಪೋಲಿಯ ಪಾತ್ರವಿದ್ದಂತೆ. ಹಾಗೊಮ್ಮೆ ವರದಿಯನ್ನು ಗಂಭೀರವಾಗಿ ಪರಿಗಣಿಸುವುದೇ ಆದಲ್ಲಿ ಪ್ರಮುಖ ಭ್ರಷ್ಟ ಪಾಟೀಲನಿಗೆ ಮೊದಲು ಶಿಕ್ಷೆಯಾಗಬೇಕಿತ್ತು. ಆದರೆ ಆಯುಷ್ ಇಲಾಖೆಯ ಉನ್ನತ ಅಧಿಕಾರಿಗಳು ಪಾಟೀಲನನ್ನು ರಕ್ಷಿಸಲಿಕ್ಕೋಸ್ಕರ ಮತ್ತು ವರದಿ ಕುರಿತು ಏನು ಕ್ರಮಕೈಗೊಂಡಿದ್ದೀರಿ ಎನ್ನುವ ಪ್ರಶ್ನೆಗಳಿಗೆ ಉತ್ತರಿಸುವ ಸಲುವಾಗಿ ತಿಮ್ಮಪ್ಪನನ್ನು ದಾಳವನ್ನಾಗಿ ಬಳಸಿಕೊಂಡಿದ್ದಾರೆ. ತನಿಖಾ ವರದಿಯಲ್ಲಿ ಹೆಸರಿರುವ ನೆಪವನ್ನೇ ಮುಂದು ಮಾಡಿ ಆತನ ಪ್ರಮೋಷನ್ ಅನ್ನು ತಡೆ ಹಿಡಿಯಲಾಗಿದೆ. ಆತನಿಗಿಂತ ಕಿರಿಯರಿಗೆ ಪ್ರಮೋಷನ್ ನೀಡಲಾಗಿದ್ದರೂ ತಿಮ್ಮಪ್ಪನಿಗೆ ತನಿಖೆಯೇ ಅಡ್ಡಿಯಾಗಿದೆ. ಆದರೆ ಅದೇ ತನಿಖೆಯಲ್ಲಿ ಪ್ರಮುಖ ಆರೋಪಿಯಾಗಿರುವ ಪಾಟೀಲ್ ಮಾತ್ರ ಸೇಫ್! ಅಂದಹಾಗೆ ಈ ತಿಮ್ಮಪ್ಪ ದಲಿತ ಎನ್ನುವುದನ್ನೂ ನಾವು ಮರೆಯಬಾರದು.

ಶಾಸಕ ಶ್ರೀನಿವಾಸ ನೆಂಟರಿಗೆ ಆಶ್ರಯ ಸೈಟು ಹಂಚಿದ



ಎಂ. ಶ್ರೀನಿವಾಸ್

ಬೆಂಗಳೂರಿನ ರಾಜರಾಜೇಶ್ವರಿನಗರದ ಬಿಜೆಪಿ ಶಾಸಕ ಂ. ಶ್ರೀನಿವಾಸ್ ಎಲೆಕ್ಷನ್ ಗೆದ್ದ"ದಿನವೇ ಸಾರ್ವಜನಿಕರ ಸ್ತಿ-ದುಡ್ಡು ನುಂಗಲು ಶುರು ಮಾಡಿದವನು. ಈಗ ಧಿಕಾರವಿರುವ ಕೊನೆಯ ನಿಮಿಷದವರೆಗೂ ದುಡ್ಡು ಂಯುವ ದಂಧೆ ಮುಂದುವರೆಸುವ ವೀರಪ್ರತಿಜ್ಞೆ ಾಡಿರುವಂತೆ ಕಾಣುತ್ತಿದೆ.


'ನಾನೊಬ್ಬ ನಿರ್ಗತಿಕ, ನನಗೆ ಬೆಂಗಳೂರಿನಲ್ಲಿ ಲೊಂದು ಸ್ವಂತ ಮನೆಯೂ ಇಲ್ಲ' ಎಂದು ಬಿಡಿಎಗೆ ಪ್ಪು ಅಫಿಡವಿಟ್ ನೀಡಿ ನಾಗರಭಾವಿ ಲೇಔಟ್‌ನಲ್ಲೊಂದು x80 ಅಡಿ ಅಳತೆಯ ಭರ್ಜರಿ ಸೈಟು ಪಟಾಯಿಸಿದ್ದಾನೆ. ಅಂದಹಾಗೆ ಇದೇ ಶ್ರೀನಿವಾಸ 2008 ಲ್ಲಿ ಎಲೆಕ್ಷನ್‌ಗೆ ನಿಲ್ಲುವಾಗ ಘೋಷಿಸಿಕೊಂಡಿರುವ ತ್ತಿಯಲ್ಲಿ "ತನಗೆ ಜಯನಗರದಲ್ಲಿ ಮೂರಂತಸ್ತಿನ ಮನೆ ದೆ. ಆದರ ಬೆಲೆ ಎರಡು ಕೋಟಿ ರೂಪಾಯಿ" ಎಂತಲೂ ಫಿಡವಿಟ್ ಹಾಕಿದ್ದ!

ಈ ವಂಚನೆಯ ಕತೆ ಒಂದಾದರೆ ಇದೇ ಶ್ರೀನಿವಾಸ ಗ ಉತ್ತರಹಳ್ಳಿ ಹೋಬಳಿ ಹೊಸಕೆರೆಹಳ್ಳಿಯಲ್ಲಿ ಆಶ್ರಯ ೋಜನೆಯಡಿ 94 ಸೈಟ್ ವಿಂಗಡಿಸಿ ತನ್ನ ನೆಂಟರಿಷ್ಟರಿಗೇ ಹುಪಾಲು ಸೈಟುಗಳನ್ನು ಹಂಚಿ ಹೊಸ ಹಗರಣ ಾಡಿದ್ದಾನೆ. ಒಂದು ನೂರು ಕೋಟಿ ರೂಪಾಯಿಯ ಗರಣವಿದು...!

ಆಯಾ ವಿಧಾನಸಭಾ ಕ್ಷೇತ್ರಗಳ ಶಾಸಕರು ಅಲ್ಲಲ್ಲಿನ ಶ್ರಯ ಸಮಿತಿಯ ಅಧ್ಯಕ್ಷರಾಗಿರಬೇಕೆಂಬುದು ಸರ್ಕಾರಿ ರುಮ. ಅದೇರೀತಿ ರಾಜರಾಜೇಶ್ವರಿ ನಗರ ವಿಧಾನಸಭಾ ತ್ರದ ಶಾಸಕನಾಗಿರುವ ಎಂ. ಶ್ರೀನಿವಾಸನೂ ಅಲ್ಲಿನ ಶ್ರಯ ಸಮಿತಿಗೆ ಅಧ್ಯಕ್ಷನಾಗಿದ್ದಾನೆ. ನಗರ ಪ್ರದೇಶಗಳಲ್ಲಿ ತವರಿಗೆ ಹಂಚುವ ಸೈಟ್‌ಗಳ ಅಳತೆಯು 20x30 ೀರುವಂತಿಲ್ಲ ಎಂಬ ನಿಯಮವಿದೆ. ಆದರೇನು ೀನಿವಾಸ್ ಈ ನಿಯಮ ಉಲ್ಲಂಘಿಸಿದ್ದಾನೆ. ೊಸಕೆರೆಹಳ್ಳಿಯ ಸರ್ವೆ ನಂಬರ್ 7 ರಲ್ಲಿದ್ದ ಸರ್ಕಾರಿ ಜಮೀನಿನ ಮೇಲೆ ಕಾಗೇ ಕಣ್ಣು ಹಾಕಿದ್ದ ಶ್ರೀನಿವಾಸ್ ತಾನೇ ಅಧ್ಯಕ್ಷನಾಗಿರುವ ಆಶ್ರಯ ಸಮಿತಿಯ ವಶಕ್ಕೆ ಈ ಜಮೀನು ಬರುವಂತೆ ಮಾಡಿಕೊಂಡ. ಬಿಬಿಎಂಪಿ ವ್ಯಾಪ್ತಿಯೊಳಗಡೆ ಬರುವ ಇಂತಹ ಜಮೀನುಗಳನ್ನು ನಿವೇಶನರಹಿತರಿಗೆ ಹಂಚುವಾಗ, ಲೇಔಟ್ ನಿರ್ಮಿಸುವಾಗ ಬಿಡಿಎ, ಬಿಬಿಎಂಪಿಗಳ ಗಮನಕ್ಕೆ ತಂದು ಬಡಾವಣೆ ಮಂಜೂರಾದ ನಂತರವೇ ಫಲಾನುಭವಿಗಳನ್ನು ಆಯ್ಕೆ ಮಾಡಿ ಹಂಚಿಕೆ ಮಾಡಬೇಕೆಂಬ ನಿಯಮವಿದೆ. ಅಲ್ಲದೆ ಮೊದಲೇ ಹೇಳಿದಂತೆ ನಗರ ಪ್ರದೇಶದಲ್ಲಿ 20x 30 ಅಳತೆಗಿಂತ ದೊಡ್ಡ ಸೈಟ್‌ಗಳನ್ನು ಹಂಚುವಂತೆಯೂ ಇಲ್ಲ. ಆದರೂ ಶಾಸಕ ಶ್ರೀನಿವಾಸ್ ಬಿಡಿಎ ಹಾಗೂ ಬಿಬಿಎಂಪಿಯ ಗಮನಕ್ಕೆ ತಾರದೆ, ಅನುಮತಿಯನ್ನೂ ಪಡೆಯದೆ ಇಲ್ಲಿ 95 ಜನರಿಗೆ ಸೈಟ್ ಹಂಚಲು ತಯಾರಾಗಿ ನಿಂತಿದ್ದಾನೆ. ಫಲಾನುಭವಿಗಳ ಪೈಕಿ ಹೆಚ್ಚಿನವರು ಶಾಸಕನ ನೆಂಟರು, ಸ್ನೇಹಿತರು ಹಾಗೂ ಹಿಂಬಾಲಕರೇ ಆಗಿದ್ದಾರೆ. ಉಳಿದವರಿಂದ ಚದರಡಿಗೆ ಎರಡು ಸಾವಿರ ರೂಪಾಯಿಯಂತೆ ದುಡ್ಡು ಕಿತ್ತು ಫಲಾನುಭವಿಗಳ ಪಟ್ಟಿಗೆ ಸೇರಿಸಲಾಗುತ್ತಿದೆ. ಈ ಲೇಔಟ್‌ನಲ್ಲಿ ಒಟ್ಟು 20x 30 ಅಳತೆಯ 45 ಸೈಟು ಹಾಗೂ 30x 40 ಅಳತೆಯ 49 ಸೈಟು ವಿಂಗಡಿಸಲಾಗಿದೆ. ಈಗ ಒಟ್ಟು 95 ಮಂದಿ ಫಲಾನುಭವಿಗಳ ಪಟ್ಟಿ ರೆಡಿಯಾಗಿದ್ದು ಈ ಲಿಸ್ಟ್‌ನ ಮೊದಲ ಹೆಸರೇ ಕಾಂತರಾಜು ಬಿನ್ ಕೆಂಪ ಅರಸೇಗೌಡನದ್ದು. ಇವನಿಗೆ 30x40 ಸೈಟ್ ಸಿಕ್ಕಿದೆ.

ಅಂದಹಾಗೆ ಈತ ಶ್ರೀನಿವಾಸನ ರಕ್ತಸಂಬಂಧಿ!

ಅದೇರೀತಿ 2 ನೇ ಫಲಾನುಭವಿ ಶಂಭುಲಿಂಗೇಗೌಡ ಬಿನ್ ರಾಮೇಗೌಡನಿಗೆ ಸೈಟ್ ನಂ. 94, ಸರೋಜ ಕೋಂ ಚಿಕ್ಕಲಿಂಗಯ್ಯ ಸೈಟ್ ನಂ. 86, ನಾಗರತ್ನಮ್ಮ ಕೋಂ ಗುರುಸಿದ್ದಪ್ಪಗೆ ಸೈಟ್ ನಂ 90, ಗೋವಿಂದೇಗೌಡ ಬಿನ್ ಮೂಡಲಗಿರಿ ಗೌಡಗೆ ಸೈಟ್ ನಂ. 92, ಜಯಲಕ್ಷ್ಮಿ ಕೋಂ ಟಿ.ಎನ್. ರಾಮಕೃಷ್ಣಗೆ ಸೈಟ್ ನಂ. 4, ಮಹಾಲಿಂಗ ಬಿನ್ ಪುಟ್ಟಚೂಡೇಗೌಡಗೆ ಸೈಟ್ ನಂ. 45ನ್ನು ದಯಪಾಲಿಸಲಾಗಿದೆ. ಇವೆಲ್ಲಾ 30x40 ಸೈಟುಗಳು ಮತ್ತು ಎಲ್ಲರಿಗೂ ಗೊತ್ತಿರುವಂತೆ ಇವರೆಲ್ಲಾ ಶಾಸಕನ ರಕ್ತಸಂಬಂಧಿಗಳಾಗಿದ್ದಾರೆ. ರಾಜರಾಜೇಶ್ವರಿ ನಗರದಲ್ಲಿ ಇವತ್ತು ಒಂದು ಚದರ ಅಡಿ ಸೈಟಿಗೆ ಆರು ಸಾವಿರ ರೂಪಾಯಿ ಬೆಲೆ ಇದೆ. ಅಂದರೆ 30x40 ಅಳತೆಯ ಒಂದು ಸೈಟ್‌ನ ಬೆಲೆ ಇಲ್ಲಿ 70 ಲಕ್ಷ ರೂಪಾಯಿಗೂ ಜಾಸ್ತಿ ಇದೆ. ಸರ್ಕಾರಕ್ಕೆ ಸೇರಿರುವ ಇಂತಹ ಅಮೂಲ್ಯ ಆಸ್ತಿಯನ್ನು ಶಾಸಕ ಶ್ರೀನಿವಾಸ ಬಡವರಿಗೆ ಸೈಟು ಹಂಚುವ ಸ್ಕೀಮಿನಲ್ಲಿ ತನ್ನ ಕುಟುಂಬ ಹಾಗೂ ನೆಂಟರಿಷ್ಟರ ಆಸ್ತಿಯನ್ನಾಗಿ ಬಹಳ ನಾಜೂಕಾಗಿ ಲಪಟಾಯಿಸಿದ್ದಾನೆ. ನೆಂಟರಲ್ಲದ ಇನ್ನಿತರರಿಂದ ಸೈಟಿಗೆ ತಲಾ ಇಪ್ಪತ್ತು ಲಕ್ಷ ರೂಪಾಯಿಯಂತೆ ಹಣ ಕೀಳುವ ಡೀಲ್‌ಗಳೂ ಇಲ್ಲಿ ರಾಜಾರೋಷವಾಗಿ ನಡೆಯುತ್ತಿದೆ.



ಆರ್‌ಟಿಐ ದಾಖಲೆಗಳನ್ನು ಪಡೆದ ಶ್ರೀನಿವಾಸ

ಕ್ರಸಂ	ಪ್ರಶ್ನೆ	ಉತ್ತರ
1	ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಹೊಸಕೆರೆಹಳ್ಳಿ ಗ್ರಾಮದ ಸರ್ವೆ.ನಂ. 7 ರಲ್ಲಿ ಆಶ್ರಯ ಯೋಜನೆಯಡಿ ವಿತರಿಸಿರುವ ಹಕ್ಕುಪತ್ರ	ಆಶ್ರಯ ಸಮಿತಿ ಅಧ್ಯಕ್ಷರಾದ ಮಾನ್ಯ ಶ್ರೀ.ಎಂ.ಶ್ರೀನಿವಾಸ್, ಶಾಸಕರು ಅವರ ಅಧೀನದಲ್ಲಿದ್ದು, ಸಹಾಯಕ ಕಂದಾಯ ಅಧಿಕಾರಿ ರವರ ಕಛೇರಿಗೆ ದಾಖಲೆಗಳನ್ನು ನೀಡಿರುವುದಿಲ್ಲ.
2	ಆಶ್ರಯ ಸಮಿತಿಯ ನಡಾವಳಿ	ಲಗತ್ತಿಸಿದೆ.
3	ಅರ್ಜಿಗಳ ಸಂಪೂರ್ಣ ಧೃಡೀಕೃತ ಪ್ರತಿ	ಆಶ್ರಯ ಸಮಿತಿ ಅಧ್ಯಕ್ಷರಾದ ಮಾನ್ಯ ಶ್ರೀ.ಎಂ.ಶ್ರೀನಿವಾಸ್, ಶಾಸಕರು ಅವರ ಅಧೀನದಲ್ಲಿದ್ದು, ಸಹಾಯಕ ಕಂದಾಯ ಅಧಿಕಾರಿ ರವರ ಕಛೇರಿಗೆ ದಾಖಲೆಗಳನ್ನು ನೀಡಿರುವುದಿಲ್ಲ.

. ಮೇಲ್ಕಂಡ ಮಾಹಿತಿಗಳನ್ನು ಈ ಮೂಲಕ ತಮಗೆ ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ತಿಳಿಸಿದೆ.

[illegible]
ಸಹಾ[illegible]
ಬೃಹತ್[illegible] ಪಾಲಿಕೆ,
ರಾಜರಾಜೇಶ್ವರಿನಗರ ಉಪ ವಲಯ,
ಬೆಂಗಳೂರು.

ದಲಿತರ ಕಡೆಗಣನೆ

ಆಶ್ರಯದಂತಹ ಸರ್ಕಾರಿ ವಸತಿ ಯೋಜನೆಯಡಿ ಸೈಟ್ ಹಂಚುವಾಗ ಮೀಸಲಾತಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಲೇಬೇಕೆಂದಿದೆ. ಹಾಗಿದ್ದಾಗಲೂ ಶ್ರೀನಿವಾಸ 95 ಮಂದಿ ಫಲಾನುಭವಿಗಳ ಪೈಕಿ 15 ಮಂದಿ ದಲಿತರಿಂದ ಮಾತ್ರ ಹಣ ಕಿತ್ತು ಫಲಾನುಭವಿಗಳ ಪಟ್ಟಿಗೆ ಸೇರಿಸಿದ್ದಾನೆ. ಉಳಿದವರಿಗೆ ಮುಂದೆ ಸೈಟ್ ಹಂಚುವ ಸಂದರ್ಭದಲ್ಲಿ ನೀಡಿ ಸರ್ಕಾರಿ ನಿಯಮ ಪಾಲಿಸಲಾಗುವುದೆಂದು ಆಶ್ರಯ ಸಮಿತಿ ಸಭೆಯಲ್ಲಿ ಠರಾವು ಮಾಡಿ ಭಂಡತನ ತೋರಿಸಿದ್ದಾನೆ.

ಶಾಸಕ ಶ್ರೀನಿವಾಸ ನಡೆಸಿರುವ ಈ ಸೈಟ್ ಹಗರಣದ ಬಗ್ಗೆ ಭ್ರಷ್ಟಾಚಾರ ವಿರೋಧಿ ವೇದಿಕೆಯ ಯಲಹಂಕದ ವೈ.ಎಚ್. ಶ್ರೀನಿವಾಸ್ ಎಂಬುವರು ಮಾಹಿತಿ ಹಕ್ಕಿನ ಕಾಯ್ದೆಯಡಿ ಕೆಲವು ದಾಖಲೆಗಳನ್ನು ಕೇಳಿದಾಗ ಆ ದಾಖಲೆಗಳೆಲ್ಲಾ ಶಾಸಕರ ಹತ್ತಿರ ಇರುವುದಾಗಿ ಬಿಬಿಎಂಪಿಯ ಅಧಿಕಾರಿಯೊಬ್ಬ 'ಲಿಖಿತ'ವಾಗಿ ತಿಳಿಸಿ ಇನ್ನೊಂದು ಕಾನೂನು ಉಲ್ಲಂಘನೆ ಮಾಡಿರುವುದನ್ನು ಸ್ವತಃ ತಾನೇ ಒಪ್ಪಿಕೊಂಡಿದ್ದಾನೆ.

ಸರ್ಕಾರದ ಯಾವುದೇ ಯೋಜನೆ ಇರಲಿ, ಅದಕ್ಕೆ ಸಂಬಂಧಿಸಿದ ಫೈಲ್ ಮತ್ತಿತರ ದಾಖಲೆಗಳೆಲ್ಲಾ ಸಂಬಂಧಪಟ್ಟ ಕಚೇರಿಯಲ್ಲಿರಬೇಕೆ ವಿನಃ ಶಾಸಕರು, ರಾಜಕಾರಣಿಗಳ ಕೈಗೆ ನೀಡುವಂತಿಲ್ಲ ಎಂಬ ನಿಯಮವಿದೆ.

ಶಾಸಕ ಶ್ರೀನಿವಾಸ ಅದೆಂತಾ ಸರ್ವಾಧಿಕಾರಿಯೆನ್ನಲು ಇದು ಸಾಕ್ಷಿಯಾಗಿದೆ. ಈ ಆಶ್ರಯ ಕಮಿಟಿಯಲ್ಲಿ ಶ್ರೀನಿವಾಸನ ಜೊತೆಗೆ ಟಿ. ಶ್ರೀನಿವಾಸ, ರಶ್ಮಿ ಡಿಸೋಜಾ, ಎಂ.ಡಿ. ನಾಗರಾಜ, ಸಾದಪ್ಪ ಮುಂತಾದ ಬಕಾಸುರರ ಗುಂಪೇ ಇದೆ.

ಬೆಂಗಳೂರು ನಗರದ ಹೃದಯಭಾಗದಲ್ಲಿರುವ ಏಳು ಎಕರೆ ಭೂಮಿ ಅಂದರೆ ಅದರ ಮಾರುಕಟ್ಟೆ ಬೆಲೆ ಕಡಿಮೆ ಎಂದರೂ ಒಂದು ನೂರು ಕೋಟಿ ರೂಪಾಯಿಗಳಾಗುತ್ತದೆ!

ಬಡವರ ಹೆಸರಿನಲ್ಲಿ ಆಶ್ರಯ ಯೋಜನೆಯ ನೆಪದಲ್ಲಿ ಶಾಸಕ ಶ್ರೀನಿವಾಸ ಮತ್ತವನ ಬಂಧುಮಿತ್ರರೇ ಈ ಸರ್ಕಾರಿ ಆಸ್ತಿಯನ್ನು ಕಬಳಿಸಲು ಈಗ ರೆಡಿಯಾಗಿ ನಿಂತಿದ್ದಾರೆ.

ಬಿಬಿಎಂಪಿ ಆಯುಕ್ತ ಸಿದ್ದಯ್ಯ ಈ ಬಗ್ಗೆ ಗಮನಹರಿಸಿ ಸರ್ಕಾರದ ಆಸ್ತಿಯನ್ನು ಉಳಿಸಲಿ.

● ವರದಿಗಾರ

ದ್ದರಾಮಯ್ಯನವರೇ...

<<

ಜಾತಿ- ವರ್ಗಗಳ ರಾಜಕೀಯ ದನಿ ಅಂದು ವಿನಾಕಾರಣ ಷ್ಟಲವಾಗಿ ಹೋಗಿತ್ತು. ಸಿದ್ದರಾಮಯ್ಯ ಕಾಂಗ್ರೆಸ್ ಂಕೊಂಡು ಚಾರಿತ್ರಿಕವಾಗಿ ತಾವು ನಿರ್ವಹಿಸಬೇಕಿದ್ದ ಜಕೀಯ ಪಾತ್ರವನ್ನು ನಿರ್ಲಕ್ಷಿಸಿಬಿಟ್ಟರು.

Use or loose ಎನ್ನುವ ಮಾತಿನಂತೆ ಸಿಕ್ಕ ರಕಾಶವನ್ನು ಅವರು ಬಳಸಿಕೊಳ್ಳದ ಕಾರಣ ಾತೆಗಿರಬಹುದಾಗಿದ್ದ ಇತರ ನಾಯಕರೆಲ್ಲಾ ಬೇರೆ ಪಕ್ಷಗಳ ಶ್ರಯ ಹುಡುಕಿಕೊಂಡು ಹೋಗಿ ದೂರವಾದರು.

ಸಿದ್ದರಾಮಯ್ಯ ಈಗ ಕಾಂಗ್ರೆಸ್‌ನಲ್ಲಿದ್ದರೂ ಏಕಾಂಗಿತನ ುಭವಿಸುತ್ತಿರುವುದು ಎಲ್ಲರಿಗೂ ಗೊತ್ತಾಗುವಂತಿದೆ.


ಕಾಂಗ್ರೆಸ್ ಪಕ್ಷಕ್ಕೆ ಸಿದ್ದರಾಮಯ್ಯ ಅನಿವಾರ್ಯವಾಗಿ ಕಾದ ನಾಯಕರೋ ಅಥವಾ ಸಿದ್ದರಾಮಯ್ಯನವರಿಗೇ ಂಗ್ರೆಸ್ ಅನಿವಾರ್ಯವಾಗಿ ಬೇಕಾದ ಪಕ್ಷವಾಗಿದೆಯೋ ಬ ಗೊಂದಲದ ಪರಿಸ್ಥಿತಿ ಈಗ ನಿರ್ಮಾಣವಾದಂತಿದೆ.

ಇನ್ನೇನು ಕೆಲವೇ ತಿಂಗಳಲ್ಲಿ ಕರ್ನಾಟಕ ವಿಧಾನಸಭಾ ಾವಣೆಗಳು ನಡೆಯಲಿದೆ. ಹಾಗಾಗಿ ಸ್ವತಃ ದ್ದರಾಮಯ್ಯನವರೇ ಈ ಪ್ರಶ್ನೆ ಕೇಳಿಕೊಂಡರೆ ಒಳಿತು.

ಜೆಡಿಎಸ್‌ಗೆ ಕುಮಾರಸ್ವಾಮಿ, ಕೆಜೆಪಿಗೆ ಯಡಿಯೂರಪ್ಪ ಜೆಪಿಯಲ್ಲಿ ಶೆಟ್ಟರ್ ಹಾಗೂ ಅನಂತ್‌ಕುಮಾರ್ ನಾಯಕರಂತೆ ಮುಂಚೂಣಿಯಲ್ಲಿದ್ದಾರೆ. ಕಾಂಗ್ರೆಸ್‌ನಲ್ಲಿ ಕನಿಷ್ಠ ಪಕ್ಷ ಅರ್ಧ ಡಜನ್ ನಾಯಕರಂತೂ ಇದ್ದಾರೆ. ಇವರೆಲ್ಲರಿಗೂ ಹೋಲಿಸಿದರೆ ಸಿದ್ದರಾಮಯ್ಯ ಉತ್ತಮ ಹಾಗೂ ಯೋಗ್ಯ ನಾಯಕ. ಆದರೆ ಸಿದ್ದರಾಮಯ್ಯನವರು ಈ ಸಂದರ್ಭದಲ್ಲಿ ತಮ್ಮನ್ನು ತಾವೇ **push** ಮಾಡಿಕೊಳ್ಳದೇ ಹೋದರೆ ಕಾಂಗ್ರೆಸ್‌ನೊಳಗಿರುವ ಏಡಿಕಾಯಿಗಳು ಅವರ ಕಾಲೆಳೆದು ಮೇಲೇರದಂತೆ ತಡೆಯುವುದು ಗ್ಯಾರಂಟಿ.

ಕರ್ನಾಟಕದ ಜನತೆ ಕುಮಾರಸ್ವಾಮಿ, ಯಡಿಯೂರಪ್ಪ ಶೆಟ್ಟರರ ಆಡಳಿತವನ್ನು ನೋಡಿಯಾಗಿದೆ. ರಾಜ್ಯ ರಾಜಕೀಯವು ಈಗ ಭ್ರಷ್ಟಾಚಾರದ, ಹೊಸ ಜಾತಿ ಸಮೀಕರಣಗಳ, ಭಂಡತನಗಳಿಂದ ತುಂಬಿರುವ ಕೊಚ್ಚೆ ಗುಂಡಿಯಂತಾಗಿದೆ. ಈಗಿರುವ ವಿವಿಧ ಪಕ್ಷಗಳ ನಾಯಕರೆಲ್ಲರ ಮೇಲೂ ಭ್ರಷ್ಟಾಚಾರ, ಸ್ವಜನಪಕ್ಷಪಾತದ ಆರೋಪಗಳಿವೆ. ಅದಕ್ಕೂ ಮಿಗಿಲಾಗಿ ಇವರ್‍ಯಾರಿಗೂ ಯಾವ ಸಾಮಾಜಿಕ ಕಾಳಜಿಗಳು, ಕನಸುಗಳೂ ಇಲ್ಲ. ಇಂತಹ ಶೂನ್ಯ ಸ್ಥಿತಿಯಲ್ಲಿ ಕೈ-ಬಾಯಿ ಶುದ್ಧವಾಗಿಟ್ಟುಕೊಂಡಿರುವ, ಸರಳ-ನೇರ ಸ್ವಭಾವದ, ದಮನಿತ ವರ್ಗಗಳ ಬಗ್ಗೆ ಕಾಳಜಿಯಿರುವ, ವೈಚಾರಿಕ ಮನೋಭಾವದ ಸಿದ್ದರಾಮಯ್ಯ ಕೊಂಚ ವೈಚಳಿ ಬಿಟ್ಟು ಜನರ ನಡುವೆ ಕಾಣಿಸಿಕೊಳ್ಳಬೇಕಿದೆ. ಇಂತದ್ದಕ್ಕೆಲ್ಲಾ ಅವರು ಕಾಂಗ್ರೆಸ್ ಹೈಕಮಾಂಡ್‌ನ ಅನುಮತಿಗೆ ಕಾಯುವುದು ವ್ಯರ್ಥ.

ಕರ್ನಾಟಕದ ರಾಜಕೀಯ ಈಗ ತಿರುವು ಬಿಂದುವಿನಲ್ಲಿದೆ. ಮೇಲ್ಜಾತಿ ಹಾಗೂ ಮೇಲ್ವರ್ಗದ ಸಮುದಾಯಗಳು ತಮ್ಮ ಅಧಿಕಾರ, ಲಾಭ, ಲೋಭಗಳನ್ನು ಉಳಿಸಿಕೊಳ್ಳಲು ಹಾಗೂ ಸರ್ಕಾರವನ್ನು ವಶಪಡಿಸಿಕೊಳ್ಳಲು ಈ ಬಾರಿ ಭಾರಿ ಹಣಾಹಣಿ ನಡೆಸುವುದು ನಿಶ್ಚಿತ.



ಇಂತಹ ಸಂದರ್ಭದಲ್ಲಿ ದುರ್ಬಲರ ಹಾಗೂ ದಮನಿತರ ದನಿಯೂ ಕೇಳುವಂತಾಗಬೇಕೆಂದರೆ ಸಿದ್ದರಾಮಯ್ಯನವರಂತವರು ಮುಂಚೂಣಿಯಲ್ಲಿ ಬಂದು ನಿಲ್ಲಬೇಕು.

ಕಾಂಗ್ರೆಸ್ ಪಕ್ಷಕ್ಕೆ ತಾನು ಅನಿವಾರ್ಯ ಎಂಬ ಸನ್ನಿವೇಶ ಸೃಷ್ಟಿಸುವ ಬದಲಾಗಿ ತನಗೇ ಕಾಂಗ್ರೆಸ್ ಆಸರೆ ಬೇಕಿದೆ ಎಂಬಂತೆ ಹಿಂಜರಿಕೆಯಿಂದ ವರ್ತಿಸುವುದರಿಂದ ಯಾರಿಗೂ ಒಳಿತಾಗದು. ಸಿದ್ದರಾಮಯ್ಯ ಈ ಬಗ್ಗೆ ಯೋಚಿಸಲಿ.

ಕರ್ನಾಟಕ ಕಾಂಗ್ರೆಸ್ ಆಗಲಿ, ವಿರೋಧ ಪಕ್ಷದ ನಾಯಕರಾಗಿ ಸಿದ್ದರಾಮಯ್ಯನವರಾಗಲಿ ಬಿಜೆಪಿಗಳ ಬ್ರಹ್ಮಾಂಡ ಭ್ರಷ್ಟಾಚಾರದ ಒಂದೇ ಒಂದು ಹಗರಣವನ್ನು ತಾವೇ ಮುಂದೆ ನಿಂತು ಬಯಲುಗೊಳಿಸಲಿಲ್ಲ. ಚರ್ಚ್ ದಾಳಿ, ಕೋಮುದೊಂಬಿಗಳಾದಾಗ ಬಾಧಿತ ಜನರ ಹತ್ತಿರಕ್ಕೂ ಹೋಗಲಿಲ್ಲ.

ಹೀಗಿರುವಾಗ ಜನ ಯಾಕೆ ಕಾಂಗ್ರೆಸ್ ಬಗ್ಗೆ ವೃಥಾ ಭರವಸೆ ಇಟ್ಟುಕೊಳ್ಳುತ್ತಾರೆ. ಇದೊಂದು ತರದ **political vaccum** ಇದ್ದಂತೆ.


ಸಿದ್ದರಾಮಯ್ಯ ತಮಗಿರುವ ಸಾಮರ್ಥ್ಯ ಹಾಗೂ ಸಾಧ್ಯತೆಗಳನ್ನು ಸರಿಯಾಗಿ ಅಂದಾಜು ಮಾಡಿಕೊಂಡರೆ ಆ ಶೂನ್ಯವನ್ನು ಸಮರ್ಥವಾಗಿ ತುಂಬಬಲ್ಲರು.

ರಾಜಕೀಯ ನಾಯಕನೊಬ್ಬ ತನ್ನ ವೈಯಕ್ತಿಕ ಹತಾಶೆಯನ್ನು ತನ್ನನ್ನು ನಂಬಿರುವ ಸಮುದಾಯಕ್ಕೂ ದಾಟಿಸುವುದು ಸಲೀಸಾದ ಕೆಲಸ. ಆದರೆ ಸಮುದಾಯಗಳ ನಿರೀಕ್ಷೆಯನ್ನು ತನ್ನ ವೈಯಕ್ತಿಕ ಕನಸನ್ನಾಗಿಯೂ ಮಾಡಿಕೊಳ್ಳುವುದು ನಿಜಕ್ಕೂ ದೊಡ್ಡ ಸವಾಲು.

ಸಿದ್ದರಾಮಯ್ಯ ರಾಜ್ಯ ರಾಜಕೀಯದ ಮುಂಚೂಣಿಯಲ್ಲಿ ಈಗಲಾದರೂ ಕಾಣಿಸಿಕೊಳ್ಳದೆ ಹೋದರೆ ಮುಂದಿನ ಎರಡು ದಶಕಗಳ ಕಾಲವಾದರೂ ಮೇಲ್ಜಾತಿ- ಮೇಲ್ವರ್ಗಗಳ ರಾಜಕೀಯ ಶಕ್ತಿ-ಅಧಿಕಾರ ಬಲದೆದುರು ದಮನಿತರ ದನಿ ಎತ್ತಲಾಗುವುದೇ ಇಲ್ಲ. ●


ಮೈಸೂರು:ಬ್ರಾಹ್ಮಣರ ರಾಜಕೀಯ

ಮೈಸೂರಿನ ರಾಜಕಾರಣ ದಿನಕ್ಕೊಂದು ತಿರುವು ಪಡೆದುಕೊಳ್ಳುತ್ತಿದೆ. ಈ ವರಸೆ ಹೀಗೇ ಮುಂದುವರೆದರೆ ಕೊನೆ ಮುಟ್ಟೋ ವೇಳೆಗೆ ಎಂಥಾ ತಿರುವು ಪಡೆದುಕೊಳ್ಳುತ್ತದೆ ಎಂಬುದು ಎಂಥಾ ರಾಜಕೀಯ ಪಂಡಿತನಿಗೂ ಬಿಡಿಸಲಾಗದ ಒಗಟಾಗಿ ಬಿಟ್ಟಿದೆ.




ಕಾ.ಪು.ಸಿದ್ದಲಿಂಗಸ್ವಾಮಿ

ಒಂದೆಡೆ ಜಿಲ್ಲೆಯ ಉಸ್ತುವಾರಿ ಹಾಗೂ ವೈದ್ಯಕೀಯ ಶಿಕ್ಷಣ ಮಂತ್ರಿ ರಾಮದಾಸ್ ಸುತ್ತಮುತ್ತ ಹೆಣೆದುಕೊಂಡಿರುವ ರಾಜಕೀಯದ ರಂಗಿನಾಟ, ಮತ್ತೊಂದೆಡೆ ಕಾಂಗ್ರೆಸ್ ಪಕ್ಷದ ಮುಂದಿನ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಪ್ರೊಜೆಕ್ಟ್ ಆಗಿರುವ ಸಿದ್ದರಾಮಯ್ಯನವರ ಸುತ್ತಲೂ ಆವರಿಕೊಳ್ಳುತ್ತಿರುವ ರಾಜಕೀಯ ಒಳಸಂಚುಗಳೆಲ್ಲಾ ಸೇರಿ ಮೈಸೂರಿನ ರಾಜಕೀಯ ವಾತಾವರಣ ಬಿಸಿಯೇರುವಂತೆ ಮಾಡಿವೆ.



ರಾಜೀವ್

ಢೋಂಗೀ ರಾಮಭಕ್ತ ರಾಮದಾಸ್‌ನ ಕೃಷ್ಣರಾಜ ಕ್ಷೇತ್ರದಲ್ಲಿ ಅತಿಹೆಚ್ಚಿನ ಸಂಖ್ಯೆಯಲ್ಲಿರುವವರು ಬ್ರಾಹ್ಮಣ ಸಮುದಾಯದವರೇ. ಏನೆಲ್ಲಾ ವೇಷ ತೊಟ್ಟು, ಬಣ್ಣ ಬಳಿದುಕೊಂಡು ನಾಟಕವಾಡಿ ಬ್ರಾಹ್ಮಣರ ಓಟು ಸೆಳೆಯುತ್ತಿದ್ದ ರಾಮದಾಸನ ನಾಟಕಗಳು ಒಂದೊಂದಾಗಿ ಬಯಲಾಗಿಹೋಗಿವೆ. ತಮ್ಮ ಶ್ರೀಕಾಂತನ ಹೆಸರಿನಲ್ಲಿ ನಡೆಸುತ್ತಿರುವ ರಿಯಲ್ ಎಸ್ಟೇಟ್ ದಂಧೆ, ಈತನ ಭ್ರಷ್ಟಾಚಾರ, ಸರ್ಕಾರಿ ಭೂಮಿ ಕಬಳಿಕೆ, ಅನಾಚಾರಗಳೆಲ್ಲಾ ಸೇರಿಕೊಂಡು ಕ್ಷೇತ್ರದ ಬ್ರಾಹ್ಮಣರಿಗೆ ಮಾತ್ರವಲ್ಲದೆ ಎಲ್ಲಾ ಮತದಾರರಿಗೂ ವಾಕರಿಕೆ ಹುಟ್ಟಿಸಿಬಿಟ್ಟಿದೆ.



ರಾಮದಾಸ್


ಕ್ಷೇತ್ರದ ಮತದಾರರನ್ನು ಮತ್ತೊಮ್ಮೆ ಯಾಮಾರಿಸಲು ರಾಮದಾಸ್ ಎಂತೆಂಥಾ ಹೀನ ತಂತ್ರಗಳನ್ನು ಪ್ರಯೋಗಿಸುತ್ತಿದ್ದಾನೆಂದರೆ ಅದೇ ದೊಡ್ಡ ಕತೆಯಾಗಿಬಿಡುತ್ತೆ ಕೆಲವು ಸ್ಯಾಂಪಲ್‌ಗಳನ್ನಷ್ಟೆ ನೋಡಿ.

ಕ್ಷೇತ್ರದ ಬಹಳಷ್ಟು ಮತದಾರರ ಪರ್ಸನಲ್ ಬಯೋಡಾಟಾ ಕಲೆಕ್ಟ್ ಮಾಡಿಕೊಂಡಿರುವ ಈ ಆಸಾಮಿ ಬರ್ತ್‌ಡೇ ಶುಭಾಶಯ, ಆನ್ನಿವರ್ಸರಿ ಶುಭಾಶಯ ಮುಂತಾದ ಗ್ರೀಟಿಂಗ್ ಕಳಿಸುವ ಚಾಳಿ ಶುರು ಮಾಡಿಕೊಂಡಿದ್ದಾನೆ. ಮಾನ್ಯ ಸಚಿವರಿಂದಲೇ ಒಂದು ಗ್ರೀಟಿಂಗ್ ಕಾರ್ಡ್ ಬಂದುಬಿಡ್ತು ಅಂತಾ ರೋಮಾಂಚನಗೊಂಡು ಜನರು ತನಗೇ ಓಟು ಹಾಕಿಬಿಡುತ್ತಾರೆ ಎಂಬುದು ಈತನ ಭ್ರಮೆ.

ಇನ್ನು ಸುಳ್ಳು-ಪೊಳ್ಳು ಸ್ಕೀಮುಗಳ ಹೆಸರಿನಲ್ಲಿ ಬಡಪಾಯಿ ಮತದಾರರ ಮೂಗಿಗೆ ತುಪ್ಪ ಸವರಿ ತನ್ನ ಕಡೆಗೆ ಸೆಳೆಯಲು ತನ್ನ ಅಧಿಕೃತ ಲೆಟರ್‌ಹೆಡ್ ದುರ್ಬಳಕೆ ಮಾಡಿ ಕ್ಷೇತ್ರದಾದ್ಯಂತ ಪ್ರಚಾರ ಕೈಗೊಂಡಿದ್ದಾನೆ. (ಈ ಬಗ್ಗೆ ನಮ್ಮ ಪತ್ರಿಕೆಯ ಕಳೆದ ವಾರದ ಸಂಚಿಕೆಯಲ್ಲಿ ವಿಸ್ತೃತವಾದ ಲೇಖನ ಪ್ರಕಟವಾಗಿತ್ತು, ಆಸಕ್ತರು ಗಮನಿಸಬೇಕಾಗಿ ವಿನಂತಿ.) ಜೊತೆಗೆ ಒಂದಷ್ಟು ಮಂದಿ ಪರಾಕು ಪತ್ರಕರ್ತರನ್ನು ಸೆಳೆದುಕೊಂಡು ಚುನಾವಣೆ ಎದುರಿಸುವ ಲೆಕ್ಕಾಚಾರ ಈತನದು.

ಆದರೆ ಕೃಷ್ಣರಾಜ ಕ್ಷೇತ್ರದ ಮತದಾರರ ಲೆಕ್ಕಾಚಾರವೇ ಬೇರೆ. ಎಲ್ಲಕ್ಕಿಂತ ಮುಖ್ಯವಾಗಿ ಬ್ರಾಹ್ಮಣ ಮತದಾರರೇ ರಾಮದಾಸನ ಅನಾಚಾರಗಳನ್ನು ಕಂಡು ರೋಸಿ ಹೋಗಿದ್ದಾರೆ. ಈತ ಅಧಿಕಾರದಲ್ಲಿರುವವರೆಗೆ ಕ್ಷೇತ್ರವನ್ನಾಗಲಿ, ಬ್ರಾಹ್ಮಣ ಸಮುದಾಯವನ್ನಾಗಲಿ ಉದ್ಧಾರ ಮಾಡುವುದಿಲ್ಲ ಎಂಬುದನ್ನು ಸ್ವಂತ ಅನುಭವದಿಂದ ಕಂಡುಕೊಂಡಿದ್ದಾರೆ.

ಇಂಥಾ ಸಂದರ್ಭದಲ್ಲಿ ಬ್ರಾಹ್ಮಣ ಜಾತಿಯವರೇ ಆದ ಅರ್ಹ ಅಭ್ಯರ್ಥಿಗಾಗಿ ಬ್ರಾಹ್ಮಣರು ತಲಾಷೆಯಲ್ಲಿದ್ದಾಗ ಅವರಿಗೆ ಆಶಾಕಿರಣವಾಗಿ ಕಂಡುಬಂದಿದ್ದು ರಾಜೀವ್ ಎಂಬ ಯುವ ಅಭ್ಯರ್ಥಿ. ಒಂದು ಕಾಲದಲ್ಲಿ ದಿನಸಿ ಅಂಗಡಿ ನಡೆಸುತ್ತಿದ್ದ ರಾಜೀವ್ ಕ್ರಮೇಣ ಕೋ ಆಪರೇಟಿವ್ ಸಂಘ ಸ್ಥಾಪಿಸಿ ನಿವೇಶನ ಹಂಚುವ ಸ್ಕೀಮು ಪ್ರಾರಂಭಿಸಿದರು. ಇದೂ ಸಹ ವಿನೂತನ ಶೈಲಿಯ ರಿಯಲ್ ಎಸ್ಟೇಟ್ ದಂಧೆಯೇ ಆಗಿತ್ತು, ಈ ವ್ಯವಹಾರದಲ್ಲಿ ರಾಜೀವ್ ಭಾರೀ ಮೊತ್ತದ ಹಣ ಮಾಡಿದನಾದರೂ ತನ್ನನ್ನು ನಂಬಿದವರಿಗೆ ಮೋಸ ಮಾಡಲಿಲ್ಲ ಎಂಬುದು ಇಲ್ಲಿನ ಜನರ ಅಭಿಪ್ರಾಯ. ಈತನ ಯೋಜನೆಯಿಂದ ಸ್ವಂತ ನಿವೇಶನ ಪಡೆದುಕೊಂಡ ದೊಡ್ಡ ಸಮೂಹವೇ ಇಲ್ಲಿದೆ.



ರಾಮದಾಸ್‌ನ ಲೆವೆಲ್‌ನಲ್ಲಿ ಅಲ್ಲದಿದ್ದರೂ ಈ ರಾಜೀವ್‌ಗೆ ಚುನಾವಣೆಗೆ ಖರ್ಚು ಮಾಡುವಷ್ಟು ಆರ್ಥಿಕ ಸಾಮರ್ಥ್ಯವಂತೂ ಇದೆ. ಜೊತೆಗೆ ಸಂಘಟನಾ ಚತುರ. ಚುರುಕಾಗಿ ಓಡಾಡಿ ಕೆಲಸ ಮಾಡುವ ಸ್ವಭಾವದ ವ್ಯಕ್ತಿ. ಜಿ.ಟಿ. ದೇವೇಗೌಡರಿಗೆ ಹತ್ತಿರವಿರುವ ರಾಜೀವ್ ಈಗಾಗಲೇ ಜಿಲ್ಲಾ ಸಹಕಾರ ಸಂಘದ ಅಧ್ಯಕ್ಷ ಎಂಬ ಪಟ್ಟವನ್ನೂ ಅಲಂಕರಿಸಿದ್ದಾನೆ.

ಬ್ರಾಹ್ಮಣರನ್ನು ಒಗ್ಗೂಡಿಸುವ ದೃಷ್ಟಿಯಿಂದ ರಾಜೀವ್ ತನ್ನ ನೇತೃತ್ವದಲ್ಲಿ 'ವಿಪ್ರ ಪರಸ್ಪರ ಸಹಾಯ ಸಮಿತಿ' ಎಂಬ ಬ್ಯಾನರ್ ಅಡಿಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ. ಅದರ ಭಾಗವಾಗಿ ಕಳೆದ ವಾರ 'ವಿಪ್ರ ಬೃಹತ್ ಜಾಗೃತಿ ಸಮಾವೇಶ' ಎಂಬ ಹೆಸರಿನಲ್ಲಿ ಮೈಸೂರಿನಲ್ಲಿ ಬ್ರಾಹ್ಮಣರ ಭಾರೀ ಸಮಾವೇಶವೊಂದನ್ನು ನಡೆಸಿದ್ದರು. ಬಡ ಬ್ರಾಹಣರಿಗೆ ಆರ್ಥಿಕ ಹಿಂದುಳಿಕೆಯ ಆಧಾರದಲ್ಲಿ ಮೀಸಲಾತಿ ನೀಡಬೇಕೆಂಬುದು ಈ ಸಮಾವೇಶದ ಪ್ರಮುಖ ಬೇಡಿಕೆಯಾಗಿತ್ತು. ಈ ಸಮಾವೇಶಕ್ಕೆ ಮಾಜಿ ಸ್ಪೀಕರ್ ರಮೇಶ್‌ಕುಮಾರ್, ದೇಶಪಾಂಡೆ, ವೈಎಸ್‌ವಿ ದತ್ತಾ ಮುಂತಾದ ಹಲವು ಪಕ್ಷದ ಬ್ರಾಹ್ಮಣ ಮುಖಂಡರನ್ನು ಹಾಗೂ ಪೇಜಾವರ ಸ್ವಾಮಿ, ರಾಘವೇಂದ್ರ ಭಾರತಿ ಸ್ವಾಮಿ ಆದಿಯಾಗಿ ನಾನಾ ಸ್ವಾಮಿಗಳನ್ನೂ ಆಹ್ವಾನಿಸಲಾಗಿತ್ತು, ಒಂದು ವೇಳೆ ಅಂದುಕೊಂಡಂತೆ ಎಲ್ಲವೂ ನಡೆದಿದ್ದರೆ ಈ ಸಮಾವೇಶ ರಾಮದಾಸ್‌ಗೆ ಕೊನೇ ಮೊಳೆ ಹೊಡೆಯುತ್ತಿತ್ತು ಎಂದರೆ ಉತ್ಪ್ರೇಕ್ಷೆಯಲ್ಲ, ಆದ್ದರಿಂದ ಕಾರ್ಯಾಚರಣೆಗಿಳಿದ ಆರೆಸ್ಸೆಸ್ ಮತ್ತು ಬಿಜೆಪಿ ಧುರೀಣರು "ಇದು ಕೆಜೆಪಿ ಆಯೋಜಿತ ಸಮಾವೇಶ, ಇದರಲ್ಲಿ ಭಾಗವಹಿಸಬೇಡಿ" ಎಂಬ ಪ್ರಚಾರ ಕೈಗೊಂಡು ಬ್ರಾಹ್ಮಣ ಮುಖಂಡರು ಹಾಗೂ ಸ್ವಾಮಿಗಳು ಸಮಾವೇಶಕ್ಕೆ ಬಾರದಂತೆ ತಡೆದರೆಂಬುದು ರಾಜೀವ್ ಅವರ ಆರೋಪ. ಮುಖಂಡರು ಬಾರದಿದ್ದರೂ ಕೂಡ ಕ್ಷೇತ್ರದ ಮತದಾರರು ಭಾರೀ ಸಂಖ್ಯೆಯಲ್ಲಿ ನೆರೆದಿದ್ದು ರಾಮದಾಸ್‌ಗೆ ನುಂಗಲಾರದ ತುತ್ತಾಗಿದೆ.

ಕೆಲ ತಿಂಗಳುಗಳ ಹಿಂದೆ ಇದೇ ರಾಜೀವ್ ಜೆಡಿಎಸ್ ಪಕ್ಷದಿಂದ ಬಿ ಫಾರ್ಮ್ ಪಡೆಯುತ್ತಾರೆಂಬ ರೂಮರ್‌ಗಳು ಕ್ಷೇತ್ರದಾದ್ಯಂತ ಚಾಲ್ತಿಯಲ್ಲಿದ್ದವು. ಅದೇ ವೇಳೆಗೆ ಸರಿಯಾಗಿ ಯಡಿಯೂರಪ್ಪನ ಕೆಜೆಪಿ ಹುಟ್ಟಿಕೊಳ್ತು ನೋಡಿ. ತನ್ನ ಆಜನ್ಮ ವೈರಿ ಅನಂತಕುಮಾರ್‌ನ ಪರಮಶಿಷ್ಯ ರಾಮದಾಸ್‌ನನ್ನು ಮಟ್ಟಹಾಕಲು ಯಡಿಯೂರಪ್ಪನೇ ರಾಜೀವ್‌ನ ಮನೆ ಬಾಗಿಲು ತಟ್ಟಿದರೋ ಅಥವಾ ರಾಜೀವ್‌ನೇ ಯಡ್ಡಿ ಮನೆ ಬಾಗಿಲು ತಟ್ಟಿದನೋ ಗೊತ್ತಿಲ್ಲ, ಅಂತೂ ಅಧಿಕೃತವಾಗಿ ರಾಜೀವ್ ಕೆಜೆಪಿಗೆ ಸೇರ್ಪಡೆಯಾಗಿದ್ದಾರೆ.

ಪಾರಂಪರಿಕವಾಗಿ ಬ್ರಾಹ್ಮಣರ ಹಿಡಿತದಲ್ಲೇ ಇರುವ ಕೃಷ್ಣರಾಜ ಕ್ಷೇತ್ರದಿಂದ ಆರಿಸಿಬಂದಿರುವ ಬಿಜೆಪಿ ಕಾರ್ಪೋರೇಟರ್‌ಗಳ ಪೈಕಿ ವಿದ್ಯಾ ಅರಸ್ ಎಂಬ ಒಬ್ಬಾಕೆಯನ್ನು ಹೊರತುಪಡಿಸಿದರೆ ಉಳಿದವರೆಲ್ಲರೂ

ಕಾ.ಪು. ಪತ್ರಿಕಾರಂಗಕ್ಕೆ??!

ಕಾ. ಪು. ಸಿದ್ದಲಿಂಗಸ್ವಾಮಿ ಎಂಬ ಕ್ಯಾಂಡಿಡೇಟು ಸ್ವಂತಕ್ಕೆ ಸೈಟು ಆಸ್ತಿಪಾಸ್ತಿ ಮಾಡಿಕೊಂಡಷ್ಟೇ ಸಲೀಸಾಗಿ ಒಂದು ಪತ್ರಿಕೆ ಮಾಡಲು ಹೊರಟಿದ್ದಾನಂತೆ. ಇದನ್ನು ನಂಬಲು ಸ್ವಲ್ಪ ಕಷ್ಟವೆನಿಸಿದರೂ ಇಂದಿನ ನಾಟಕೀಯ ಸನ್ನಿವೇಶದಲ್ಲಿ ಯಾವುದನ್ನೂ ತಳ್ಳಿಹಾಕುವಂತಿಲ್ಲ.

ಇದರ ಹಿನ್ನೆಲೆ ಹೀಗಿದೆ. ಕಾಪು ಪತ್ರಿಕೆಗಳಿಗೆ ಜಾಹಿರಾತು ಬಾಬತ್ತು ಎಷ್ಟು ಹಣ ಹರಿಸಿದ್ದಾನೆಂಬ ವಿಷಯ, ಆದಾಯ ಇಲಾಖೆಯ ತನಿಖೆಗೆ ಯೋಗ್ಯವಾದ ಒಂದು ಐಟಂ. ಹಾಗೇ ಈತ ಹಲವು ಪತ್ರಕರ್ತರಿಗೆ ತೀರ್ಥಪ್ರಸಾದ ವಿನಿಯೋಗ ಮಾಡಿ ಈಗಾಗಲೇ ಹಳ್ಳ ಹಿಡಿದಿರುವ ಕೆಲವರನ್ನು ಮತ್ತಷ್ಟು ಕುಲಗೆಡಿಸುತ್ತಿದ್ದಾನೆ ಎಂಬ ಸತ್ಯ ಇಡೀ ಮೈಸೂರಿನಾದ್ಯಂತ ಪ್ರಚಲಿತವಾಗಿದೆ. ಪರಿಣಾಮವಾಗಿ ಈ ನಾಲಾಯಕ್ ಆಸಾಮಿ ಕುಂತರೂ ನಿಂತರೂ ಫೋಟೋ ಸಮೇತ ಸುದ್ದಿಗಳು ರಾರಾಜಿಸುತ್ತಿವೆ ಎಂಬುದು ಜನಸಾಮಾನ್ಯರ ಅಂಬೋಣ.


ಹೀಗೆ ಹಣ ಹರಿಸಿಹರಿಸಿ ಸುಸ್ತಾಗಿರುವ ಕಾಪುಗೆ ತಾನೇ ಒಂದು ಪತ್ರಿಕೆ ಮಾಡಿಬಿಟ್ಟರೆ ಒಳ್ಳೆಯದು ಎಂಬ ಐಡಿಯಾ ಯಾರು ಕೊಟ್ಟರೋ ಗೊತ್ತಿಲ್ಲ; ಒಂದು ಕಾಲದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಓದುಗರನ್ನು ಹೊಂದಿದ್ದ ಆದರೆ ಈಗ ಪ್ರಕಟಣೆ ನಿಲ್ಲಿಸಿರುವ 'ಮಹಾನಂದಿ' ಎಂಬ ಪತ್ರಿಕೆಯ ಟೈಟಲ್‌ಅನ್ನು ಖರೀದಿಸಲು ಡೀಲ್ ನಡೆಯುತ್ತಿದೆಯಂತೆ. ಹೀಗೆ ಒಂದಷ್ಟು ಹೆಸರು ಮಾಡಿದ್ದ ಪತ್ರಿಕೆ ಕೈಗೆ ಸಿಕ್ಕರೆ ತಮ್ಮ ರಾಜಕೀಯ ಪ್ರಚಾರ ಸುಲಭವಾಗುತ್ತದೆ ಎಂಬುದು ಕಾಪು ಟೀಮ್‌ನ ಲೆಕ್ಕಾಚಾರ.

ಏನೇ ಆಗಲಿ, ಕಾ.ಪು ಗೆ ತನ್ನ ಚುನಾವಣಾ ಪ್ರಚಾರಕ್ಕಾಗಿ ಒಂದು ಪತ್ರಿಕೆ ಅಗತ್ಯವಾಗಿ ಕಂಡುಬಂದಿರಬಹುದು. ಆದರೆ ಇಂಥಾ ಪತ್ರಿಕೆಯ ಅಗತ್ಯ ಮೈಸೂರಿನ ಜನರಿಗಂತೂ ಇಲ್ಲವೇ ಇಲ್ಲವೆಂದು ಖಡಾಖಂಡಿತವಾಗಿ ಹೇಳಬಹುದು.

ಸಿದ್ದಲಿಂಗಸ್ವಾಮಿ ಪೂರ್ವಾಪರ

ಈಗ ಒಂದಷ್ಟು ಸುದ್ದಿಯಲ್ಲಿರುವ ಈ ಕಾ.ಪು.ಸಿದ್ದಲಿಂಗಸ್ವಾಮಿ ಎಂಬ ಕ್ಯಾಂಡಿಡೇಟು ಮೂಲತಃ ಮೈಸೂರು ಜಿಲ್ಲೆ ವರುಣಾ ಅಸೆಂಬ್ಲಿ ಕ್ಷೇತ್ರದ ಕಾರ್ಯ ಎಂಬ ಹಳ್ಳಿಯವನು. ಈತ ಜಾತಿಯಲ್ಲಿ ಲಿಂಗಾಯತನಾದರೂ ವರ್ಗದಲ್ಲಿ ಬಡ ರೈತನಾಗಿದ್ದ. ಈತನ ತಂದೆ ಪುಟ್ಟನಾದಪ್ಪ ತನ್ನ ಎರಡು ಎಕರೆಯಷ್ಟು ಭೂಮಿಯಲ್ಲಿ ಬೇಸಾಯ ಮಾಡಿ ತನ್ನ ಕುಟುಂಬ ಪೋಷಣೆ ಮಾಡುತ್ತಿದ್ದರು.

ಇಲ್ಲಿಗೆ ಸುಮಾರು 20 ವರ್ಷಗಳ ಹಿಂದೆ ಈ ಸಿದ್ದಲಿಂಗಸ್ವಾಮಿ ಕಾರ್ಯ ಗ್ರಾಮದ ಹಾಲಿನ ಡೈರಿಯಲ್ಲಿ ಹಾಲಿನ ಸ್ಯಾಂಪಲ್ ತೆಗೆಯುವ ಹುಡುಗನಾಗಿ ಕೆಲಸ ಮಾಡುತ್ತಿದ್ದ. ಟೆಸ್ಟ್‌ಗಾಗಿ ತೆಗೆದ ಸ್ಯಾಂಪಲ್ ಹಾಲಿನಲ್ಲಿ ಟೀ ಮಾಡಿಕೊಂಡು ನಾಲ್ಕು ಕಾಸು ಕಾಣುತ್ತಿದ್ದ ಅಂತಾ ಇಂದಿಗೂ ಗ್ರಾಮದ ಜನ ನೆನಪಿಸಿಕೊಳ್ಳುತ್ತಾರೆ. ನಂತರದ ದಿನಗಳಲ್ಲಿ ಸುತ್ತೂರು ಮಠದ ಜೆಎಸ್‌ಎಸ್ ಕಾಲೇಜಿನಲ್ಲಿ ವಾಚ್‌ಮ್ಯಾನ್ ಆದ. ಅದಾದನಂತರ ಕಾಲೇಜಿನ ಲೈಬ್ರರಿಯನ್ ಆಗಿ ಪುಸ್ತಕದ ಧೂಳು ಒರೆಸುತ್ತಾ ಕೆಲವು ವರ್ಷಗಳು ಕಳೆದಿದ್ದ. ಹೀಗಿದ್ದಾಗ ಮೈಸೂರಿನ ಲೇಡಿ ಕಾರ್ಪೋರೇಟರ್ ಒಬ್ಬರ ಕಣ್ಣಿಗೆ ಬಿದ್ದ. ಯಡಿಯೂರಪ್ಪನಿಗೆ ಪರಿಚಿತವಾಗಿದ್ದ ಆಕೆ ಈ ಕಾಪುನನ್ನು ಸುಮಾರು 15 ವರ್ಷಗಳ ಹಿಂದೆ ಯಡಿಯೂರಪ್ಪನ ಪರ್ಸನಲ್ ಅಸಿಸ್ಟೆಂಟ್ ಆಗಿ ಕೆಲಸಕ್ಕೆ ಸೇರಿಸಿದರು. ಹೀಗೆ ವರ್ಷಗಳು ಉರುಳಿದವು.



2004ರ ವರೆಗೆ ಈ ಕಾಪು ಯಡಿಯೂರಪ್ಪನ ಕುಟುಂಬ ವರ್ಗಕ್ಕೆ ಮಾತ್ರ ಪರಿಚಿತನಷ್ಟೆ. ಯಾಕೆಂದರೆ ಮನೆಮಂದಿಯ ಬೇಕುಬೇಡಗಳನ್ನು ಪೂರೈಸುವ ನಿಷ್ಠೆಯ ಸೇವಕನಾಗಿದ್ದರಿಂದ. 2006ರಲ್ಲಿ ಜೆಡಿಎಸ್-ಬಿಜೆಪಿ ಸಮ್ಮಿಶ್ರ ಸರ್ಕಾರದಲ್ಲಿ ಯಡ್ಡಿ ಉಪ ಮುಖ್ಯಮಂತ್ರಿ ಸ್ಥಾನಕ್ಕೇರುತ್ತಿದ್ದಂತೆ ಕಾಪುನ ಅದೃಷ್ಟ ಖುಲಾಯಿಸಿತು, ಹೂವಿನ ಹಾರ, ಹಣ್ಣಿನ ಬುಟ್ಟಿ, ಶಾಲು ಇತ್ಯಾದಿಗಳು ಬಂದಾಗ ಅವನ್ನು ಹಿಡಿದುಕೊಳ್ಳುವುದು, ಅಲ್ಲದೆ ಡಿಸಿಎಂ ಸಾಹೇಬರ ವೈಯಕ್ತಿಕ ಅಗತ್ಯ ಸೇವೆಗಳನ್ನು ಪೂರೈಸಲು ಹೇಗೂ ಒಬ್ಬ ನಿಷ್ಠಾವಂತ ಬೇಕೇಬೇಕಿತ್ತು ನೋಡಿ. ಆ ಕೆಲಸಕ್ಕೆ ಪರ್ಫೆಕ್ಟಾಗಿ ಫಿಟ್ ಆಗುತ್ತಿದ್ದವನೇ ಈ ಸ್ವಾಮಿ.

ಯಡ್ಡಿ ಸಿಎಂ ಕುರ್ಚಿಯಲ್ಲಿ ಕೂತ ಮೇಲಂತೂ ಕಾಪು ವರಸೆಯೇ ಬದಲಾಗಿ ಹೋಯ್ತು, ಸಿಎಂ ಹತ್ತಿರ ಕೆಲಸ ಕಾರ್ಯ ಆಗಬೇಕಾದರೆ ಮೊದಲು ಕಾಪು ಜೊತೆ ಡೀಲ್ ಮುಗಿಸಿಕೊಳ್ಳೋದು ಅನಿವಾರ್ಯ ಎಂಬ ಸ್ಥಿತಿ ಉಂಟಾಯಿತು. ಸ್ವತಃ ಸಿಎಂ ಅವರೇ 'ಸ್ವಾಮಿಯನ್ನು ಕಾಂಟ್ಯಾಕ್ಟ್ ಮಾಡಿ, ನಿಮ್ಮ ಕೆಲಸ ಆಗುತ್ತೆ' ಅಂತ ಹೇಳುತ್ತಿದ್ದರೆಂದು ವಿಧಾನಸೌಧದ ಮೊಗಸಾಲೆಗಳಲ್ಲೇ ಕೇಳಿಬರುತ್ತಿದ್ದ ಮಾತು.

ಸದ್ಯಕ್ಕೆ ಸ್ವಾಮಿಗೆ ಅರ್ಧ ವಯಸ್ಸು ದಾಟಿದ್ದರೂ ಇನ್ನೂ ಕಲ್ಯಾಣ ಭಾಗ್ಯವಿಲ್ಲ, ಇಂಥಾ ಈ ಸ್ವಾಮಿ ನೂರಾರು ಕೋಟಿಯ ಕುಳ ಇರಬಹುದಾ ಅಂತ ನಾವು ಕೇಳಿದರೆ 'ಇಲ್ಲಾ ಸ್ವಾಮಿ, ಸಾವಿರಾರು ಕೋಟಿಯ ಕುಳ' ಅಂತಾ ಆ ಕ್ಷೇತ್ರದ ಜನರೇ ಹೇಳ್ತಾರೆ. ಮೈಸೂರಿನಲ್ಲಿ ಹಲವಾರು ಹೋಟೆಲ್‌ಗಳು, ಕಾಂಪ್ಲೆಕ್ಸ್‌ಗಳು, ಮನೆ-ನಿವೇಶನಗಳು, ನೂರಾರು ಎಕರೆ ಜಮೀನುಗಳು ಹೀಗೆ ತಮ್ಮ ಬಂಧು ಬಳಗದವರ ಹೆಸರಿನಲ್ಲೆಲ್ಲಾ ಆಸ್ತಿ ಮಾಡಿದ್ದಾರೆ ಎಂಬ ಸುದ್ದಿ ಇದೆ. ಇದಲ್ಲದೆ ನಗನಾಣ್ಯಗಳು ಎಷ್ಟಿದೆ ಎಂಬುದರ ಲೆಕ್ಕವಂತೂ ಹೇಗೂ ಲೆಕ್ಕಕ್ಕೆ ಸಿಗುವುದಿಲ್ಲ, ಅವುಗಳಲ್ಲಿ ಯಡ್ಡಿಗೆ "ಸೇರಬೇಕಾದ್ದು" ಎಷ್ಟು? ಕಾಪುಗೆ ಬಿಟ್ಟುಕೊಟ್ಟಿರುವ ಪಾಲು ಎಷ್ಟು? ಇವು ಸದ್ಯಕ್ಕೆ ಉತ್ತರವಿಲ್ಲದ ಪ್ರಶ್ನೆಗಳು.

ಜೀವ್‌ಗೆ ಬೆಂಬಲ ಘೋಷಿಸಿದ್ದಾರೆ. ಎಲ್ಲೆಡೆ ಹೆಸರು ಡಿಸಿಕೊಂಡಿರುವ ರಾಮದಾಸ್‌ಗೇ ತನ್ನ ಗೆಲುವಿನ ಬಗ್ಗೆ ರವಸೆಯಿಲ್ಲವೆಂಬ ಮಾತುಗಳನ್ನು ಕ್ಷೇತ್ರದ ಬಿಜೆಪಿ ುಖಂಡರೇ ಹೇಳುತ್ತಿದ್ದಾರೆ. ಇಂಥಾ ಪ್ರತಿಕೂಲ ರಿಸ್ಥಿತಿಯಲ್ಲಿ ಒಂದು ವೇಳೆ ತಾನು ಸೋತರೆ ಮೈಸೂರಿನ ೋಕಸಭಾ ಅಭ್ಯರ್ಥಿಯಾಗಲು ಈಗಾಗಲೇ ಹುನ್ನಾರ ಡೆಸಿದ್ದಾನೆಂಬ ಸುದ್ದಿಯೂ ಇದೆ.

ಆದರೆ ಲೋಕಸಭಾ ಟಿಕೆಟ್ ಪಡೆಯುವ ರಾಮದಾಸ್‌ನ ನಸು ಅಷ್ಟು ಸುಲಭವಲ್ಲ. ಯಾಕೆಂದರೆ ೋ.ಮಧುಸೂದನ್ ಎಂಬ ಅಪ್ಪಟ ಆರೆಸ್ಸೆಸ್ ಪಟು ಾಗೂ ಹಾಲಿ ಎಂಎಲ್‌ಸಿ ಈಗಾಗಲೇ ಲೋಕಸಭಾ ಟಿನ ಮೇಲೆ ಕರ್ಚೀಫ್ ಹಾಕಿ ಕಾದು ಕೂತಿದ್ದಾನಂತೆ. ೊದಲೇ ಇವರಿಬ್ಬರಿಗೂ ಜಂಗಿ ಕುಸ್ತಿ ನಡೆಯುತ್ತಿದ್ದು ಾಧ್ಯಮಗಳಿಗೆ ಭರ್ಜರಿ ಮೇವು ಒದಗಿಸುತ್ತಿದ್ದಾರೆ. ಧುಸೂದನ್ ಕೂಡ ರಾಜೀವ್‌ಗೆ ತೆರೆಮರೆಯ ಬೆಂಬಲ ೂಚಿಸಿರುವುದು ರಾಮದಾಸ್‌ನ ನಿದ್ದೆ ಕೆಡಿಸಿದೆಯಂತೆ. ಷ್ಣರಾಜ ಕ್ಷೇತ್ರದಲ್ಲಿ ಬ್ರಾಹ್ಮಣರನ್ನು ಹೊರತುಪಡಿಸಿದರೆ ರಡನೇ ಸಂಖ್ಯೆಯಲ್ಲಿರುವವರು ಲಿಂಗಾಯತರು. ಿಂಗಾಯತ ಮತಗಳನ್ನು ಸೆಳೆಯಲು ಲಿಂಗಾಯತರ ಶ್ನಾತೀತ ನಾಯಕನೆಂದು ಬಿಂಬಿತವಾಗುತ್ತಿರುವ ುಡಿಯೂರಪ್ಪನಿಗೆ ಅಷ್ಟು ದೊಡ್ಡ ಸಮಸ್ಯೆಯಾಗಲಾರದು. ುತ್ತೊಂದು ಕಡೆ ಮೂರು ಮತ್ತು ನಾಲ್ಕನೇ ಸ್ಥಾನದಲ್ಲಿರುವ ಲಿತ ಮತ್ತು ಕುರುಬ ಜನಾಂಗದ ಓಟುಗಳನ್ನು ಆಧರಿಸಿ ಂಗ್ರೆಸ್ ಅಭ್ಯರ್ಥಿ ಸೋಮಶೇಖರ್ ಕಣಕ್ಕಿಳಿದಿದ್ದಾರೆ. ಾಜಿ ಎಂಎಲ್‌ಎ ಆಗಿರುವ ಸೋಮಶೇಖರ್ ಒಬ್ಬ ಜ್ಜನ ಎಂಬ ಅಭಿಪ್ರಾಯವೂ ಕ್ಷೇತ್ರದ ಮತದಾರರಲ್ಲಿದೆ.

ಈ ಎಲ್ಲಾ ಹಿನ್ನೆಲೆಯಲ್ಲಿ ಸಚಿವ ರಾಮದಾಸ್‌ನ ಾಜಕೀಯ ಭವಿಷ್ಯ ಎತ್ತ ಸಾಗಲಿದೆ ಎಂಬುದು ಮಿಲಿಯನ್ ಾಲರ್ ಪ್ರಶ್ನೆ.

ಸಿದ್ದರಾಮಯ್ಯ - ಬೆನ್ನ ಹಿಂದಿರುವ ಚೂರಿಗಳೆಷ್ಟು?

ಸಿದ್ದರಾಮಯ್ಯ ಕೇವಲ ವರುಣಾ ಕ್ಷೇತ್ರದಲ್ಲಿ ಮಾತ್ರವಲ್ಲ ಡೀ ಮೈಸೂರು ಪ್ರಾಂತದಲ್ಲೆ ಹಿಂದುಳಿದ ವರ್ಗಗಳ ಾಯಕರಾಗಿ ಗುರುತಿಸಿಕೊಂಡವರು. ಉತ್ತಮ ಆಡಳಿತಗಾರ ಂಬ ಹೆಸರು ಪಡೆದವರು. ಜೊತೆಗೆ ನಾನಾ ಹುದ್ದೆಗಳನ್ನು ರ್ವಹಿಸಿದರೂ ಕೂಡ ಎಂದಿಗೂ ಹೆಸರು ಡಿಸಿಕೊಂಡವರಲ್ಲ.

ಹೀಗಿರುವಾಗ ಇತ್ತೀಚಿನ ದಿನಗಳಲ್ಲಿ ಕಾ.ಪು. ದ್ದಲಿಂಗಸ್ವಾಮಿ ಎಂಬ ಯಡಿಯೂರಪ್ಪನ ಶಿಷ್ಯನೊಬ್ಬ ಕ್ರಮ ಹಣದ ಥೈಲಿಯೊಂದಿಗೆ ರಾಜಕೀಯಕ್ಕೆ ್ರವೇಶಿಸಿದ್ದಾನೆ.

ವಾಸ್ತವದಲ್ಲಿ ಸಿದ್ದರಾಮಯ್ಯನವರಿಗೆ ಈ ಸ್ವಾಮಿ ಯಾವ ೀತಿಯಿಂದಲೂ ಸ್ಪರ್ಧೆ ನೀಡಲು ಸಾಧ್ಯವೇ ಇಲ್ಲ. ಯಾಕೆಂದರೆ ಈತ ಜಾತಿಯಿಂದ ಲಿಂಗಾಯತ ಹಾಗೂ ುಡಿಯೂರಪ್ಪನ ಬೆಂಬಲವಿದೆ ಎಂಬ ಅಂಶಗಳನ್ನು ಬಿಟ್ಟರೆ ೇರೆ ಯಾವ ಅರ್ಹತೆಯೂ ಈತನಲ್ಲಿ ಕಂಡುಬರುತ್ತಿಲ್ಲ.

ಕ್ಷೇತ್ರದ ದೇವಸ್ಥಾನಗಳಿಗೆ, ಒಂದಷ್ಟು ಪಡ್ಡೆ ಹುಡುಗರಿಗೆ, ಾಜ್ಯೋತ್ಸವ, ಗಣೇಶ ಹಬ್ಬ ಮುಂತಾದವುಗಳಿಗೆ ಹಣ ೆಲ್ಲುವುದನ್ನು ಬಿಟ್ಟರೆ ಈತನಿಗೆ ಬೇರೆ ಯಾವ ಾಜಕೀಯವೂ ಗೊತ್ತಿಲ್ಲ. ಈ ಸ್ವಾಮಿಯ ಬಗ್ಗೆ ಲಿಂಗಾಯ ರ ಹಲವಾರು ಮುಖಂಡರಿಗೇ ಸದಭಿಪ್ರಾಯವಿಲ್ಲ.

ಅದೇನೇ ಇದ್ದರೂ ಸಿದ್ದರಾಮಯ್ಯನವರಿಗೆ ಹೊರಗಿನ ಭ್ಯರ್ಥಿಗಳಿಂದ ಯಾವುದೇ ಆತಂಕವಿದ್ದಂತಿಲ್ಲ. ಮಸ್ಯೆಯಿರುವುದು ಬೆನ್ನಹಿಂದೆ ಹಿಡಿದಿರುವ ಚೂರಿಗಳ ಗ್ಗೆ.


ಕಳೆದ ಕೆಲವು ಚುನಾವಣೆಗಳಲ್ಲಿ ಕಾಂಗ್ರೆಸ್‌ನ ಕೆಲವು ುಖಂಡರು ಸಿದ್ಧರಾಮಯ್ಯರನ್ನು ಸೋಲಿಸಲು ತಾಯಗತಾಯ ಪ್ರಯತ್ನಿಸಿದ್ದರೆಂಬ ವಿಷಯವನ್ನು ನಾಡಿನ ನ ಇನ್ನೂ ಮರೆತಿಲ್ಲ. ಮುಖ್ಯಮಂತ್ರಿ ಹುದ್ದೆಯ ಮೇಲೆ ಣ್ಣಿಟ್ಟಿರುವ ಕೆಲವು ನಾಯಕರು ಸಿದ್ದರಾಮಯ್ಯನವರನ್ನು ವರ ಕ್ಷೇತ್ರದಲ್ಲೇ ಸೋಲಿಸಿ ತಮ್ಮ ಹಾದಿ ಸುಗಮ ಾಡಿಕೊಳ್ಳಬೇಕೆಂದು ತಂತ್ರ ರೂಪಿಸುತ್ತಿದ್ದಾರೆಂಬ ಸುದ್ದಿಗಳು ಂಗ್ರೆಸ್ ವಲಯದಲ್ಲೇ ಚಾಲ್ತಿಯಲ್ಲಿವೆ. ಈ ಸುದ್ದಿಯನ್ನು ಂಬುವುದು ಅಷ್ಟೇನೂ ಕಷ್ಟದ ವಿಷಯವಲ್ಲ, ಯಾಕೆಂದರೆ ಾಂಗ್ರೆಸ್‌ನ ಇತಿಹಾಸದಲ್ಲಿ ಇಂಥಾ ಎಷ್ಟೋ ುದಾಹರಣೆಗಳು ಇದಕ್ಕೆ ಸಾಕ್ಷ್ಯ ಒದಗಿಸುತ್ತಿವೆ.

ಇಂದಿನ ರಾಜಕೀಯ ಸನ್ನಿವೇಶವನ್ನು ನುಕೂಲಕರವಾಗಿ ಬಳಸಿಕೊಂಡು ಪಕ್ಷವನ್ನು ಅಧಿಕಾರಕ್ಕೆ ರುವ ಹುಮ್ಮಸ್ಸು ಕಾಂಗ್ರೆಸ್ಸಿಗರಲ್ಲಿ ಇನ್ನೂ ಕಂಡುಬರುತ್ತಿಲ್ಲ. ದಲಿಗೆ ಪರಸ್ಪರರ ಕಾಲೆಳೆದು ಅದರಿಂದಲೇ ತೃಪ್ತಿ ಡೆಯುವ ಹೀನಗುಣ ದಿನೇದಿನೇ ಕಾಂಗ್ರೆಸ್‌ನಲ್ಲಿ ೆಚ್ಚುತ್ತಿರುವುದು ಮೈಸೂರು ಕಾಂಗ್ರೆಸ್‌ನ ಮಟ್ಟಿಗಂತೂ ಾಮಕಾರಿಯಾಗಿ ಪರಿಣಮಿಸಲಿದೆ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಕಮಲ್‌ಹಾಸನ್ ವಿಶ್ವರೂಪ ದರ್ಶನಕ್ಕೂ ಮುನ್ನ...

"ನಾನು ಹೆಣಗಾಡಲು ಬಯಸುವ ನಟ"



ಜನವರಿ 09 ಕ್ಕೆ ಕಮಲ್ ಹಾಸನ್‌ನ ವಿಶ್ವರೂಪ ದರ್ಶನವಾಗಲಿದೆ. ಅರ್ಥಾತ್ ಆತನ ಬಹುನಿರೀಕ್ಷೆಯ, ದುಬಾರಿ ವೆಚ್ಚದ 'ವಿಶ್ವರೂಪಮ್' ಸಿನಿಮಾ ತೆರೆಕಾಣಲಿದೆ. ಹೆಸರಿಗೆ ತಕ್ಕಂತೆ ಕಥೆ, ಚಿತ್ರಕಥೆ, ನಿರ್ದೇಶನ, ನಟನೆ, ನಿರ್ಮಾಣ -ಹೀಗೆ ಕಮಲ್‌ಹಾಸನ್‌ನ ವಿಶ್ವರೂಪವೇ ಚಿತ್ರದಲ್ಲಿದೆ. ಈ ಚಿತ್ರವನ್ನು ನಿರ್ದೇಶಿಸಲು ಕಾದೇಲ್ ಕೊಂಡೇನ್ ಖ್ಯಾತಿಯ ಸೆಲ್ವಾ ರಾಘವನ್ ಆಯ್ಕೆಯಾಗಿದ್ದರು. ಆದರೆ ವಿಳಂಬದ ಕಾರಣದಿಂದಾಗಿ ಕೊನೆಗೆ ಕಮಲ್‌ಹಾಸನ್‌ರೇ ನಿರ್ದೇಶನಕ್ಕಿಳಿದಿದ್ದರು. ಚಿತ್ರದ ಕುರಿತು ಕಮಲ್‌ಹಾಸನ್ ಇತ್ತೀಚಿಗೆ ನೀಡಿದ ಸಂದರ್ಶನವೊಂದರ ಆಯ್ದ ಭಾಗ ಇಲ್ಲಿದೆ.....

ಎ ವಿಶ್ವರೂಪಮ್ ಸಿನಿಮಾದ ನಿರ್ದೇಶನವನ್ನು ನೀವೇ ವಹಿಸಿಕೊಂಡಿದ್ದೇಕೆ?*

ಕಮಲ್: ಆರಂಭದಲ್ಲಿ ಈ ಚಿತ್ರದ ಕಥೆ ಮತ್ತು ನಿರ್ಮಾಣ ಮಾತ್ರ ನನ್ನದಾಗಿತ್ತು. ಆದರೆ ಸಮಯ ಕಳೆದಂತೆ ಹೊಸ ಹೊಸ ಸಮಸ್ಯೆಗಳು ಕಾಣಿಸಿಕೊಂಡವು. ನನ್ನ ಡೇಟ್ಸ್ ವಿನಾಕಾರಣ ವೇಸ್ಟ್ ಆಗತೊಡಗಿದವು. ನಾನು ಒಂದು ಬಾರಿಗೆ ಒಂದು ಸಿನಿಮಾ ಮಾತ್ರ ಮಾಡ್ತೀನಿ. ಹಾಗಾಗಿ ಈ ಚಿತ್ರ ಡೇಟ್ ವೇಸ್ಟ್ ಆದ್ರೆ ಅದನ್ನ ಮತ್ತೊಂದು ಸಿನಿಮಾದಲ್ಲಿ ಬಳಸಿಕೊಳ್ಳೋಕೆ ಸಾಧ್ಯವಿಲ್ಲ. ನಿರ್ದೇಶಕರು ನನ್ನ ಸಮಯಕ್ಕೆ ಬೆಲೆ ಕೊಡ್ಲಿಲ್ಲ ಅಂದ್ರೆ, ನಾನಾದ್ರು ನನ್ ಸಮಯಕ್ಕೆ ಬೆಲೆ ಕೊಡ್ಲೇಬೇಕಲ್ವಾ? ನನ್ನ ಡೇಟ್ಸ್‌ಗಳು ವೇಸ್ಟ್ ಆಗೋದಾದ್ರೆ, ಸಿನಿಮಾನ ನಾನೇ ನಿರ್ದೇಶನ ಮಾಡೋದು ಒಳ್ಳೇದು ಅನ್ನಿಸ್ತು. ನನ್ನ ಬಳಿ ಹೆಚ್ಚೇನು ಸಮಯವಿಲ್ಲ, ಯಾಕಂದ್ರೆ ನಾನು ಪ್ರತಿ ವರ್ಷ ಬರ್ತ್‌ಡೇ ಆಚರಿಸಿಕೊಳ್ಳೋನು. ಆಳುವ ಸರ್ಕಾರಗಳ ತರಹ ಐದು ವರ್ಷಕ್ಕೊಮ್ಮೆ ಬರ್ತ್‌ಡೇ ಆಚರಿಸಿಕೊಳ್ಳೋ ಆಗಿದ್ದಿದ್ರೆ ಎಷ್ಟು ಚೆನ್ನಾಗಿರ್ತಿತ್ತು, ನಾನೂ ಐದು ವರ್ಷಕ್ಕೊಮ್ಮೆ ಬರ್ತ್‌ಡೇ ಮಾಡ್ಕೊಳ್‌ಬೇಕು ಅಂತ ಬಯಸ್ತೀನಿ.

** ನಿಮ್ಮ ವಿಶ್ವರೂಪಮ್ ಸಿನಿಮಾ ಆಂಥೋನಿ ಹಾಪ್‌ಕಿನ್ಸ್ ನಟನೆಯ 'ಹನಿಬಾಲ್' ಚಿತ್ರದಿಂದ ಪ್ರೇರಣೆ ಪಡೆದಿದೆ ಎನ್ನಲಾಗ್ತಿದೆ?*

ಕಮಲ್: ಈ ಮಾತನ್ನ ಕೇಳಿಸ್‌ಕೊಂಡ್ ಮೇಲೆ 'ಹನಿಬಾಲ್' ಆಧರಿಸಿ ಒಂದು ಸಿನಿಮಾ ಮಾಡ್ಬೇಕು ಅನ್ನಿಸ್ತಿದೆ. ಮುಂದೆ ಅಂತಹದ್ದೊಂದು ಸಿನಿಮಾ ಖಂಡಿತ ಮಾಡ್ತೀನಿ. ಆದ್ರೆ ಈಗ ಮಾಡಿರೋದು ಅದಲ್ಲ, ವಿಶ್ವರೂಪಮ್‌ನ ಕಥೆ ನನ್ನ ಹೃದಯಕ್ಕೆ ಹತ್ತಿರದ ಥೀಮ್. ನಮ್ಮಲ್ಲಿ ಮಾಧ್ಯಮಗಳು ಹೇಗಿವೆ ಅಂದ್ರೆ, ಹಿಂದೆಮುಂದೆ ಯೋಚಿಸದೆ ವಿಷಯದ ಮೇಲೆ ಜಂಪ್ ಮಾಡಿ, ತಮ್ಮದೇ ನಿರ್ಧಾರ ತೇಲಿಬಿಟ್ಟು, ಪ್ರಮಾದಗಳನ್ನು ಸೃಷ್ಟಿಸಿಬಿಡ್ತವೆ. ಉದಾಹರಣೆಗೆ ನಾನೊಂದು ಆಧ್ಯಾತ್ಮಿಕ ಸಿನಿಮಾ ಮಾಡ್ತೀನಿ ಅಂತಾದ್ರೆ, ಓಹ್ ಅದು ಕಮಲ್‌ಹಾಸನ್ ಆಗಿರೋದ್ರಿಂದ ಸಿನಿಮಾ ವಿವಾದಾತ್ಮಕವಾಗಿರುತ್ತೆ ಅಂತ ತೀರ್ಮಾನಿಸಿ, ಚಿತ್ರ ತಯಾರಾಗೋದ್ರೂ ಮುಂಚೇನೆ ಬ್ಯಾನ್ ಮಾಡಿ ಬಿಡ್ತವೆ.

** ಈ ಚಿತ್ರ ಒಟ್ಟೊಟ್ಟಿಗೆ ಎರಡು ಭಾಷೆಯಲ್ಲಿ (ಹಿಂದಿ ಮತ್ತು ತಮಿಳು) ತಯಾರಾಗ್ತಿದೆ...*

ಕಮಲ್: ಹೌದು, ನನ್ನ ಇತ್ತೀಚಿನ ಬಹುತೇಕ ಚಿತ್ರಗಳಂತೆ ಇದು ದ್ವಿಭಾಷಿ ಸಿನಿಮಾ. ಚಿತ್ರವನ್ನು ಬೇರೊಂದು ಭಾಷೆಗೆ ಡಬ್ ಮಾಡೋದು ಕೆಲವೊಮ್ಮೆ ಅವಾಂತರ ಸೃಷ್ಟಿಸುತ್ತೆ, ಯಾಕೆಂದರೆ ಭಾಷಾ ಉಚ್ಚಾರಣೆ ವ್ಯತ್ಯಯವಾಗಿರುತ್ತೆ. ನನ್ನ ದಶಾವತಾರಮ್ ಸಿನಿಮಾವನ್ನು ಹಿಂದಿಗೆ ಡಬ್ ಮಾಡಿದಾಗ ಈ ಸಮಸ್ಯೆಯನ್ನ ನಾನು ಖುದ್ದು ಗಮನಿಸಿದ್ದೆ. ನನ್ನ ಪ್ರಕಾರ 'ಅಪ್ಪು ರಾಜಾ'ನಂತ ಪಕ್ಕಾ ಕಾಮಿಡಿ ಚಿತ್ರವಲ್ಲದೆ ಬೇರೆ ಸಿನಿಮಾಗಳಿಗೆ ಡಬ್ಬಿಂಗ್ ಅಷ್ಟಾಗಿ ವರ್ಕ್‌ಔಟ್ ಆಗೊಲ್ಲ. ಡಬ್ಬಿಂಗ್‌ಗೆ ಆಯಾ ಭಾಷೆಗಳಲ್ಲಿನ ಸಾಂಸ್ಕೃತಿಕ ವಿಶೇಷಣಗಳು ಅಡ್ಡಿಯಾಗ್ತವೆ. 'ಜೈಸೆ ಕರ್ನಿ ವೈಸೇ ಭರ್ನಿ' ಇದನ್ನ ತಮಿಳಿನಲ್ಲಿ ಹೇಗೆ ಹೇಳ್ತೀರಿ?

ಅದಕ್ಕೋಸ್ಕರವೇ ಈ ಸಿನಿಮಾವನ್ನ ಎರಡು ಭಾಷೆಯಲ್ಲಿ ಪ್ರತ್ಯೇಕವಾಗಿಯೇ ಚಿತ್ರೀಕರಿಸ್ತಿದೇವೆ. ಇದಕ್ಕೋಸ್ಕರ ಭಾಷೆಯ ಮಿತಿಯ ಬಗ್ಗೆ ಅಂಜಿಕೆ ಇರದ ನಾಯಕಿ ಬೇಕಾಗಿತ್ತು. ಅದನ್ನು ಪೂಜಾ ಕುಮಾರ್ ಸಮರ್ಥವಾಗಿ ನಿಭಾಯ್ಸಿದಾಳೆ. ಈಕೆ ಮೂಲತಃ ಪಂಜಾಬಿ ಆದ್ರೂ ಎನ್.ಆರ್.ಐ ನಟಿ, ಪ್ರತಿಭಾವಂತೆ. ತನ್ನ ಭಾಷಾ ಮಿತಿ ಸಾಮರ್ಥ್ಯದ ಬಗ್ಗೆ ಯಾವ ಅಂಜಿಕೆಯೂ ಈಕೆಯಲ್ಲಿಲ್ಲ. ಕೆಲವರಿಗೆ ಅಂತಹ ಭಯ ಇರುತ್ತೆ. ಓಂಪುರಿ ಸಾಹೇಬ್ರಿಗೂ ಈ ಭಯ ಇದೆ. ಅದಕೆ ಅವ್ರು ತಮಿಳ್ ಚಿತ್ರ ಮಾಡೋಕೆ ಒಪ್ಕೋಳೋದಿಲ್ಲ. ಕೆಲವ್ರಂತು ತಮಗೆ ಗೊತ್ತಿರದ ವಿಷಯದ ಕುರಿತು ವಿಪರೀತ ಭಯ ಬೆಳಿಸ್ಕೊಂಡಿರ್ತಾರೆ. ನಾನಂತು ನನಗೆ ಗೊತ್ತಿಲ್ಲದ ವಿಷಯದ ಮೈಮೇಲ್ ಬಿದ್ದು ಅದ್ನ ಆವರಿಸ್ಕೊಂಡ್‌ಬಿಡ್ತೀನಿ.

** ಈ ಸಿನಿಮಾದಲ್ಲಿ ನಿಮಗೆ ಜೊತೆಯಾಗಿ ಸೋನಾಕ್ಷಿ ಸಿನ್ಹಾ ನಟಿಸಬೇಕಿತ್ತು. ಆದ್ರೆ ಕೊನೆಗೆ ಡ್ರಾಪ್ ಆದದ್ದೇಕೆ? ಆಕೆ ನಿಮಗಿಂತ ತುಂಬಾ ಯಂಗ್ (ಚಿಕ್ಕ ವಯಸ್ಸಿನವಳು) ಅನ್ನೋ ಕಾರಣಕ್ಕಾ?*

ಕಮಲ್: ಇದು ಪೂರ್ತಿ ಡೇಟ್ಸ್‌ನ ಸಮಸ್ಯೆ ಅಷ್ಟೆ. ಆಕೆ ಮತ್ತು ನಾನು ಇಬ್ರೂನು ಪ್ರಾಜೆಕ್ಟ್‌ನಲ್ಲಿ ಜೊತೆಯಾಗಿ ನಟಿಸ್ಬೇಕು ಅಂತ ತುಂಬಾ ಪ್ರಯತ್ನ ಪಟ್ಟೆವು. ಆದ್ರೆ ಲೀಗಲ್ ಕಾಂಟ್ರ್ಯಾಕ್ಟ್‌ನಿಂದಾಗಿ ಅದು ಸಾಧ್ಯವಾಗ್ಲಿಲ್ಲ. ಆ ಕಾರಣಕ್ಕೇ ಆಕೆ ಹೊರಹೋದಳು. ಅದರ ಹೊರತಾಗಿ ನಮ್ಮ ನಡುವೆ ಯಾವುದೇ ಮನಸ್ತಾಪ, ಜಗಳ, ಅಹಂನ ಕಲಹಗಳಿಲ್ಲ.

ಇನ್ನು ವಯಸ್ಸಿನ ಅಂತರ, ಮಾಧ್ಯಮಗಳ ವಿಶ್ಲೇಷಣೆ ಅಷ್ಟೆ. ಅಷ್ಟಕ್ಕೂ ನಾನು ನನ್ನ ವಯಸ್ಸಿಗೆ ತಕ್ಕ ಪಾತ್ರ ಮಾಡಿದ್ರೆ, ಆಕೆ ಆಕೆಯ ವಯಸ್ಸಿನ ಪಾತ್ರ ಮಾಡ್ತಿದ್ಲು, ಅದ್ರಲ್ಲಿ ತೊಂದ್ರೆ ಏನೂ ಬರ್ತಾ ಇರ್ಲಿಲ್ಲ.

** ಇದೇ ನವೆಂಬರ್‌ಗೆ ನಿಮಗೆ 57 ವರ್ಷ ತುಂಬಿತು. ಈ 57 ವರ್ಷಗಳಲ್ಲಿ 50 ವರ್ಷಗಳನ್ನ ಕ್ಯಾಮೆರಾ ಮುಂದೆಯೇ ಕಳೆದಿದೀರಿ. ನಿಮಗೆ ದಣಿವು ಅನ್ನಿಸ್ತಿಲ್ವಾ?*

ಕಮಲ್: ಕ್ಯಾಮೆರಾ ಮುಂದೆ ನಟಿಸೋದನ್ನ ನನ್ನ ದುಡಿಮೆ ಅಂತ ಭಾವಿಸಿದ ದಿನ ನನಗೆ ನೀವು ಹೇಳಿದ ದಣಿವು ಆಗಬಹುದು. ಹಣ ಮತ್ತು ಹೆಸರಿಗೋಸ್ಕರ ಮಾಡುವ ಕೆಲಸಗಳು ನಮ್ಮನ್ನ ಸುಸ್ತುಗೊಳಿಸ್ತವೆ. ಹೀಗೆ ಮಾಡೋದನ್ನ ನಾನು ಇಲ್ಲಿಗೆ ಇಪ್ಪತ್ತೈದು ವರ್ಷಗಳ ಹಿಂದೆಯೇ ನಿಲ್ಲಿಸಿಬಿಟ್ಟಿದ್ದೇನೆ. ನನ್ನ ಜೀವನದ ಸಂತಸದ ಕ್ಷಣಗಳೆಂದರೆ ಕ್ಯಾಮೆರಾ ಮುಂದಿರುವಷ್ಟು ಸಮಯ ಮಾತ್ರ. ಕ್ಯಾಮೆರಾ ಮುಂದಿರದ ಕ್ಷಣದಲ್ಲಿ ನಾನು ಹಿನ್ನೋಟಕ್ಕೆ ಜಾರಿಕೊಳ್ತೀನೆ ಇಲ್ಲವೇ ವಿಷಣ್ಣನಾಗಿ ಬಿಡ್ತೇನೆ.

ನಟನೆ ಅನ್ನೋದು ನನಗೆ ಚಿಕ್ಕವನಿದ್ದಾಗ ಆಡ್ತಿದ್ದ ಇಸ್ಪೀಟ್ ಕಾರ್ಡ್‌ಗಳಿಂದ ಬಿಲ್ಡಿಂಗ್ ಕಟ್ಟಿದ ಆಟದಂತೆ. ನಾನು ಹಾಗೆ ಕಟ್ಟೋದನ್ನ ನೋಡಿ ನಮ್ಮಮ್ಮ 'ನೀನೇನು ತಾಜ್‌ಮಹಲ್ ಕಟ್ಟುತ್ತೀಯಾ?' ಅಂತ ರೇಗೋಳು. ಆದ್ರೆ ನನಗೆ ಅದು ತಾಜ್‌ಮಹಲ್ ಕಟ್ಟಿದಷ್ಟೇ ಆನಂದ ಕೊಡ್ತಿತ್ತು. ಇವತ್ತು ನನಗೆ ನಾನೇ, ತನಗಿಂತ ಎತ್ತರವಾದದ್ದನ್ನ(ತನ್ನ ಕೆರಿಯರ್ ಜೀವನವನ್ನು ಪರಿಗಣಿಸಿ) ಕಟ್ಟಿದ ಶಹಜಹಾನ್‌ನ ತರಾ ಕಾಣಿಸ್ತೀನಿ. ನನ್ನ ವೃತ್ತಿಯೇ ಅವತ್ತಿನ ನನ್ನ ಕಾರ್ಡ್ ಮನೆ. ಒರಿಸ್ಸಾದ ಬೀಚ್‌ಗಳಲ್ಲಿ ಕಲಾಕೃತಿಗಳನ್ನು ರಚಿಸೋ ಕಲಾವಿದರು ಇದೇ ಕಾರಣಕ್ಕೆ ನನಗೆ ಇಷ್ಟವಾಗ್ತಾರೆ. ಒಂದು ಸುಂದರ ಕಲೆಯನ್ನು ಮರಳಲ್ಲಿ ಅರಳಿಸುವ ಅವರು ಗಾಳಿಯೋ, ನೀರೋ ಅದನ್ನು ಒರೆಸಿ ಹಾಕುವಾಗ ಸುಮ್ಮನೇ ನಿಂತು ನೋಡ್ತಾರೆ.


** ಇವತ್ತಿಗೂ ನಿಮ್ಮ ಚಿತ್ರಗಳ ಬಗ್ಗೆ ಇಷ್ಟೊಂದು ಕಾತರ, ಉತ್ಸಾಹ ಹೊಂದಿದ್ದೀರಲ್ಲ, ಅದು ಹೇಗೆ ಸಾಧ್ಯ?*

ಕಮಲ್: ನನ್ನ ಮೊದಲ 100 ಸಿನಿಮಾಗಳು ಸೋಲುಗೆಲುವಿನ ಮಾರ್ಕೆಟ್ ಹಿತದೃಷ್ಟಿ ಇಟ್ಟುಕೊಂಡೇ ನಿರ್ಮಿಸಿದಂತವು. ಮೊದಲೆಲ್ಲ ಆ ಕಾರಣಕ್ಕೆ ನಾನೂ ಸಿನಿಮಾಗಳನ್ನು ಒಪ್ಪಿಕೊಳ್ತಿದ್ದೆ, ಆದ್ರೆ ನಾನು ಮಾಡ್ಬೇಕಾದದ್ದು ಅದನ್ನು ಮೀರಿದ ಬಹಳಷ್ಟಿತ್ತು, ನನ್ನ ವೃತ್ತಿಜೀವನದ ಕುರಿತು ಜನ ನನಗೆ ಸಲಹೆ ಕೊಟ್ರು, ಸಮಾಲೋಚನೆ ನೀಡಿದ್ರು, ಕೆಲವೊಮ್ಮೆ ಬೈದು ಸಹ ಬುದ್ದಿ ಹೇಳಿದ್ರು, ಕೊನೆಗೆ ಒಂದು ದಿವಸ ನನಗೆ ಜ್ಞಾನೋದಯ ಆಯ್ತು, ನನ್ನೊಳಗಿರುವ ಕಮಲ್‌ಹಾಸನ್ ಎಂಬ ನಟನನ್ನು ಪ್ರೋತ್ಸಾಹಿಸಬೇಕು ಅನ್ನಿಸ್ತು, ಅವಾಗ್ಲಿಂದ ಆತನನ್ನ ಬೆಂಬಲಿಸಲಿಕ್ಕೆ ನಾನು ಯಾವಾಗ್ಲೂ ಉತ್ಸುಕನಾಗೇ ಇರ್ತೀನಿ.

** ನಿಮಗೆ ಹಿಂದಿ ಸಿನಿಮಾಗಳು ಸ್ಫೂರ್ತಿ ಅಂತ ಅನ್ನಿಸುತ್ತವೆಯೇ?*

ಕಮಲ್: ಹೌದು ಕೆಲ ಸಿನಿಮಾಗಳು ನನ್ನ ಆಸಕ್ತಿಯನ್ನ ಕೆರಳಿಸಿದ್ದಿದೆ. ಅಮೀರ್ ಖಾನ್ ಮಾಡ್ತಿರುವ ಸಿನಿಮಾ ಕುರಿತು ನನಗೆ ಹೆಮ್ಮೆ ಇದೆ. ಬಾಲಿವುಡ್‌ನ ಜನ ಹತ್ತು ವರ್ಷಗಳ ಹಿಂದೆಯೇ ತರಬೇಕಾಗಿದ್ದಂತಹ ಚಿತ್ರಗಳನ್ನು ಆತ ಈಗಲಾದರೂ ತರುತ್ತಿರುವುದು ನನಗೆ ನಿಜಕ್ಕೂ ಸಂತಸ ತಂದಿದೆ. ಉತ್ತಮ ಚಿತ್ರಗಳು ಮುಂಬೈನಿಂದ ಮಾತ್ರವಲ್ಲ, ಭಾರತದ ಯಾವುದೇ ಭಾಗದಿಂದಲಾದರೂ ನಿರ್ಮಾಣವಾಗಬಹುದು ಮತ್ತು ಕಾಲದ ಮಿತಿಯಿಲ್ಲದೆ ಯಾವಾಗ ಬೇಕಾದರು ನಿರ್ಮಾಣ ಹೊಂದಬಹುದು.

** ನೀವು ಯಾವಾಗಲು ತ್ರಾಸದಾಯಕ ಪ್ರಾಜೆಕ್ಟ್‌ಗಳನ್ನೇ*



ಕೈಗೆತ್ತಿಕೊಳ್ತೀರಿ. ಅದರ ಬದಲು ತಣ್ಣಗೆ ಆಕ್ಟಿಂಗ್ ಮಾಡಿಕೊಂಡಿರುವಂತಹ ಪಾತ್ರಗಳನ್ನೇ ಆಯ್ದುಕೊಳ್ಳಬಹುದಲ್ಲ?

ಕಮಲ್: ಆದ್ರೆ ನಾನೊಬ್ಬ ಹೆಣಗಾಡುವ ನಟ! ಹಾಗೆ ಹೆಣಗಾಡುವ ನಟನಾಗಿ ಇರಲಿಕ್ಕೇ ಬಯಸುತ್ತೇನೆ. ನಾನು ಒಂದು ಪ್ರೊಜೆಕ್ಟ್ ಅನ್ನು ಅನೌನ್ಸ್ ಮಾಡ್ತೀನಿ, ಅದರ ತಯಾರಿ ನಡೆಯುತ್ತೆ ಆಮೇಲೆ ಕ್ಯಾಮೆರಾ ರೋಲ್ ಆಗಲು ಶುರುವಾಗುತ್ತೆ, ಅಲ್ಲಿಂದಾಚೆಗೆ ನಾನು ಸಂತೋಷವಾಗಿಯೇ ಪ್ರಾಜೆಕ್ಟ್ ಮುಗಿಸುತ್ತೇನೆಯೇ ಹೊರತು, ತ್ರಾಸು ಅಂತನ್ನಿಸುವುದಿಲ್ಲ, ಈಗಲೂ ನಾಯಕ ನಟನಾಗಿ ನಟಿಸುವ ಅವಕಾಶ ಸಿಕ್ಕುತ್ತಿರುವುದು ಬಹುಶ ನನ್ನ ಅದೃಷ್ಟವಿರಬಹುದೇನೊ.

ನನ್ನ ವೃತ್ತಿಗುರು ಬಾಲಚಂದರ್ ನನ್ನ ಸ್ಫೂರ್ತಿ. 40 ವರ್ಷಗಳ ಹಿಂದೆಯೇ ಅವರಿಗೆ ಹಾರ್ಟ್ ಅಟ್ಯಾಕ್ ಆಗಿತ್ತು ಅದಾದ 46 ವರ್ಷಗಳ ನಂತರವೂ ಅವರು ಚಿತ್ರ ನಿರ್ದೇಶಿಸುತ್ತಲೇ ಇದ್ದರು. ಅವರು ವಯಸ್ಸಾದವರಂತೆ ಮೂಲೆ ಹಿಡಿಯಲೇ ಇಲ್ಲ, ಇವತ್ತಿಗೂ ಅವರು ಮುದುಕರಾಗಿದ್ದರೆಂದೂ ಊಹಿಸಿಕೊಳ್ಳಲಿಕ್ಕೂ ನನ್ನಿಂದಾಗದು. ಹಾಗಾಗಿ ನಾನು ವೃತ್ತಿಜೀವನದುದ್ದಕ್ಕೂ ಕೂಲ್ ನಟನಾಗುವುದಕ್ಕಿಂತ ಹೆಣಗಾಟದ ನಟನಾಗಿಯೇ ಉಳಿಯಲು ಇಚ್ಛಿಸುತ್ತೇನೆ.

ಸಂಗ್ರಹ ನಿರೂಪಣೆ

ಗಿರೀಶ್ ತಾಳಿಕಟ್ಟೆ

ಶೆಟ್ಟರ್ ಸರ್ಕಾರವನ್ನು ICUನಲ್ಲಿಟ್ಟ ಯಡ್ಡಿ



ರಾಜ್ಯದಲ್ಲಿ ಇತ್ತೀಚೆಗೆ ನಡೆದಿರುವ ಹಲವು ಘಟನೆಗಳನ್ನು ಅವಲೋಕಿಸಿದರೆ ಜಗದೀಶ್ ಶೆಟ್ಟರ್ ಅವರ ಸರ್ಕಾರ 'ಐಸಿಯು' ಘಟಕದಲ್ಲಿರುವುದನ್ನು ಖಚಿತಪಡಿಸುತ್ತದೆ. ಶತಾಯಗತಾಯ ಬಿಜೆಪಿ ಸರ್ಕಾರಕ್ಕೆ ಆದಷ್ಟು ಮುಖಭಂಗ ಮಾಡಬೇಕೆಂದು ಹಗಲಿರುಳೂ ಪ್ರಯತ್ನಿಸುತ್ತಿರುವ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಮೊನ್ನೆ "ಈ ಜನವಿರೋಧಿ ಶೆಟ್ಟರ್ ಸರಕಾರವನ್ನು ಪದಚ್ಯುತಿಗೊಳಿಸಬೇಕು" ಎಂದು ರಾಜ್ಯಪಾಲರನ್ನು ಒತ್ತಾಯಿಸಿದರು. ಇದೇ ಹೊತ್ತಿಗೆ ಉಪಮುಖ್ಯಮಂತ್ರಿ ಈಶ್ವರಪ್ಪನ ಸಾಮ್ರಾಜ್ಯದ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಿಢೀರನೆ ದಾಳಿ ಮಾಡಿದರು. 'ಗೋವಿನಂತಹ' ಮುಖ್ಯಮಂತ್ರಿ ಶೆಟ್ಟರ್ ಕೊನೆಗೂ ಧೈರ್ಯಮಾಡಿ ಯಡ್ಡಿ ವಿವಿಧ ನಿಗಮ ಮತ್ತು ಮಂಡಳಿಗಳಿಗೆ ನೇಮಿಸಿದ್ದ ಸುಮಾರು 32 ಜನ ಹಿಂಬಾಲಕರನ್ನು ವಜಾಗೊಳಿಸಿದರು. ಅಷ್ಟೇ ಅಲ್ಲ, ಇಲ್ಲಿಯತನಕ ತೆರೆಯ ಹಿಂದೆ ಕಿತಾಪತಿಮಾಡುತ್ತಾ ಹೊರಗೆ ಗಪ್‌ಚುಪ್ ಆಗಿರುತ್ತಿದ್ದ ಅನಂತ್‌ಕುಮಾರ್ ಈಗ ಸಾರ್ವಜನಿಕವಾಗಿ ಯಡ್ಡಿಯನ್ನು ಕುಟುಕಲಾರಂಭಿಸಿದ್ದಾರೆ.


. . . ಇದೆಲ್ಲ ಹೇಗಿದೆ ಎಂದರೆ ಸರ್ಕಾರ ಪತನವಾಗುವುದು ಗ್ಯಾರಂಟಿ, ಆದರೂ ಕೊನೆಯುಸಿರಿರುವವರೆಗೂ ಸಾಧ್ಯವಾದಷ್ಟು ಗಲಾಟೆ ಮಾಡಿಹೋಗುವ ಇರಾದೆ ಬಿಜೆಪಿಗಳಿಗೆ ಇದ್ದಂತಿದೆ. ಸದ್ಯದ ರಾಜಕೀಯ ಲೆಕ್ಕಾಚಾರದ ಪ್ರಕಾರ ಶೆಟ್ಟರ್ ನೇತೃತ್ವದ ಬಿಜೆಪಿ ಸರ್ಕಾರ ಯಡಿಯೂರಪ್ಪ ಧಮಕಿ ಹಾಕಿರುವಂತೆ ಜನವರಿ 20ರ ಹೊತ್ತಿಗೆ ಪತನಗೊಳ್ಳುವುದೊ ಇಲ್ಲವೋ ಎಂಬುದಷ್ಟೇ ಆಗಿದೆ.

ಸಂಕ್ರಾಂತಿ ಹಬ್ಬವನ್ನು ಅಧಿಕಾರದಲ್ಲಿದ್ದು ಆಚರಿಸಲಾಗುತ್ತದೆಯೋ ಇಲ್ಲವೋ ಎಂಬ ಭಯ ಈಗ ಬಿಜೆಪಿ ವಲಯದಲ್ಲಿ ಆರಂಭವಾಗಿದೆ. ಬಿಜೆಪಿಗೆ ಗುಡ್‌ಬೈ ಹೇಳಿ ಕೆಜೆಪಿಯನ್ನು ಹುಟ್ಟುಹಾಕಿರುವ ಯಡಿಯೂರಪ್ಪನ ಒಂದೊಂದು ನಡೆ-ನುಡಿಯೂ ಶೆಟ್ಟರ್ ನೇತೃತ್ವದ ಸರ್ಕಾರವನ್ನು ಪತನದ ಅಂಚಿಗೆ ತಳ್ಳುತ್ತಿದೆ. ತನಗೆ ಇಷ್ಟವಾದವರನ್ನು ಮುಖ್ಯಮಂತ್ರಿಯಾಗಿ ಪಟ್ಟಾಭಿಷೇಕ ಮಾಡುವುದು, ಕೋಪ ಬಂದಾಗ ಅವರನ್ನು ಪದಚ್ಯುತಿಗೊಳಿಸುವುದನ್ನು ಯಡ್ಡಿ ಮಕ್ಕಳಾಟದ ತರಹ ಮಾಡಿಕೊಂಡು ಬಂದಿದ್ದು ಈಗ ಇತಿಹಾಸ. ಆದರೆ ಕೆಟ್ಟ ಚಾಳಿ ಬಿಡಬೇಕಲ್ಲ... ತಾನು ಹೇಗೆ ಆಡಿಸಿದರೂ ಶೆಟ್ಟರ್ ಸರ್ಕಾರ ಬೀಳದಿರುವುದನ್ನು ಕಂಡು ಕೆಂಡಾಮಂಡಲವಾಗಿರುವ ಯಡ್ಡಿ ಈಗ ತನ್ನ ಮಾಜಿ ಪರಮವೈರಿ ರಾಜ್ಯಪಾಲ ಹಂಸರಾಜ್ ಭಾರದ್ವಾಜ್ ಅವರನ್ನು ಭೇಟಿ ಮಡಿ "ಈ ಸರ್ಕಾರಕ್ಕೆ ಬಹುಮತವಿಲ್ಲ. ಆದ್ದರಿಂದ ಇದು ಅಧಿಕಾರದಲ್ಲಿರಲು ನೈತಿಕತೆ ಹೊಂದಿಲ್ಲ" ಎಂದೆಲ್ಲ ಮನವಿ ಮಾಡಿಕೊಂಡಿದ್ದಾರೆ. ಆದರೆ ರಾಜ್ಯಪಾಲರು ಎಂದಿನಂತೆ ಬೊಮ್ಮಾಯಿ ಕೇಸಿನಲ್ಲಿ ಸುಪ್ರೀಂಕೋರ್ಟ್ ನೀಡಿದ್ದ ತೀರ್ಪನ್ನು ಯಡ್ಡಿ ಗಮನಕ್ಕೆ ತಂದು ಕೈಚೆಲ್ಲಿದ್ದಾರೆ.

ರಾಜ್ಯಪಾಲರೇ ಅಸಹಾಯಕತೆಯನ್ನು ವ್ಯಕ್ತಪಡಿಸಿದ ನಂತರವೇ ಯಡ್ಡಿ ಕೆಜೆಪಿ ಕಾರ್ಯಕರ್ತರಿಂದ 'ವಿಧಾನ ಸೌಧ ಚಲೋ' ಕಾರ್ಯಕ್ರಮವನ್ನು ಹಾಕಿಕೊಂಡರು. ಜೊತೆಜೊತೆಗೆ ತನ್ನ ಬೆಂಬಲಿಗರಿಗೆ "ಜನವರಿ 20ರೊಳಗೆ ನಮ್ಮ ಪಕ್ಷಕ್ಕೆ ಬರುವವರೆಲ್ಲಾ ಬಂದುಬಿಡಬೇಕು. ಆ ನಂತರ ಬರುವವರಿಗೆ ಬಾಗಿಲು ತೆರೆದಿರುವುದಿಲ್ಲ" ಎಂದು ಕರೆ ನೀಡಿದರು.

ಜನವರಿ 20ರ ನಂತರವೇ ಸರ್ಕಾರ ಬೀಳುತ್ತದೋ ಇಲ್ಲವೋ, ಅದು ಬೇರೆ ಮಾತು. ಆದರೆ ಇದರ ಹಿಂದಿರುವ ಮುಖ್ಯ ಉದ್ದೇಶ ಹೇಗಾದರೂ ಮಾಡಿ ಮುಖ್ಯಮಂತ್ರಿ ಶೆಟ್ಟರ್ ಬಜೆಟ್‌ಅನ್ನು ಸದನದಲ್ಲಿ ಮಂಡಿಸದಂತೆ ತಡೆಯುವುದೇ ಆಗಿದೆ. ಕಳೆದ ವರ್ಷ ಸದಾನಂದ ಗೌಡ ಮುಖ್ಯಮಂತ್ರಿ ಆಗಿದ್ದಾಗಲೂ ಅವರು ಬಜೆಟ್ ಮಂಡಿಸದಂತೆ ತಡೆಯಲು ಯಡ್ಡಿ ಹಲವಾರು ಕುತಂತ್ರಗಳನ್ನು ನಡೆಸಿದ್ದರು. ಆದರೆ ಅದ್ಯಾವುದೂ ಫಲ ಕೊಡದಿದ್ದರಿಂದ ಸದಾನಂದ ಗೌಡರು ಸದನದಲ್ಲಿ ತಮ್ಮ ಬಜೆಟ್ ಮಂಡಿಸಿದ್ದರಲ್ಲದೆ ಯಡ್ಡಿಗೆ ಮುಖಭಂಗ ಮಾಡಿದ್ದರು.

ಈ ಬಾರಿ ಶೆಟ್ಟರ್ ಬೆನ್ನಿಗೆ ಆರೆಸ್ಸೆಸ್ ಮತ್ತು ಬಿಜೆಪಿ ನಿಂತಿದೆ. ಮಾತ್ರವಲ್ಲ ಹಿರಿಯ ಚೆಡ್ಡಿ ನಾಯಕರು ಒಂದು ದೊಡ್ಡ ಸಂಚನ್ನು ರೂಪಿಸಿದ್ದಾರೆ. ಅದೇನೆಂದರೆ ಇದು ಬಿಜೆಪಿ ಸರ್ಕಾರದ ಕೊನೆ ಬಜೆಟ್ ಆಗುವುದರಿಂದ ಅದರಲ್ಲಿ




ಲಂಗುಲಗಾಮಿಲ್ಲದೆ ಹತ್ತಾರು ಯೋಜನೆಗಳನ್ನು ಅನೌನ್ಸ್ ಮಾಡುವುದು. ಬಜೆಟ್ ಮಂಡಿಸಿದ ನಂತರ ಸರ್ಕಾರ ಅಸ್ತಿತ್ವದಲ್ಲಿ ಇರುತ್ತದೋ ಇಲ್ಲವೋ, ಆದರೂ "ತಮ್ಮ ಸರ್ಕಾರ ಇಷ್ಟೊಂದು ಜನಪರ ಯೋಜನೆಗಳನ್ನು ಹಾಕಿಕೊಂಡಿತ್ತು, ಆದರೆ ಯಡಿಯೂರಪ್ಪ ತಮ್ಮ ಸ್ವಾರ್ಥಕ್ಕಾಗಿ ಬಿಜೆಪಿ ಸರ್ಕಾರವನ್ನು ಉರುಳಿಸಿದರು. ಬಿಜೆಪಿಯನ್ನು ಮತ್ತೆ

ನಾರಿಯರಿಗೆ ಸೀರೆ ಹಂಚಿ ಸಿಕ್ಕಿ ಬಿದ್ದ ಸಿ.ಟಿ.ರವಿ

ಸದ್ಯದಲ್ಲೇ ರಾಜ್ಯ ವಿಧಾನಸಭೆಗೆ ಚುನಾವಣೆ ಎದುರಾಗಲಿದೆ. ಅದರ ಬಗ್ಗೆ ಯೋಚಿಸಿದಾಗಲೆಲ್ಲ ಬಿಜೆಪಿ ನಾಯಕರ ಚೆಡ್ಡಿ ಒಳಗೆ ನಡುಕ ಶುರುವಾಗಿದೆ. ಅದರಲ್ಲೂ ಚಿಕ್ಕಮಗಳೂರಿನ ಶಾಸಕ ಮತ್ತು ಉನ್ನತ ಶಿಕ್ಷಣ ಸಚಿವ ಸಿ.ಟಿ.ರವಿ ಕಂಗಾಲಾಗಿದ್ದಾನೆ. ಇತ್ತ ಬಿಜೆಪಿಯ ಮಾಜಿ ನಾಯಕ ಯಡಿಯೂರಪ್ಪನ ಕೆಂಗಣ್ಣಿಗೆ ಗುರಿಯಾಗಿರುವುದಲ್ಲದೆ, ಆತ್ತ ಭ್ರಷ್ಟ ಎಂಬ ಕಳಂಕವನ್ನೂ ಅಂಟಿಸಿಕೊಂಡಿರುವ ರವಿಗೆ ಬರುವ ಚುನಾವಣೆಯಲ್ಲಿ ಸೋಲು ಖಾತರಿಯಾಗಿದೆ. ಆದ್ದರಿಂದಲೇ ಆತ ಹಲವಾರು ಸರ್ಕಸ್‌ಗಳಿಗೆ ಕೈಯಿಟ್ಟಿದ್ದಾನೆ.

ಬರಲಿರುವ ಚುನಾವಣೆಯಲ್ಲಿ ಶತಾಯಗತಾಯ ಗೆಲ್ಲಲು ರವಿ ಹತ್ತಾರು ತರಹದ ಯತ್ನಗಳನ್ನು ಮಾಡುತ್ತಿದ್ದಾನೆ. ಈ ಹಿಂದೆ ತಾನೇ ರಕ್ಷಿಸಿ, ಪೋಷಿಸಿ, ಕೊಬ್ಬಿಸಿದ್ದ ಪಡ್ಡೆ ಪಟಾಲಂಗಳನ್ನು ಮುಂದಿಟ್ಟುಕೊಂಡು ಯದ್ವಾತದ್ವಾ ರಾದ್ಧಾಂತಗಳಿಗೆ ಮುಂದಾಗಿದ್ದಾನೆ. ಅಂತಹ ಒಂದು ರಾದ್ಧಾಂತ ಮೊನ್ನೆ ಚಿಕ್ಕಮಗಳೂರಿನಲ್ಲಿ ಮಾಧ್ಯಮಗಳ ಮುಂದೆಯೇ ನಡೆಯಿತು.




ಇಲ್ಲದಿದ್ದ 'ಇತಿಹಾಸ'ವನ್ನು ಸೃಷ್ಟಿಸಿದ ರವಿ ಅದನ್ನೇ ಬಂಡವಾಳ ಮಾಡಿಕೊಂಡು ಚುನಾವಣೆಯಲ್ಲಿ ಗೆದ್ದ. ಅದೂ ಸಾಲದೆಂಬಂತೆ 'ಉರಿಯುವ ಬೆಂಕಿಗೆ ತುಪ್ಪ ಸುರಿದಂತೆ' ಪ್ರತಿ ವರ್ಷ ನೂತನ ಆಚರಣೆಗಳನ್ನು ಜಾರಿಗೆ ತಂದ. 'ಅನುಸೂಯ ಜಯಂತಿ'ಗೂ ಚಾಲನೆ ನೀಡಲಾಗಿದೆ. ಈ ಎರಡೂ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಇಡೀ ಚಿಕ್ಕಮಗಳೂರು ನಗರವನ್ನು ಕೇಸರಿಮಯಗೊಳಿಸಲಾಗಿತ್ತು. ಮಾತ್ರವಲ್ಲ 'ಅನುಸೂಯ ಜಯಂತಿ' ಪ್ರಯುಕ್ತ ಇಡೀದಿನ ಚಿಕ್ಕಮಗಳೂರು ನಗರದಲ್ಲಿ ಸಂಕೀರ್ತನಾ ಯಾತ್ರೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಇದಕ್ಕೆಂದು ಜಿಲ್ಲೆಯ ವಿವಿಧ ಹಳ್ಳಿಗಳಿಂದ ಸಾವಿರಾರು ಮಹಿಳೆಯರನ್ನು ಟ್ರಕ್ಕು, ಮ್ಯಾಕ್ಸಿ ಕ್ಯಾಬು, ಬಸ್ಸುಗಳಲ್ಲಿ ತರಿಸಿದ್ದು ರವಿಯ ಸಾಧನೆಗಳಲ್ಲಿ ಒಂದಾಗಿತ್ತು.

'ಅನುಸೂಯ ಜಯಂತಿ'ಗೆಂದು ಬಂದಿದ್ದ ಮಹಿಳೆಯರನ್ನು ಬರಿಗೈಯಲ್ಲಿ ತಮ್ಮ ಮನೆಗಳಿಗೆ ಕಳುಹಿಸಲಾದೀತೆ? ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ತನ್ನ ಪರವಾಗಿ ಅವರೆಲ್ಲ ಮತ ಚಲಾಯಿಸುವಂತೆ ಮಾಡದಿದ್ದರೆ 'ಅನುಸೂಯ ಜಯಂತಿ'ಗೆ ಅರ್ಥವಿದ್ದೀತೆ? ಎಂದೆಲ್ಲಾ ಯೋಚಿಸಿದ ರವಿಗೆ ಹೊಳೆದದ್ದು ಆ ಮಹಿಳೆಯರಿಗೆಲ್ಲ ಸೀರೆ, ಬಳೆ ಮತ್ತು ಒಂದಿಷ್ಟು ಹಣವನ್ನು ಕೊಡುವ ನಾರಿಯರನ್ನು ಕಂಡ ಜನಶ್ರೀ ಚಾನಲ್‌ನ ವರದಿಗಾರ ಪ್ರವೀಣ್ ಮತ್ತು ಪಬ್ಲಿಕ್ ಟಿವಿಯ ಕ್ಯಾಮರಾಮನ್ ಲಕ್ಷ್ಮಣ್ ಚಕಿತಗೊಂಡಿದ್ದಾರೆ. ಮಾತ್ರವಲ್ಲ ರವಿ ಮನೆ ಎದುರು ಕಂಡ ದೃಶ್ಯದಿಂದ ದಂಗಾಗಿದ್ದಾರೆ. ಯಾಕೆಂದರೆ ಅವತ್ತು ರವಿ ಸುಮಾರು ಮೂರು ಸಾವಿರ ಮಹಿಳೆಯರಿಗೆ ಸೀರೆ ಹಂಚಿ, ಅವರೆಲ್ಲರ ಕೈಗಳಿಗೆ ಬಳೆ ತೊಡಿಸಿ, ಒಂದಿಷ್ಟು ಹಣ ಕೊಡುವ ಹೊಸ 'ಸಂಪ್ರದಾಯಕ್ಕೆ' ರವಿ ಚಾಲನೆ ನೀಡಿದ್ದ!


ಹೀಗೆ ಮಹಿಳೆಯರಿಗೆ ಸೀರೆ, ಬಳೆ, ಹಣ ನೀಡುವ ಮೂಲಕ ಅವರನ್ನೆಲ್ಲ ಸಚಿವ ರವಿ ತನ್ನ ಪರವಾದ ಮತದಾರರಾಗಿ ಪರಿವರ್ತಿಸುತ್ತಿರುವ ದೃಶ್ಯವನ್ನು ಯಥಾವತ್ತಾಗಿ ಸೆರೆ ಹಿಡಿಯಲು ವರದಿಗಾರ ಪ್ರವೀಣ್ ಮತ್ತು ಕ್ಯಾಮರಾಮನ್ ಲಕ್ಷ್ಮಣ್ ಯತ್ನಿಸಿದರು. ಇದು ರವಿಯ ಪಡ್ಡೆ ಪಟಾಲಂನ ಸದಸ್ಯರ ಗಮನಕ್ಕೆ ಬರುತ್ತಿದ್ದಂತೆ ಅವರ ಪಿತ್ತ ನೆತ್ತಿಗೇರಿತು. ಮೊದಲಿಗೆ ರವಿಯ ಪರಮಾಪ್ತ ಸತೀಶ್ ಎಂಬಾತ ಲಕ್ಷ್ಮಣ್ ತನ್ನ ಕ್ಯಾಮೆರಾದಲ್ಲಿ ಆ ದೃಶ್ಯಗಳನ್ನು ಸೆರೆಹಿಡಿಯಕೂಡದೆಂದು ಧಮಕಿ ಹಾಕಿದ. ಆದರೆ ಅವರಿಬ್ಬರು ಯಾವ ಬೆದರಿಕೆಗಳಿಗೂ ಸೊಪ್ಪುಹಾಕಲಿಲ್ಲ. ಆಗ ಕೆಂಡಾಮಂಡಲವಾದ ಸತೀಶ್ ಮತ್ತು ಆತನ ಪಡ್ಡೆ ಹೈಕಳು ಲಕ್ಷ್ಮಣ್ ಮೇಲೆ ಬಿದ್ದರು. ಲಕ್ಷ್ಮಣ್ ಕೈಯ್ಯಲ್ಲಿದ್ದ ಕ್ಯಾಮೆರಾವನ್ನು ಕಸಿದುಕೊಳ್ಳಲು ಪ್ರಯತ್ನಿಸಿದರು. ತನ್ನ ಮೇಲೆ ದಾಳಿ ಮಾಡುತ್ತಿದ್ದ ಪುಂಡರೊಂದಿಗೆ ಜಟಾಪಟಿಗಿಳಿದ ಲಕ್ಷ್ಮಣ್ ತನ್ನ ಕ್ಯಾಮೆರಾವನ್ನು ಕೈಬಿಡಲಿಲ್ಲ.



ಸೀರೆ ಪಡೆಯುತ್ತಿರುವ ಮಹಿಳೆಯರು



ರವಿ ಮನೆ ಮುಂದೆ ಸೀರೆಗಾಗಿ ಕಾದಿರುವುದು



ಮಾಧ್ಯಮದವನ ಮೇಲೆ ರವಿ ಪುಂಡರ ದಾಳಿ. ಒಳ ಚಿತ್ರದಲ್ಲಿ ಜನಶ್ರೀ ವರದಿಗಾರ ಪ್ರವೀಣ್

ಕೋಟಿ ರವಿಯಾದ ಸಿ.ಟಿ.ರವಿ

ಕಳೆದ ಹಲವಾರು ದಶಕಗಳಿಂದ ಸರ್ವಧರ್ಮೀಯರ ಯಾತ್ರಾಸ್ಥಳವಾಗಿದ್ದ ಇನಾಂ ದತ್ತಾತ್ರೇಯ ಬಾಬಾಬುಡನ್ ದರ್ಗಾಕ್ಕೆ ಕೋಮುವಾದಿ ಬಣ್ಣವನ್ನು ಹಚ್ಚಿದ್ದವರಲ್ಲಿ ರವಿ ಪ್ರಮುಖ. ತನ್ನ ರಾಜಕೀಯ ಅಭಿವೃದ್ಧಿಗಾಗಿ ಹಿಂದೂ ಧರ್ಮ ಗ್ರಂಥಗಳಲ್ಲಿ ಇಲ್ಲದ, ಸ್ಥಳೀಯ ಪರಂಪರೆಯಲ್ಲೂ 'ದತ್ತ ಜಯಂತಿ' ಎಂಬ ನೂತನ ಹಬ್ಬದ ಆಚರಣೆಯ ಹೆಸರಲ್ಲಿ ರವಿ ಮಾಡಬಾರದ ಅನಾಚಾರಗಳನ್ನು ಮಾಡಿದ್ದರಿಂದ ಸ್ಥಳೀಯ ಮತದಾರರಲ್ಲಿ ಹೇಸಿಗೆ ಹುಟ್ಟಿಸಿದ.

ಹಲವು ವರ್ಷಗಳ ಹಿಂದೆ ರವಿ ಮತ್ತು ಆತನ ಚೆಡ್ಡಿ ಪಡೆ ಹುಟ್ಟುಹಾಕಿದ 'ದತ್ತ ಜಯಂತಿ' ಎಂಬ ಆಚರಣೆ ಈ ವರ್ಷವೂ ಸರ್ಕಾರಿ ನೆರವಿನೊಂದಿಗೆ ನಡೆಯುತ್ತಿದೆ. ಅದರ ಜೊತೆಗೆ ಇತ್ತೀಚೆಗೆ ಪ್ರಾರಂಭಿಸಲಾಗಿರುವ ಅದ್ಭುತ ಐಡಿಯಾ!

ಅವತ್ತು ಚೆಡ್ಡಿಗಳ 'ಸಂಕೀರ್ತನಾ ಯಾತ್ರೆ' ಮುಗಿಸಿ ಬಂದ ಇಬ್ಬರು ಮಾಧ್ಯಮದವರ ಗಮನ ಸೆಳೆದದ್ದು ರವಿ ಮನೆಯತ್ತ ದೌಡಾಯಿಸುತ್ತಿದ್ದ ಮಹಿಳೆಯರ ದೃಶ್ಯ. ರಾಜಕೀಯ ಪ್ರವೇಶಿಸುವ ಮುನ್ನ ಬರಿಗೈ ದಾಸನಂತಿದ್ದ ರವಿ ಈಗ ಬಸವನಹಳ್ಳಿಯಲ್ಲಿ ಭವ್ಯಬಂಗಲೆ ಕಟ್ಟಿಸಿದ್ದಾನೆ. ಅವತ್ತು ಆತನ ಮನೆ ಎದುರು ಜಮಾಯಿಸುತ್ತಿದ್ದ

ಅಧಿಕಾರಕ್ಕೆ ತಂದರೆ ತಾವು ಬಜೆಟ್‌ನಲ್ಲಿ ಹೇಳಿರುವ ಯೋಜನೆಗಳನ್ನು ಜಾರಿಗೆ ತರುತ್ತೇವೆ" ಎಂದು ಜನರನ್ನು ನಂಬಿಸಿ ಅವರ ಓಟುಗಳನ್ನು ಕಿತ್ತುಕೊಳ್ಳುವ ಮಸಲತ್ತಿದು.


ಇದು ಯಡ್ಡಿಗೂ ಚೆನ್ನಾಗಿ ಗೊತ್ತು. ಅಕಸ್ಮಾತ್ ಶೆಟ್ಟರ್ ಅವರು ಹಲವಾರು ಜನಪರ ಯೋಜನೆಗಳನ್ನು ಬಜೆಟ್‌ನಲ್ಲಿ ಘೋಷಿಸಿದರೆ ತಾನು ಜಾರಿಗೆ ತಂದಿದ್ದ ಭಾಗ್ಯಜ್ಯೋತಿ, ಭಾಗ್ಯಲಕ್ಷ್ಮಿ, ಶಾಲಾಮಕ್ಕಳಿಗೆ ಉಚಿತ ಸೈಕಲ್ ಇತ್ಯಾದಿಗಳು ಮೂಲೆಗುಂಪಾಗುತ್ತವೆ ಎಂಬ ಭಯ ಯಡ್ಡಿಯನ್ನು ಕಾಡುತ್ತಿದೆ. ತಾನು ಉಪಮುಖ್ಯಮಂತ್ರಿ ಆಗಿದ್ದಾಗ ಮತ್ತು ಮುಖ್ಯಮಂತ್ರಿ ಆಗಿದ್ದಾಗ ಮಂಡಿಸಿದ್ದ ಬಜೆಟ್‌ಗಳಿಗಿಂತಲೂ ಜನಪ್ರಿಯವಾದ ಬಜೆಟ್‌ಅನ್ನು ಶೆಟ್ಟರ್ ಮಂಡಿಸಲು ಸಜ್ಜಾಗಿದ್ದಾರೆ ಎಂದೂ, ಆ ನಿಟ್ಟಿನಲ್ಲಿ ಅವರಿಗೆ ಆರೆಸ್ಸೆಸ್ಸಿನ ಥಿಂಕ್ ಟ್ಯಾಂಕ್ ನೆರವು ನೀಡಲಿದೆ ಎಂದೂ ಗೊತ್ತಾಗುತ್ತಿದ್ದಂತೆ ಯಡ್ಡಿ 'ಜನವರಿ 10' ಎಂಬ ಬಾಂಬ್ ಎಸೆದಿದ್ದಾರೆ.

ಈಗ ಸಂಕ್ರಾಂತಿಯ ಗಡುವು ನೀಡಿರುವ ಯಡಿಯೂರಪ್ಪ ಕೂಡಲೇ ಸರಕಾರವನ್ನು ಬೀಳಿಸುವುದಿಲ್ಲ. ಬದಲಾಗಿ ಶೆಟ್ಟರ್ ಅವರಿಗೆ ಕಾಲಾವಕಾಶ ನೀಡುತ್ತಾ ಬಂದು ಕೊನೆಗೆ ಬಜೆಟ್ ಮುನ್ನ ಒಮ್ಮೆಲೇ ಅವರ ಕಾಲು ಎಳೆಯುವುದು ಖಚಿತಸಿದ್ಧ. ಈ ಹಿಂದೆ ಯಡ್ಡಿ ಶೆಟ್ಟರ್ ಸರ್ಕಾರವನ್ನು ಉರುಳಿಸಿದ್ದರೆ ತಾವೇ ಲಿಂಗಾಯತರಾಗಿ ಮತ್ತೊರ್ವ ಲಿಂಗಾಯತ ಮುಖ್ಯಮಂತ್ರಿಯನ್ನು ಕೆಳಗಿಳಿಸಿದ್ದ ಅಪಕೀರ್ತಿ ಅವರಿಗೆ ಅಂಟುತ್ತಿತ್ತು. ಆದರೆ ಈಗ "ನನ್ನ ಇಬ್ಬರು ಹಿಂಬಾಲಕರನ್ನು ಸಚಿವ ಸಂಪುಟದಿಂದ ಕೈಬಿಟ್ಟಿದ್ದೀರಿ. ಹಾಗೆಯೇ ನನ್ನ ಬೆಂಬಲಿಗರನ್ನು ನಿಗಮ, ಮಂಡಳಿಗಳಿಂದ ಎತ್ತು ಹಾಕಿದ್ದೀರಿ" ಎಂದು ಅರಚುತ್ತಾ ಈ ಸರ್ಕಾರವನ್ನು ಬೀಳಿಸಿದರೆ ತಮ್ಮ ಜಾತಿಗೆ ದ್ರೋಹ ಬಗೆದ ಕುಖ್ಯಾತಿ ಅಂಟುವುದಿಲ್ಲ ಎಂದು ಲೆಕ್ಕಹಾಕಿರುವಂತಿದೆ ಯಡ್ಡಿ.

ಅಂತೂಇಂತೂ ಕಳೆದ ಮೂರ್ನಾಲ್ಕು ವರ್ಷಗಳಿಂದ ಕುಂಟುತ್ತಾ ತೆವಲುತ್ತಾ ಬಂದಿರುವ ಬಿಜೆಪಿ ಸರ್ಕಾರ ತನ್ನ ಅವಧಿ ಪೂರೈಸುವ ಕೊನೆಕ್ಷಣದಲ್ಲಿ ಮುಗ್ಗರಿಸುವ ಸಾಧ್ಯತೆ ಖಂಡಿತವಾಗಿಯೂ ಕಂಡುಬರುತ್ತಿದೆ. ಇದರಿಂದ ಯಾರಿಗೆ ರಾಜಕೀಯವಾಗಿ ಲಾಭವಾಗುತ್ತದೆ, ಯಾರಿಗೆ ಜನರ ಸಿಂಪಥಿ ಸಿಗುತ್ತದೆ, ಯಾರಿಗೆ ಜನ ಕ್ಯಾಕರಿಸಿ ಉಗಿಯಲಿದ್ದಾರೆ ಎಂಬುದನ್ನೆಲ್ಲ ಕ್ಲೈಮಾಕ್ಸ್‌ನಲ್ಲಿ ನೋಡಬಹುದಾಗಿದೆ.

● ಶೆಣೈ






ವರದಿಗಾರ ಪ್ರವೀಣ್ ಮತ್ತು ಕ್ಯಾಮರಾಮನ್ ಲಕ್ಷ್ಮಣ್ ಮೇಲಾದ ಈ ದಾಳಿಯ ಸುದ್ದಿ ಹರಡುತ್ತಿದ್ದಂತೆ ಜಿಲ್ಲೆಯ ಇತರೆ ಪತ್ರಕರ್ತರು ರವಿ ಮನೆಯ ಮುಂದೆ ಜಮಾಯಿಸಿದರು. ಅಷ್ಟುಹೊತ್ತಿಗೆ ರವಿಯ ದರ್ಪ ಅರ್ಧ ಇಳಿದಿತ್ತು. ರವಿಯ ಭಂಟರಿಂದ ಹಲ್ಲೆಗೊಳಗಾದ ಇಬ್ಬರು ಪತ್ರಕರ್ತರು ಬಸವನಹಳ್ಳಿ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಲು ಪ್ರಯತ್ನಿಸಿದರು. ಆ ಠಾಣೆಯ ಪಿಎಸ್‌ಐ ಆನಂದಪ್ಪ ರವಿಯ ಏಜೆಂಟ್ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯವೇ ಆಗಿದೆ. ಆನಂದಪ್ಪ ಪೊಲೀಸ್ ಅಧಿಕಾರಿಯಾಗಿದ್ದರೂ ಆತ ರವಿಯ ಪರಮಚೇಲಾನಂತೆ ವರ್ತಿಸುತ್ತಾನೆ. ಇನ್ನು ಚಿಕ್ಕಮಗಳೂರು ಜಿಲ್ಲೆಯ ಪೊಲೀಸ್ ವರಿಷ್ಠ ಶಶಿಕುಮಾರ್ ಕೂಡ ಖಾಕಿ ಬದಲು ಖಾವಿ ಧರಿಸಿರುವಂತೆ ವರ್ತಿಸುತ್ತಾರೆ.

ಉದಾಹರಣೆಗೆ ಕಳೆದ ಅಕ್ಟೋಬರ್‌ನಲ್ಲಿ ಶ್ರೀರಾಮ ಸೇನೆಯ ಪ್ರಮೋದ್ ಮುತಾಲಿಕ್ "ಬಾಬರಿ ಮಸೀದಿಯನ್ನು ಕೆಡವಿರುವ ನಾವು ಬಾಬಾಬುಡನ್ ಗುಹೆಯೊಳಗಿನ ಸಮಾಧಿಯನ್ನು ಧ್ವಂಸಗೊಳಿಸದೇ ಬಿಡುವುದಿಲ್ಲ" ಎಂಬಂತಹ ಪ್ರಚೋದನಾಕಾರಿ ಭಾಷಣವನ್ನು ಬಿಗಿದ ನಂತರವೂ ಇದೇ ಶಶಿಕುಮಾರ್ ತುಟಿಕ್, ಪಿಟಿಕ್ ಎಂದಿರಲಿಲ್ಲ, ಮಾತ್ರವಲ್ಲ ಹಲವು ಮಾಧ್ಯಮದವರ ಮುಂದೆ 'ಬಾಬರಿ ಮಸೀದಿ ಕೆಡವಿದ್ದು ನಿಜವಲ್ಲವಾ? ಮುತಾಲಿಕ್ ಹೇಳಿದ್ದರಲ್ಲಿ ತಪ್ಪೇನಿದೆ?" ಎಂದು ಹೇಳಿದ್ದರು.

ಅಷ್ಟೇ ಅಲ್ಲ, ರವಿಯ ಪುಂಡರಿಂದ ಹಲ್ಲೆಗೊಳಗಾದ ಪಬ್ಲಿಕ್ ಟಿವಿಯ ವರದಿಗಾರ ಲಕ್ಷ್ಮಣ್ ಮತ್ತು ಜನಶ್ರೀ ಚಾನೆಲ್‌ನ ಕ್ಯಾಮೆರಾಮನ್ ಪ್ರವೀಣ್ ಅವರೇ ಐನಳ್ಳಿ ಮಹೇಶ್ ಎಂಬ ರವಿ ಬೆಂಬಲಿಗನ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಬಸವನಹಳ್ಳಿ ಪೊಲೀಸ್ ಠಾಣಾಧಿಕಾರಿ ಆನಂದಪ್ಪ ದೂರೊಂದನ್ನು ದಾಖಲಿಸಿಕೊಂಡಿದ್ದಾನೆ.

ಈ ಹಿಂದೆ ಸಿ.ಟಿ.ರವಿಯಾಗಿದ್ದ ಮನುಷ್ಯ ಇವತ್ತು 'ಕೋಟಿ ರವಿ' ಆಗಿರುವುದರ ಪರಿಣಾಮ ಇದೆಂದು ಪ್ರತ್ಯೇಕವಾಗಿ ಹೇಳುವ ಅವಶ್ಯಕತೆ ಇಲ್ಲ ಎಂದೆನಿಸುತ್ತದೆ. ●

ಹುಬ್ಬಳ್ಳಿ ಡಿಸಿಪಿಯ ಇಸ್ಪೀಟ್ ಅಡ್ಡೆ



ಡಿಸಿಪಿ ಪ್ರತಾಪನ್

ಹುಬ್ಬಳ್ಳಿ ಇತಿಹಾಸದಲ್ಲಿ ಇಲ್ಲಿಯವರೆಗೆ ಅಕ್ರಮ ಕುಳಗಳು ಇಸ್ಪೀಟ್ ಅಡ್ಡೆಗಳನ್ನು ರಾಜಾರೋಷದಿಂದ ನಡೆಸಿ ಖಾಕಿಗಳಿಗೆ ತಿಂಗಳ ಮಾಮೂಲಿ ತಿನ್ನಿಸುತ್ತಾ ಸೇಫಾಗಿದ್ದರು. ಆದರೀಗ ಖುದ್ದು ಪೊಲೀಸರೇ ಇಂತಹ ಅಡ್ಡೆಗಳನ್ನು ನಡೆಸುತ್ತಿದ್ದಾರೆ. ಅದರಲ್ಲೂ ಡಿಸಿಪಿ ಪ್ರತಾಪನ್ ತನ್ನ ಸಹೋದರರನ್ನು ಮುಂದಿಟ್ಟುಕೊಂಡು ಇಸ್ಪೀಟು ತಟ್ಟುವ ದಂಧೆಯ ಮಾಲಿಕನಾಗಿದ್ದಾನೆ ಎಂಬ ಸುದ್ದಿ ಅವಳಿನಗರವನ್ನೇ ಬೆಚ್ಚಿ ಬೀಳಿಸಿದೆ.

ಪ್ರತಾಪನ್ ಮಾಲೀಕತ್ವದ ಅಂದರ್‌ಬಾಹರ್ ಇಸ್ಪೀಟ್ ಅಡ್ಡಾದಿಂದ ಪ್ರತಿದಿನ ಒಂದು ಕೋಟಿ ರೂಪಾಯಿಗೂ ಹೆಚ್ಚಿನ ಆದಾಯ ಬರುತ್ತದೆ ಎಂಬ ಮಾತು ಕೇಳಿಬರುತ್ತಿದೆ. ಪೊಲೀಸಪ್ಪನೇ ಬಾಸ್ ಆಗಿರುವುದರಿಂದ ಈ ಅಡ್ಡೆಯ ಮೇಲೆ ರೇಡಿನ ಭಯವೂ ಇಲ್ಲದಂತಾಗಿದೆ. ಈ ಅಡ್ಡೆಯಲ್ಲಿ ಸುಲಭವಾಗಿ ಹಣ ಗಳಿಸಬಹುದು ಎಂಬ ಆಸೆಗೆ ಬಿದ್ದು ಬಾಜಿ ಕಟ್ಟಿದ ನೂರಾರು ಜನ ಸುಮಾರು ನಾಲ್ಕಾರು ಕೋಟಿ ರೂಪಾಯಿಗಳನ್ನು ಸೋತು ಮನೆಯವರಿಗೆ ಮುಖ ತೋರಿಸಲಾಗದೆ ಎರಡ್ಮೂರು ತಿಂಗಳಿಂದ ತಲೆ ಮರೆಸಿ ಕೊಂಡಿದ್ದಾರೆ. ಯಾರು ಹಾಳಾದರೇನೆ, ಪ್ರತಾಪನ್ ಮಾತ್ರ ಸಖತ್ತಾಗಿ ಹಣ ಮಾಡುತ್ತಿದ್ದಾನೆ.

ಅವಳಿನಗರದ ಕಮೀಷನರೇಟ್‌ಗೆ ಪ್ರತಾಪನ್ ಎಸಿಪಿ ಆಗಿ ವಕ್ಕರಿಸಿದ ದಿನದಿಂದಲೇ ಆತನ ಅವ್ಯವಹಾರಗಳು ಪ್ರಾರಂಭವಾದವು. ಅಕ್ರಮ ಕುಳಗಳಿಂದ 'ಬಾಸ್' ಎನಿಸಿಕೊಳ್ಳುವ ಖಯಾಲಿಯಲ್ಲೇ ಕಾಲ ನೂಕಿರುವ ಪ್ರತಾಪನ್ ಪಕ್ಕಾ ಕಳ್ಳರ ಗುರು. ಪಿಕ್ ಪಾಕೇಟರ್ಸ್, ಮಟ್ಕಾ ಬುಕ್ಕಿ ಗಳು, ತಲೆಹಿಡುಕ ದಂಧೆಯ ಮಾಮಾಗಳು, ಕ್ರಿಕೆಟ್ ಬುಕ್ಕಿಗಳು, ಅಕ್ಕಿ, ಸೀಮೆಎಣ್ಣೆ ಕಟ್ಟಿಗೆ ಕಳ್ಳ ಸಾಗಾಟದ ದಂಧೆಕೋರರನ್ನು ಹಿಡಿದು ಜೈಲಿಗೆ ಅಟ್ಟುವ ಬದಲು ಅವರೆಲ್ಲ ಕೋಟಿ ಲೆಕ್ಕದಲ್ಲಿ ತೂಗುವಂತೆ ಬೆಳೆಸಿದ ಕೀರ್ತಿ ಪ್ರತಾಪನ್‌ಗೆ ಸಲ್ಲುತ್ತದೆ.

ಸುಲಿಗೆಯನ್ನೇ ತನ್ನ ಸರ್ವೀಸಿನ ಉದ್ದೇಶ ಎಂದು ನಂಬಿರುವ ಪ್ರತಾಪನ್ ಡಿಸಿಪಿಯಾಗಿ ಚಾರ್ಜ್ ಪಡೆದಿದ್ದೇ ತಡ, ಅವಳಿನಗರಗಳಲ್ಲಿ ಮಲಗಿದ್ದ ಎಲ್ಲ ಅಕ್ರಮ ದಂಧೆಗಳೂ ಬಾಯ್ತೆರೆದುಕೊಂಡವು. ನಿವೃತ್ತಿಗೆ ಬಾಕಿ ಇರುವ ನಾಲ್ಕಾರು ತಿಂಗಳಲ್ಲಿ ಮುಂದಿನ ಜೀವನಕ್ಕೊಂದು ಉದ್ಯೋಗ ಆಯ್ದುಕೊಂಡಂತೆ ತನ್ನ ತೋಟದಲ್ಲೇ ಹೈಟೆಕ್ ಅಡ್ಡೆ ಶುರುವಿಟ್ಟ ಪ್ರತಾಪನ್. ಅದರ ಉಸ್ತುವಾರಿಯನ್ನು ತನ್ನ ಸಹೋದರ ತಮ್ಮಣ್ಣ ಹಾಗು ಹತ್ತಿರದ ಸಂಬಂಧಿ ಹೆಡ್ ಕಾನ್‌ಸ್ಟೇಬಲ್ ಪರಶುರಾಮ ಕಾಳೆಗೆ ವಹಿಸಿದ. ಈ ಅಡ್ಡೆ ಕಳೆದ ಹಲವಾರು ತಿಂಗಳುಗಳಿಂದ ಗಪ್‌ಚುಪ್ ಆಗಿ ನಡೆಯುತ್ತಾ ಈಗ ದಿನಕ್ಕೆ ಕೋಟಿ ರೂಪಾಯಿ ತರುವ ಮಟ್ಟಿಗೆ ಬೆಳೆದು ನಿಂತಿದೆ.

ಕಾಸ್ಲಿ ಅಡ್ಡೆ


ಹುಬ್ಬಳ್ಳಿಯಿಂದ ಕಲಘಟಗಿಗೆ ಹೋಗುವ ದಾರಿ ಮಧ್ಯದಲ್ಲಿರುವ ತನ್ನ ಒಡೆತನದ ತೋಟದಲ್ಲಿ ಬಿಂದಾಸಾಗಿ ಇಸ್ಪೀಟ್ ಅಡ್ಡೆಯನ್ನು ತೆರೆದ ಪ್ರತಾಪನ್ ದೊಡ್ಡ ಮೊತ್ತದ ಬಾಜಿ ಕಟ್ಟಿ ಅಂದರ್‌ಬಾಹರ್ ಆಡುವ ಗ್ಯಾಂಬ್ಲರ್‌ಗಳನ್ನು ಒಂದೆಡೆ ಸೇರಿಸಿದ. ಅಡ್ಡೆಯ ಮಾಲೀಕನೇ ಹಿರಿಯ ಪೋಲೀಸ್ ಅಧಿಕಾರಿ ಆಗಿರುವುದರಿಂದ ಇದರ ಮೇಲೆ ರೇಡ್ ಆಗುವ ಭಯ ಕೂಡ ಯಾರಿಗೂ ಇರಲಿಲ್ಲ. ಹೀಗಾಗಿ ನೋಡುನೋಡುತ್ತಲೇ ಅಡ್ಡೆಯಲ್ಲಿ ನಡೆಯುವ ದಂಧೆಗೂ ಕಾಸ್ಲಿ ಟಚ್ ಸಿಕ್ಕಿತು.

ಮಟ್ಕಾ ದಂಧೆಯನ್ನು ಹತ್ತಿಕ್ಕಿದ್ದರ ಪರಿಣಾಮವಾಗಿ ಗ್ಯಾಂಬ್ಲರ್‌ಗಳು ಇಸ್ಪೀಟ್ ಅಡ್ಡೆಗಳತ್ತ ವಾಲಿದರು. ಇದಕ್ಕೆ ಸರಿಯಾಗಿ ಇಡೀ ಹುಬ್ಬಳ್ಳಿಯಲ್ಲಿ ತನ್ನದೊಂದೇ ಅಡ್ಡೆ ಇರಬೇಕು ಎಂಬ ಹಠಕ್ಕೆ ಬಿದ್ದ ಪ್ರತಾಪನ್ ಅಲ್ಲಲ್ಲಿ ನಡೆಯುತ್ತಿದ್ದ ಪುಡಿ ಅಡ್ಡೆಗಳನ್ನೆಲ್ಲಾ ಬಂದ್ ಮಾಡಿಸಿಬಿಟ್ಟ. ಡಿಸಿಪಿ ಸಾಹೇಬರ ಈ ಪೌರುಷಕ್ಕೆ ನಲುಗಿದ ಅಕ್ರಮ ಕುಳಗಳು ಬೇರೆ ದಾರಿ ಕಾಣದೆ ಇನ್ನೊಂದು ದೋ ನಂಬರ್ ದಂಧೆಗೆ ಬಡ್ತಿ ಪಡೆಯುವಂತಾಯಿತು.

ಕೇವಲ ಹುಬ್ಬಳ್ಳಿಯಷ್ಟೇ ಅಲ್ಲ ಪಕ್ಕದ ಗದಗ, ಹಾವೇರಿ, ಬಾಗಲಕೋಟೆ, ಬಿಜಾಪುರ, ಬೆಳಗಾವಿ ಕಡೆಯಿಂದಲೂ ಜೂಜುಕೋರರು ತನ್ನ ಅಡ್ಡೆಗೆ ಕಾಲಿಡುವಂತೆ ಮಾಡಿದ ಪ್ರತಾಪನ್. ತನ್ನ ಅಡ್ಡೆಗೆ ಬಂದ ಜೂಜುಕೋರರಿಗೆ ಬಿರ್ಯಾನಿ ಊಟದ ಜೊತೆಗೆ ಎಣ್ಣೆಯ ಸೇವೆಯನ್ನು ಒದಗಿಸುವ ವ್ಯವಸ್ಥೆ ಮಾಡಿದ. ಈ ಶೋಕಿಗಳೆಲ್ಲ ಯಾವ ಮಟ್ಟಕ್ಕೆ ಬೆಳೆಯಿತೆಂದರೆ ತನ್ನ ಅಡ್ಡೆಯಲ್ಲಿ ಯಾರಾದರೂ ಸಿಗರೇಟೊಂದನ್ನು ತಮ್ಮ ಬಾಯಲ್ಲಿ ಇಟ್ಟುಕೊಂಡರೆ ಸಾಕು ಅದಕ್ಕೆ ಬೆಂಕಿ ಹಚ್ಚಲು ಸೇವಕರೂ ನೇಮಕಗೊಂಡರು. ಇಂತಹ 'ಕ್ಲಾಸಿ' ಅಡ್ಡೆಗೆ ಬುಧವಾರ, ಶನಿವಾರ ಮತ್ತು ರವಿವಾರ ಭರ್ತಿ ಗಿರಾಕಿಗಳು. ಅವರೆಲ್ಲರಿಂದಾಗಿ ಏನಿಲ್ಲಾ ಅಂದರೂ ಒಂದು ದಿವಸಕ್ಕೆ 2 ರಿಂದ 3 ಕೋಟಿ ಬೆಟ್ಟಿಂಗ್ ಕ್ರಾಸ್ ಆಗುತ್ತದೆ.

ಅಷ್ಟೇ ಮುಖ್ಯವಾಗಿ ಈ ಅಡ್ಡೆಯ ಉಸ್ತುವಾರಿಗೆಂದು ನೇಮಕವಾಗಿದ್ದ ಪ್ರತಾಪನ್‌ನ ಖಾಸಾ ತಮ್ಮ ತಮ್ಮಣ್ಣ ಹಾಗೂ ಹೆಡ್ ಕಾನ್‌ಸ್ಟೇಬಲ್ ಪರಶು ರಾಮ ಕಾಳೆ ಹಣ ಸೋತವರಿಗೆಲ್ಲ ಸಾಲ ಕೊಡುವ ಫೈನಾನ್ಸರ್‌ಗಳಾಗಿ ಮರುಜನ್ಮ ತಾಳಿದರು.

ಲಕ್ಷ ತೋರ್ಸಿದ್ರೇ ಎಂಟ್ರಿ



ಪದ್ಮನಯನ

ಕಳೆದ ಆರೇಳು ತಿಂಗಳಿಂದ ತನ್ನ ಸ್ವಂತ ತೋಟದಲ್ಲೇ ಇಸ್ಪೀಟ್ ಅಡ್ಡೆ ನಡೆಸುತ್ತಿದ್ದ ಪ್ರತಾಪನ್ ಈಗ ಇದ್ದಕ್ಕಿದ್ದಂತೆ ಅದೇ ಚಳಮಟ್ಟಿ ಕ್ರಾಸ್‌ನಲ್ಲಿರುವ ಇನ್ನೊಂದು ತೋಟಕ್ಕೆ ಅದನ್ನು ಶಿಫ್ಟ್ ಮಾಡಿದ್ದಾನೆ. ಇದಕ್ಕೂ ಮೊದಲು ಅಂಚಟಗೇರಿಯಲ್ಲಿ ಸ್ವಲ್ಪ ದಿನ ಅಡ್ಡೆ ನಡೆಸಿದ್ದ.

ಪ್ರತಾಪನ್‌ನ ಬೇನಾಮಿ ಮಾಲೀಕತ್ವದ ಅಡ್ಡೆಗೆ ಎಂಟ್ರಿ ಪಡೆಯುವುದು ಅಷ್ಟು ಸುಲಭವಲ್ಲ. ಸಿವಿಲ್ ಡ್ರೆಸ್ ತೊಟ್ಟು ಚಳಮಟ್ಟಿ ಕ್ರಾಸಿನಲ್ಲಿ ನಿಂತಿರುವ ಕಾನ್ಸ್‌ಟೇಬಲ್ ಒಬ್ಬನ ಜೇಬಿಗೆ 500 ರೂಪಾಯಿ ಇಟ್ಟ ಮೇಲೆ ಆತ ತೋರಿಸುವ ಸಿಗ್ನಲ್‌ನಿಂದ ಅಡ್ಡೆಯೊಳಗೆ ಪ್ರವೇಶ ಸಿಗುತ್ತೆ. ತೋಟದಲ್ಲಿ ಪ್ರತಿ 300 ಮೀಟರ್‌ಗೆ ಒಬ್ಬರಂತೆ ನಿಂತಿರುವ ಕಾವಲುಗಾರರು ಬರುತ್ತಿರುವ ಜೂಜುಕೋರರನ್ನು ಎಲ್ಲಾ ಹಂತದಲ್ಲೂ ಪರೀಕ್ಷೆ ಮಾಡಿಯೇ ಒಳಗೆ ಬಿಡುತ್ತಾರೆ. ಅಡ್ಡೆಯೊಳಗೆ ಕಡ್ಡಾಯವಾಗಿ ಮೊಬೈಲ್‌ಗಳನ್ನು ನಿಷೇಧಿಸಲಾಗಿದೆ. ಇಷ್ಟೆಲ್ಲಾ ಆದರೂ, ಟೇಬಲ್ಲಿಗಿಳಿದು ಕೈಯ್ಯಲ್ಲಿ ಇಸ್ಪೀಟ್ ಎಲೆ ಹಿಡಿಯಬೇಕೆಂದರೆ ಜೂಜು ಕೋರರ ಜೇಬಿನಲ್ಲಿ ಮಿನಿಮಮ್ ಒಂದು ಲಕ್ಷ ರೂಪಾಯಿ ಇರಲೇ ಬೇಕು ಅಥವಾ ಅದಕ್ಕೆ ಸರಿಯಾದ ಬಂಗಾರ ವಾದರೂ ಇರಬೇಕು. ಇದನ್ನೆಲ್ಲಾ ಪರೀಕ್ಷಿಸಿದ ನಂತರ ಪ್ರತಾಪನ್ ಸಾಹೇಬರ ಸಹೋದರ ತಮ್ಮಣ್ಣ ಆಟಕ್ಕೆ ಗ್ರೀನ್‌ಸಿಗ್ನಲ್ ಕೊಡುತ್ತಾನೆ.

ಹೇಳಿಕೇಳಿ ಇಸ್ಪೀಟು ಎಂಬುದೇ ಒಂದು ದೊಡ್ಡ ಜೂಜು. ಸಂಜೆ 6 ರಿಂದ ಬೆಳಗಿನ 7 ಗಂಟೆಯವರೆಗೆ ನಡೆಯುವ ಈ ಜೂಜಾಟದಲ್ಲಿ ಹಣ ಸೋತವರೆಲ್ಲ ಕೈಚೆಲ್ಲಿ ತೆಪ್ಪಗೆ ಮನೆ ಸೇರುವುದಿಲ್ಲ. ಬದಲಾಗಿ ಹಣ ಸೋತಿರುವಲ್ಲೇ ಅದನ್ನು ಮತ್ತೆ ಪಡೆಯಬೇಕೆಂಬ ಹುಚ್ಚುತನಕ್ಕೆ ಬಿದ್ದು ಬಡ್ಡಿ ಮೇಲೆ ಸಾಲ ಪಡೆದು ಅದನ್ನೂ ಪಣಕ್ಕಿಡುತ್ತಾರೆ. ಇಸ್ಪೀಟು ಆಟಕ್ಕಿಂತ ಹೀಗೆ ಬಡ್ಡಿಗೆ ಸಾಲ ಕೊಡುವುದರಿಂದ ಬರುವ ಆದಾಯ ದುಪ್ಪಟ್ಟು. ಹೀಗಾಗಿ ತಮ್ಮಣ್ಣ ಇಸ್ಪೀಟು ಆಡುತ್ತಿರುವ ಇಬ್ಬರು ಜೂಜುಕೋರರ ಶಿಫಾರಸ್ಸಿನ ಮೇಲೆ ಸಾಲ ಕೊಡುತ್ತಾನೆ. ಅವತ್ತೇ ಸಾಲ ತೀರಿಸಿದರೆ ಕೇವಲ 10% ಬಡ್ಡಿ, ನಾಳೆ ಎಂದರೆ 20% ಬಡ್ಡಿ. ಇಂತಹ ದುಬಾರಿ ಷರತ್ತುಗಳಿಗೆ ಒಪ್ಪಿದರೇ ಸಾಲ ಕೊಡುವುದು ಪ್ರತಾಪನ್ ಸಾಹೇಬರ ಅಡ್ಡೆಯ ಪಾಲಿಸಿಯಂತೆ.

ಕೋಟಿ ಕಳೆದುಕೊಂಡು ಸಾಲಗಾರರಾದರು

ಅವಳಿನಗರಗಳಲ್ಲಿ ಹರಿದಾಡುತ್ತಿರುವ ಗಾಳಿ ಸುದ್ದಿಯ ಪ್ರಕಾರ ಪ್ರತಾಪನ್ ಸಾಹೇಬರ ಅಡ್ಡೆಯಲ್ಲಿ ಜೂಜಿಗೆ ಕುಳಿತು ಒಂದು ಕೋಟಿ ರೂಪಾಯಿಗಿಂತಲೂ ಹೆಚ್ಚು ಸೋತವರ ಸಂಖ್ಯೆ 30ರ ಗಡಿ ದಾಟಿದೆಯಂತೆ. ಅವರೆಲ್ಲಾ ತಮ್ಮ ಚಟಕ್ಕೆ ತಮ್ಮಣ್ಣ ಹಾಗು ಪರಶುರಾಮ ಕಾಳೆ ಹತ್ತಿರ 20% ಬಡ್ಡಿಗೆ ಸಾಲ ಪಡೆದು ಈಗ ಅಸಲನ್ನೂ ತೀರಿಸಲಾಗದೆ ಮನೆ ಬಿಟ್ಟು ತಲೆಮರೆಸಿಕೊಂಡಿದ್ದಾರಂತೆ. ಮುಸ್ಲಿಂ ಸಮುದಾಯಕ್ಕೆ ಸೇರಿದ ಒಬ್ಬ ಯುವಕ ಕಳೆದೊಂದು ತಿಂಗಳಲ್ಲಿ ಬರೋಬ್ಬರಿ ನಾಲ್ಕು ಕೋಟಿ ಸೋತಿದ್ದಾನಂತೆ. ತಾನು ಪ್ರತಾಪನ್ ಸಾಹೇಬರ ಅಡ್ಡೆಯಲ್ಲಿ ಮಾಡಿದ ಸಾಲವನ್ನು ತೀರಿಸಲು ಸ್ವಂತ ಮನೆ, ಎರಡೂವರೆ ಕೆಜಿ ಚಿನ್ನ, ಸಿದ್ಧಾರೂಢ ಮಠದ ಹತ್ತಿರ ಇದ್ದ ಹತ್ತೊಂಭತ್ತು ಗುಂಟೆ ಜಾಗೆಯನ್ನು ಮಾರಿದರೂ ಸಂಪೂರ್ಣವಾಗಿ ಸಾಲ ಮತ್ತು ಅದರ ಮೇಲಿನ ಬಡ್ಡಿಯನ್ನು ತೀರಿಸಲಿಕ್ಕಾಗಿಲ್ಲ ವಂತೆ. ಅವನಿಂದ ಹಣವನ್ನು ವಸೂಲಿ ಮಾಡಲು ಪರಶುರಾಮ ಕಾಳೆಯ ಸಹಚರರು ಆತನಿಗೆ ದಿನನಿತ್ಯ ಕಾಟಕೊಡುತ್ತಿದ್ದಾರಂತೆ. ಆ ಮುಸ್ಲಿಮ್ ಯುವಕನೊಂದಿಗೆ ಪ್ರತಾಪನ್ ಅಡ್ಡೆಗೆ ಹೋಗಿದ್ದ ಮೂವರು ಸ್ನೇಹಿತರಲ್ಲಿ ಒಬ್ಬ 1.35 ಕೋಟಿ, ಇನ್ನೊಬ್ಬ 96 ಲಕ್ಷ, ಮತ್ತೊಬ್ಬ 40 ಲಕ್ಷ ಹಣ ಕಳೆದುಕೊಂಡಿದ್ದಾರಂತೆ.

ಇದಕ್ಕಿಂತ ದೊಡ್ಡ ದುರಂತ ಯಾವುದೆಂದರೆ ಧಾರವಾಡ, ಕಲಘಟಗಿ, ಕುಂದಗೋಳ ಭಾಗದ 20ಕ್ಕೂ ಹೆಚ್ಚು ರೈತರು ಪ್ರತಾಪನ್‌ನ ಅಡ್ಡೆಯಲ್ಲಿ ಇಸ್ಪೀಟು ಆಡಿ ಹಣ ಸೋತಿದ್ದರಿಂದ ಕನಿಷ್ಠ 30 ಲಕ್ಷ ರೂಪಾಯಿ ಬೆಲೆಬಾಳುವ ತಮ್ಮ ಜಮೀನನ್ನು ಪ್ರತಾಪನ್‌ನ ಬೇನಾಮಿ ಹೆಸರಿಗೆ ಅಡ ಇಟ್ಟಿದ್ದಾರಂತೆ.

ಪ್ರತಾಪನ್ ಅಡ್ಡೆಯಲ್ಲಿ ತಮ್ಮ ಹಣವನ್ನು ಸೋತಿದ್ದಲ್ಲದೆ ಅಧಿಕ ಬಡ್ಡಿ ಮೇಲೆ ಪಡೆದ ಸಾಲವನ್ನೂ ಕಳೆದು ಕೊಂಡವರಿಂದ ಹಣವನ್ನು ವಸೂಲಿ ಮಾಡಲು ಪ್ರತಾಪನ್ ಸಾಹೇಬರ ಸಹಚರರು ಅವರ ಬೆನ್ನು ಹತ್ತಿದ್ದಾರೆ. ತಮ್ಮ ಪರಿಸ್ಥಿತಿಯ ಬಗ್ಗೆ ಇನ್ನೊಬ್ಬರ ಮುಂದೆ ಹೇಳಿಕೊಳ್ಳುವಂತಹ ಸ್ಥಿತಿಯಲ್ಲೂ ಇರದ ಅವರೆಲ್ಲ ತಮ್ಮ ಪ್ರಾಣಕ್ಕೇ ಹೆದರಿ ಕೊಂಡಿದ್ದಾರೆ. ಕೆಲವರು ತಾವಿರುವ ಪರಿಸ್ಥಿತಿಯಿಂದ ಪಾರಾಗಲು ಆತ್ಮ ಹತ್ಯೆಯೇ ದಾರಿ ಎನ್ನುತ್ತಿದ್ದರೆ, ಇನ್ನು ಕೆಲವರು ಕಳ್ಳತನ, ದರೋಡೆ ಮಾಡಿ ಯಾದರೂ ಸಾಲ ತೀರಿಸುತ್ತೇವೆ ಎಂಬ ಹಂತಕ್ಕೆ ಬಂದು ನಿಂತಿದ್ದಾರೆ. ಒಂದು ರೀತಿಯಲ್ಲಿ ಇದು ಭ್ರಷ್ಟ ಖಾಕಿ ಅಧಿಕಾರಿ ಯೊಬ್ಬ ಅಕ್ರಮವಾಗಿ ನಡೆಸುತ್ತಿರುವ ಅಡ್ಡೆಯಿಂದಾಗಿ ಕಳ್ಳರು ಜನ್ಮ ತಾಳುತ್ತಿದ್ದಾರೆ ಎಂಬಂತಾಗಿದೆ.

ವಾಂಟೆಡ್ ಕಳ್ಳರೇ ಇಲ್ಲಿ ಬಾಸ್

ಪ್ರತಾಪನ್‌ನ ಅಕ್ರಮ ಇಸ್ಪೀಟ್ ಅಡ್ಡೆಯಲ್ಲಿ ಕೆಲಸ ಮಾಡುತ್ತಿರುವವರೆಲ್ಲ ಅವಳಿನಗರದ ಪೊಲೀಸರಿಗೆ ಬೇಕಾದ ಕ್ರಿಮಿನಲ್‌ಗಳೇ. ಆ ಅಡ್ಡೆಯಲ್ಲಿ ಎಲ್ಲಿ ಕಣ್ಣುಹಾಯಿಸಿದರೂ ಕಳ್ಳರದೇ ಕಾರು ಬಾರು. ಆದರೇನಂತೆ ಅವರೆಲ್ಲಾ ಡಿಸಿಪಿ ಪ್ರತಾಪನ್ ಸಾಹೇಬರ ಖಾಸಾ ಶಿಷ್ಯಂದಿರು.

ಹುಬ್ಬಳ್ಳಿಯಲ್ಲಿ ನಡೆಯುವ ಬಹುತೇಕ ಚೈನು ಕಳುವಿನ ಪ್ರಮುಖ ರೂವಾರಿಯಾದ ಚಿಕ್ಕಲಿಗೇರ ಮಂಜ ಸದ್ಯ ಪ್ರತಾಪನ್ ಅಡ್ಡೆಯ ಟೇಬಲ್ ಉಸ್ತುವಾರಿಯನ್ನು ವಹಿಸಿಕೊಂಡಿದ್ದಾನೆ. ಈಗ್ಗೆ ಸ್ವಲ್ಪ ದಿನದ ಹಿಂದೆ ಸಿದ್ಧಾರೂಢ ಮಠದ ಹತ್ತಿರ ಎರಡೂವರೆ ತೊಲ ಬಂಗಾರದ ಚೈನ್ ಕಳುವಿನ ಕೇಸಿನಲ್ಲಿ ಈ ಚಿಕ್ಕಲಿಗೇರ ಮಂಜ ಸಿಕ್ಕಿಬಿದ್ದಿದ್ದ. ಆದರೆ ಪ್ರತಾಪನ್ ಸಾಹೇಬರ ಪವರ್‌ಫುಲ್ ಆಶೀರ್ವಾದದಿಂದಾಗಿ ಈತ ತಕ್ಷಣ ಹೊರಗೆ ಬಂದಿದ್ದ.

ಪ್ರತಾಪನ್ ಸಾಹೇಬರ ಇಸ್ಪೀಟು ಅಡ್ಡೆಯ ಪರಾಕ್ರಮ ಎಂತಹದ್ದೆಂದರೆ ಇದರ ಉಸ್ತುವಾರಿಯನ್ನು ವಹಿಸಿಕೊಂಡಿರುವ ಇಬ್ಬರಲ್ಲಿ ಒಬ್ಬನಾದ ಅಶೋಕ ನಗರ ಠಾಣೆಯ ಮಾಜಿ ಹೆಡ್ ಕಾನ್ಸ್‌ಟೇಬಲ್ ಪರಶುರಾಮ ಕಾಳೆ ಇಂದ್ರಪ್ರಸ್ಥ ನಗರದಲ್ಲಿ ಭವ್ಯವಾದ ಬಂಗಲೆ ಕಟ್ಟಿ ಅದಕ್ಕೆ ಶಂಕರ್‌ನಿಲಯ ಎಂದು ಹೆಸರಿಟ್ಟಿದ್ದಾನೆ. ಅಸಲಿಗೆ ಶಂಕರ್ ಎಂಬುದು ಪ್ರತಾಪನ್ ಸಾಹೇಬನ ಇನ್ನೊಂದು ಹೆಸರಂತೆ. ಸದ್ಯ ಈ ಪ್ರಳಯಾಂತಕ ಪಿಸಿ ಕಾಳೆಯನ್ನು ಕಮೀಷನರ್ ಪದ್ಮನಯನ ಅಮಾನತ್ತಿನಲ್ಲಿಟ್ಟಿದ್ದಾರೆ.

ತನ್ನ ಅಕ್ರಮ ಅಡ್ಡೆಯನ್ನು ರಕ್ಷಿಸಿಕೊಳ್ಳಲು ಪ್ರತಾಪನ್ ತನ್ನ ಖಾಕಿ ಇಲಾಖೆಯವರಿಗೆ ಮಾಮೂಲಿಯನ್ನು ಸರಿಯಾಗಿ ಮುಟ್ಟಿಸುವುದರಲ್ಲಿ ಹಿಂದೆ ಬಿದ್ದಿಲ್ಲ. ಆದರೆ ನಗರ ಮತ್ತು ಗ್ರಾಮೀಣ ಪ್ರದೇಶದ ಗಡಿಭಾಗದಲ್ಲಿ ಇಂತಹ ಅಡ್ಡೆಗಳು ನಡೆಯುತ್ತಿರುವುದರಿಂದ ವಸೂಲಿ ವಿಷಯದಲ್ಲಿ ಪೊಲೀಸ್ ಅಧಿಕಾರಿಗಳ ನಡುವೆ ಜಗಳಗಳೂ ಆಗಿವೆ. ಹೀಗಾಗಿ ಇತ್ತೀಚೆಗೆ ಈ ವಸೂಲಿ ಪ್ರಮಾಣದಲ್ಲೂ ಸ್ವಲ್ಪ ಏರಿಕೆ ಕಂಡುಬಂದಿದೆ.

ಪೊಲೀಸ್ ಕಮೀಷನರ್ ಪದ್ಮನಯನ ಅವರು ದಕ್ಷರು ಎಂದು ಹೆಸರು ಮಾಡಿದ್ದಾರೆ. ಆದರೆ ಡಿಸಿಪಿ ಪ್ರತಾಪನ್‌ನ ಬೇನಾಮಿ ಮಾಲೀಕತ್ವದ ಇಸ್ಪೀಟು ಅಡ್ಡೆಯನ್ನು ರೇಡ್ ಮಾಡುವ ಧೈರ್ಯ ತೋರುತ್ತಿಲ್ಲ. ಅವರು ಒಂದು ವೇಳೆ ಈ ಅಡ್ಡೆಯ ಮೇಲೆ ದಾಳಿ ಮಾಡಿದರೆ ಭ್ರಷ್ಟರು ಅಂದರ್ ಆಗಿ ಸಾಲಗಾರರು ಬಾಹರ್ ಆಗುತ್ತಾರೆ. ಆಗ ಅವರೆಲ್ಲರೂ ಪ್ರತಾಪನ್ ಮಾಲೀಕತ್ವದ ಅಸಲಿ ವಿಷಯವನ್ನು ನಿರ್ಭಯ ದಿಂದ ಬಹಿರಂಗಗೊಳಿಸುತ್ತಾರೆ. ಇದರತ್ತ ಕಮೀಷನರ್ ಪದ್ಮನಯನ ಅವರು ಗಮನ ಹರಿಸುವರೇ? ಈ ಪ್ರಶ್ನೆಗೆ ಆ ಸಿದ್ಧಾರೂಢನೇ ಉತ್ತರ ಕೊಡಬೇಕು!

■ ಹುರಳಿಕುಪ್ಪಿ ವಿನಯ



ಸಿ.ಎಂ. ಉದಾಸಿ

ಉದಾಸಿ & ಸನ್ಸ್ ಲೋಕೋಪಯೋಗಿ ಲೂಟಿ

ಮಾಗಡಿ ತಾಲ್ಲೂಕಿನಲ್ಲಿ 680 ಕೋಟಿ ಗುಳುಂ!




ಶಿವಕುಮಾರ್ ಉದಾಸಿ

ಬಿಜೆಪಿ ಸರ್ಕಾರದ ಲೋಕೋಪಯೋಗಿ ಮಹಾತ್ಮೆಯ ಪರಿಯೇನೆಂದು ವಾರ್ತಾ ಇಲಾಖೆಯ ಉದ್ದಂಡ, ಪ್ರಖಾಂಡ ಜಾಹೀರಾತುಗಳಲ್ಲಷ್ಟೇ ಕೇಳಿರಬೇಕಲ್ಲವೇ?

ನಾಡಿನುದ್ದಕ್ಕೂ ಸಾವಿರಾರು ಕಿಲೋಮೀಟರುಗಳ ಸುಸಜ್ಜಿತ ರಸ್ತೆ ಬೆಂಗಳೂರಿನಲ್ಲಿ ಬೇಕಾಬಿಟ್ಟಿ ಫ್ಲೈಓವರ್‌ಗಳು, ಗ್ರಾಮೀಣ ಕರ್ನಾಟಕದ ಉದ್ಧಾರಕ್ಕಾಗಿ ಹಳ್ಳಿಹಳ್ಳಿಗಳಲ್ಲಿ ನಳನಳಿಸುವ ಡಾಂಬರು ರಸ್ತೆ-ಇದೇ ತಾನೆ ಕಳೆದ ನಾಲ್ಕೂವರೆ ವರ್ಷಗಳಿಂದ ಬಿಜೆಪಿ ಸರ್ಕಾರ ತನ್ನ ಸಹಸ್ರಾರು ಕೋಟಿ ರೂಪಾಯಿಗಳ ಮೊತ್ತದ 'ಮಾರ್ಗೋದ್ಧಾರಕ' ಬಡಾಯಿಯ ವೈಖರಿ?



ಕಾಂಗ್ರೆಸ್‌ನಾಯಕ ಮಂಜು



ಖದೀಮ ಕಂಟ್ರಾಕ್ಟರ್ ಕೆಂಪರಾಜು



ಧೂರ್ತ ಕಂಟ್ರಾಕ್ಟರ್ ನಂಜಪ್ಪ

ಲೋಕೋಪಯೋಗಿ ಮಂತ್ರಿ ಸಿ.ಎಂ. ಉದಾಸಿಯವರಂತೂ ಬಾಯಿಬಿಟ್ಟರೆ ಸಾಕು, ಸಾವಿರಾರು ಕೋಟಿ ರೂಪಾಯಿಗಳ ಪುಂಖಾನುಪುಂಖ ರಸ್ತೆ ರಾಮಾಯಣವನ್ನೇ ಕಂಠಪಾಠ ಒಪ್ಪಿಸುತ್ತಾರೆ. ನಿಜ. ಕಳೆದ ನಾಲ್ಕೂವರೆ ವರ್ಷಗಳಿಂದ ಕರ್ನಾಟಕದ ರಸ್ತೆಗಳ ಉದ್ಧಾರಕ್ಕೆಂದು ಬಿಜೆಪಿ ಸರ್ಕಾರ ಸುರಿದ 20 ಸಾವಿರಕ್ಕೂ ಅಧಿಕ ಕೋಟಿ ಮೊತ್ತದ ಕಾಮಗಾರಿಗಳ ಹಣೆಬರಹ ಹಸುಂದಾಗಿಯೇ ಇರಬೇಕಲ್ಲವೇ? ಜನರ ಬೆವರಿನ ತೆರಿಗೆಯ ದುಡ್ಡಿಗೊಂದು ಬೆಲೆ ಬೇಡವೇ? ಉದಾಸಿಯ ರಸ್ತೆ ರಾಬರಿಯ ಭಯಾನಕ ಮತ್ತು ಅಗಾಧತೆಗೆ ಇಲ್ಲೊಂದು ಉದಾಹರಣೆಯಿದೆ.

ಬೆಂಗಳೂರು ಸುತ್ತಮುತ್ತಲ ಜನಕ್ಕೆ ಮಾಗಡಿ ಹೊಸದೇನಲ್ಲ, ಅದೊಂದು ಪುಟ್ಟ ಊರು. ವ್ಯವಸಾಯ ಬಿಟ್ಟರೆ ರಾಜಕೀಯವೊಂದೇ ಆ ಊರಿನ ಅತೀ ಮುಖ್ಯ ಆದಾಯಮೂಲ. ಐಟಿ-ಬಿಟಿ, ಕೈಗಾರಿಕೆಗಳು, ಗಣಿಗಾರಿಕೆ, ಪ್ರವಾಸೋದ್ದಿಮೆ, ಪುಣ್ಯಕ್ಷೇತ್ರ ಏನೊಂದೂ ಇಲ್ಲದ ಈ ಊರಿಗೆ ಇದ್ದಕ್ಕಿದ್ದಂತೆ ಬಳ್ಳಾರಿಯ ಗೆಟಪ್ಪು ಬಂದಿದ್ದೇ ಓರ್ವ ಖತರ್‌ನಾಕ್ ಕಂಟ್ರಾಕ್ಟರ್ ಮತ್ತು ಲೋಕೋಪಯೋಗಿ ಮಂತ್ರಿ ಉದಾಸಿಯ ಪುತ್ರ ಶಿವಕುಮಾರ್ ಉದಾಸಿಯ ಹರಾಮಿ ಮೈತ್ರಿಯಿಂದ!

25 ಪರ್ಸೆಂಟ್ ಕಮೀಷನ್ ಕೊಟ್ಟರೆ ಸಾಕು ಎಂಥಾ ದಕಾಯಿತ ಕಂಟ್ರಾಕ್ಟರ್ ಕೂಡ ನೂರಾರು ಕೋಟಿ ರೂಪಾಯಿಗಳ ಲೋಕೋಪಯೋಗಿ ಗ್ರಾಂಟ್ ಗಿಟ್ಟಿಸಬಲ್ಲ ಎಂಬುದನ್ನು ಅಕ್ಷರಶಃ ಸಾಬೀತುಮಾಡಿ ತೋರಿಸಿದೆ ಬಿಜೆಪಿ ಸರ್ಕಾರ. ಮಂತ್ರಿ ಉದಾಸಿಯ ರಸ್ತೆ ಕಾಳಜಿಗೆ ಪಕ್ಷ, ನಿಷ್ಠೆ ಕಾಯ್ದೆ, ಕಾನೂನು, ನೀತಿ, ನಿಯಮಾವಳಿ ಇತ್ಯಾದಿ ಯಾವುದರ ಹಂಗೇ ಇಲ್ಲ, ನೂರಾರು ಕೋಟಿ ರೂಪಾಯಿಗಳ ಕಾಮಗಾರಿಗಳನ್ನು ಕಾಯ್ದೆಯಂತೆ ಟೆಂಡರ್ ಕರೆದೇ ಮಾಡಬೇಕಿಲ್ಲ, ಹಾಗೇ ನೂರಾರು, ಸಾವಿರಾರು ರೂಪಾಯಿಗಳ ರಸ್ತೆ ಡಾಂಬರೀಕರಣದ ನಿಧಿಯನ್ನು ಬಿಡುಗಡೆ ಮಾಡಿದ ಮೇಲೆ ನಿಜಕ್ಕೂ ಆ ದುಡ್ಡು ರಸ್ತೆಗೇ ಬಳಕೆಯಾಗಿದೆಯಾ ಎಂಬುದೂ ಮುಖ್ಯವಲ್ಲ, ಲೋಕೋಪಯೋಗಿ ಮಂತ್ರಿಗೆ 25 ಪರ್ಸೆಂಟ್ ಲಂಚ ಕೊಟ್ಟನೆಂದರೆ ಯಾವ ಕಳ್ಳನಿಗಾದರೂ ನೂರಾರು ಕೋಟಿಗಳ 'ಬೋಗಸ್ ಬಿಲ್ ಬಂಪರ್ ಲಾಟರಿ'ಯ ಅದೃಷ್ಟ ಖುಲಾಯಿಸುತ್ತದೆ!

680 ಕೋಟಿ

ಅಂಥಾ ಮೈಸೂರು, ಹುಬ್ಬಳ್ಳಿ, ಮಂಗಳೂರುಗಳಂಥ ಬೃಹತ್ ಊರುಗಳಿಗೇ ಇಲ್ಲದಂಥ ರಸ್ತೆ ಕಾಮಗಾರಿ ನಿಧಿ ಮಾಗಡಿಯಂಥ ಪುಟ್ಟ ಊರೊಂದಕ್ಕೆ ಹರಿದು ಬಂದಿದ್ದರ ಪವಾಡದ ಹಿಂದಿನ ವಿವರಗಳು ನಿಜಕ್ಕೂ ವಿಚಿತ್ರ!

ಉದಾಸಿ ಲೋಕೋಪಯೋಗಿ ಮಂತ್ರಿಯಾದ ಮೇಲೆ ಅಂದರೆ ಬಿಜೆಪಿ ಅಧಿಕಾರಾವಧಿಯಲ್ಲಿ ಮಾಗಡಿ ತಾಲ್ಲೂಕೊಂದಕ್ಕೇ ಲೋಕೋಪಯೋಗಿ ಇಲಾಖೆಯಿಂದ ಬಿಡುಗಡೆಯಾದ ಮೊತ್ತ 680 ಕೋಟಿ!

ಯಡ್ಡಿಯ ಪರಮಾಪ್ತ, ಬಿಜೆಪಿಯಿಂದಲೇ ಗೆದ್ದ ತುಮಕೂರು ಗ್ರಾಮಾಂತರದ ಶಾಸಕ ಸುರೇಶ್ ಗೌಡರಿಗೆ ತಮ್ಮ ಕ್ಷೇತ್ರದ ರಸ್ತೆಗಳಿಗೆಂದು 300 ಕೋಟಿ ರೂಪಾಯಿಗಳ ಲೋಕೋಪಯೋಗಿ ಫಂಡು ಮಂಜೂರು ಮಾಡಿಸಿಕೊಳ್ಳುವುದಕ್ಕೇ ಸುಸ್ತು ಹೊಡೆಯಬೇಕಾದ ಪರಿಸ್ಥಿತಿಯಲ್ಲಿ ಕೇವಲ ಮಾಗಡಿಗೆಂದೇ 680 ಕೋಟಿ ರೂಪಾಯಿಗಳು ಬಿಡುಗಡೆಯಾಗಿವೆ. 2008-09 ರಲ್ಲಿ 80 ಕೋಟಿ, 09-10 ರಲ್ಲಿ 110 ಕೋಟಿ, 10-11 ರಲ್ಲಿ 375 ಕೋಟಿ ಮತ್ತು 11-12 ರಲ್ಲಿ 150 ಕೋಟಿ ರೂಪಾಯಿಗಳು ಕೇವಲ ಮಾಗಡಿಗೆಂದೇ ಲೋಕೋಪಯೋಗಿ ಇಲಾಖೆಯಿಂದ ಮಂಜೂರಾಗಿವೆ.

ಬಹುಶಃ ಮುಖ್ಯಮಂತ್ರಿಯ ಕ್ಷೇತ್ರಕ್ಕೂ ಇಷ್ಟೊಂದು ಭಾರೀ ಪ್ರಮಾಣದಲ್ಲಿ ಮಂಜೂರಾಗದ ರಸ್ತೆ ಕಾಮಗಾರಿ ಫಂಡು ಯಾವ ಅನಿವಾರ್ಯ ಕಾರಣಗಳೂ ಇಲ್ಲದ ಮಾಗಡಿಗೆ ಬಂದಿದ್ದಾದರೂ ಹೇಗೆ?

ಮಾಗಡಿ ಶಾಸಕ ಬಾಲಕೃಷ್ಣ ಬಿಜೆಪಿಯ ಪ್ರಭಾವಿ ನಾಯಕರೇನಲ್ಲ, ಅವರು ಪಕ್ಕಾ ಜೆಡಿಎಸ್ ಮತ್ತು ಕುಮಾರಸ್ವಾಮಿಯ ಪರಮಾಪ್ತ. ಬಿಜೆಪಿಯ ಮುಖ್ಯಮಂತ್ರಿಯಾಗಿದ್ದ ಯಡ್ಡಿಗೆ ಪಕ್ಕಾ ಎದುರಾಳಿಯಾಗಿದ್ದ ಜೆಡಿಎಸ್‌ನ ಶಾಸಕರೊಬ್ಬರ ಕ್ಷೇತ್ರಕ್ಕೆ ಯಾವ ಬಿಜೆಪಿಯ ನಾಯಕ-ಶಾಸಕರ ಕ್ಷೇತ್ರಕ್ಕೂ ಇಲ್ಲದಷ್ಟು ದೊಡ್ಡ ಮೊತ್ತದ ಲೋಕೋಪಯೋಗಿ ಹಣ ರಸ್ತೆ ಕಾಮಗಾರಿಗಳ ಹೆಸರಲ್ಲಿ ಹರಿದುಬರುತ್ತದೆ. ಎತ್ತಿಂದೆತ್ತ ಲೆಕ್ಕ ಹಾಕಿದರೂ ಮಾಗಡಿಯ ಎಲ್ಲಾ ರಸ್ತೆಗಳ ಒಟ್ಟು ಉದ್ದ 180 ಕಿ.ಮೀ.ಗಳಿಗಿಂತ ಹೆಚ್ಚಿಲ್ಲ. ತಿಪ್ಪಗೊಂಡನಹಳ್ಳಿಯಿಂದ ಶುರುವಾಗುವ ಬೆಂಗಳೂರು-ಹುಲಿಯೂರು ದುರ್ಗ ರಸ್ತೆಯಲ್ಲಿ ಮಾಗಡಿಯ ಗಡಿಯಾದ ಹುಲಿಕಟ್ಟೆಯ ತನಕ ರಸ್ತೆಯ ಉದ್ದವೇ 30 ಕಿ.ಮೀ. ರಾಮನಗರ-ಶಿವಗಂಗೆ ರಸ್ತೆಯ ಉದ್ದ ಹೆಚ್ಚೆಂದರೆ 80 ಕಿ.ಮೀ. ಮಾತ್ರ. ಇದರಲ್ಲಿ ಮಾಗಡಿ ತಾಲ್ಲೂಕಿನ ವ್ಯಾಪ್ತಿಗೆ ಬರುವುದು ಕೇವಲ 50 ಕಿ.ಮೀ. ಸೋಲೂರು-ಮಾಗಡಿ ರಸ್ತೆಯು 30 ಕಿ.ಮೀ. ಕುಣಿಗಲ್-ಮಾಗಡಿ ರಸ್ತೆಯ 26 ಕಿ.ಮೀ. ಮತ್ತು ಹುಲಿಯೂರು ದುರ್ಗ-ಜಾಲಮಂಗಲ-ರಾಮನಗರ ಮಾರ್ಗದ 35 ಕಿ.ಮೀ. ಸೇರಿದರೆ ಮಾಗಡಿ ತಾಲ್ಲೂಕಿನ ಎಲ್ಲಾ ರಸ್ತೆಗಳ ಒಟ್ಟು ಉದ್ದ 180 ಕಿ.ಮೀ. ದಾಟುವುದಿಲ್ಲ.

ಉದಾಸಿ ಮಗನ ಮಾಯೆ!

ಆ ಪ್ರಕಾರ ರಾಷ್ಟ್ರೀಯ ಸರಾಸರಿ ರಸ್ತೆ ನಿರ್ಮಾಣ ವೆಚ್ಚದ ಮಾನದಂಡದ ರೀತ್ಯವೇ ಫಂಡು ಬಿಡುಗಡೆ ಮಾಡುವುದಾದರೆ ಮಾಗಡಿಗೆ ಕೇವಲ 180 ಕೋಟಿ ರೂಪಾಯಿಗಳಾದರೆ ಅದೇ ಹೆಚ್ಚು. ಆದರೆ ಮಾಗಡಿಗೆ ಬಿಡುಗಡೆಯಾಗಿರುವುದು 680 ಕೋಟಿ!

ಅದು ಮಂತ್ರಿ ಉದಾಸಿಯ ಮಗ ಶಿವಕುಮಾರ್ ಉದಾಸಿ ಮತ್ತು ಮಾಗಡಿಯ ಖದೀಮ ಕಂಟ್ರಾಕ್ಟರ್ ಕೆಂಪರಾಜು ನಡುವಿನ ಲೂಟಿಕೋರ ಬಾಂಧವ್ಯದ ಪ್ರತಿಫಲ. ಕೇವಲ ಮಾಗಡಿಗೆಂದು ಬಿಡುಗಡೆಯಾದ 680 ಕೋಟಿ ಮಾತ್ರವಲ್ಲದೆ ಮಾಗಡಿಯ ಹೊರತಾಗಿ ಕೋಲಾರ, ಬೆಂಗಳೂರು, ತುಮಕೂರುಗಳಲ್ಲೂ ಇದೇ ಕಂಟ್ರಾಕ್ಟರ್ ಕೆಂಪರಾಜು ಮತ್ತು ಆತನ ಬೇನಾಮಿಗಳಿಗೆಂದು ಒಟ್ಟು 1200 ಕೋಟಿ ರೂಪಾಯಿಗಳಷ್ಟು ಲೋಕೋಪಯೋಗಿ ಫಂಡನ್ನು ಮಂತ್ರಿ ಉದಾಸಿ ದಯಪಾಲಿಸಿದ್ದಾರೆ.

ಸರಿ, ಮಾಗಡಿಗೆ ಬಂದ ಈ 680 ಕೋಟಿ ರೂಪಾಯಿಗಳ ನಿಧಿಯಲ್ಲಿ ಇಡೀ ಮಾಗಡಿಯ ರಸ್ತೆಗಳನ್ನೆಲ್ಲ ಬೆಳ್ಳಿಯ ತಗಡಿನಿಂದ ನಿರ್ಮಿಸಬಹುದಿತ್ತಲ್ಲವೆ? ಇನ್ನು ತಲಾ ರಸ್ತೆಗೆ ಮೂರ್‍ನಾಲ್ಕು ಪಟ್ಟು ಅಧಿಕ ಮೊತ್ತದ ಫಂಡು ಬಂದಿದೆಯೆಂದರೆ, ಇನ್ನಾಮತ್ತಿಗೂ ಕಾಮಗಾರಿಯ ಅಗತ್ಯವೇ ಇಲ್ಲದಂತೆ ಮಾಗಡಿಯ ರಸ್ತೆಗಳೆಲ್ಲ ನಳನಳಿಸಬೇಕಲ್ಲವೆ?

ಆದರೆ ಮಾಗಡಿಯ ರಸ್ತೆಗಳ ದುರ್ಗತಿಯೇ ಬೇರೆ. ಇಲ್ಲಿಗೆ ವರ್ಷದ ಹಿಂದೆ ಮಾಗಡಿ ಆಟೋ ಚಾಲಕರೆಲ್ಲ ಹದಗೆಟ್ಟ ರಸ್ತೆಗಳನ್ನು ರಿಪೇರಿ ಮಾಡುವಂತೆ ಒತ್ತಾಯಿಸಿ

ಎಮ್ಮೆಲ್ಲೇ ಬಾಲಕೃಷ್ಣಗೂ 25 ಪರ್ಸೆಂಟ್!




ಬಾಲಕೃಷ್ಣ

ಇಷ್ಟು ಮೊತ್ತದ ದುಡ್ಡು ಮಾಗಡಿಯಂಥ ಬಡಕಲು ತಾಲ್ಲೂಕಿಗೇನಾದರೂ ಪ್ರಾಮಾಣಿಕವಾಗಿ ಬಳಕೆಯಾಗಿದ್ದೇ ಆಗಿದ್ದರೆ ಇಡೀ ತಾಲ್ಲೂಕಿನ ಅಷ್ಟೂ ರಸ್ತೆಗಳಿಗೆ ಬೆಳ್ಳಿಯ ಹೊದಿಕೆ ಹೊದಿಸುವುದು ಒತ್ತಟ್ಟಿಗಿರಲಿ, ಈ ಪೈಕಿ ಕನಿಷ್ಠ 135 ಕೋಟಿಯಲ್ಲಿ ಹೇಮಾವತಿ ಏತ ನೀರಾವರಿಯಿಂದ ಮಾಗಡಿಯ 95 ಕೆರೆಗಳಿಗೆ ನೀರು ಹರಿಸಬಹುದಿತ್ತು, ಮಾಗಡಿಯ ಪ್ರತಿಯೊಬ್ಬ ಮತದಾರನಿಗೆ ಇಡೀ ದುಡ್ಡು ಹಂಚಿದ್ದರೂ ತಲಾ ಐದು ಲಕ್ಷದಂತೆ ಬರುತ್ತಿತ್ತು, ಬೆಳಗಾವಿಯಲ್ಲಿ ನಿರ್ಮಿಸಿದ ಸುವರ್ಣಸೌಧದ ಒಟ್ಟು ವೆಚ್ಚವೇ 375 ಕೋಟಿ. ಅಂಥಾದ್ದರಲ್ಲಿ ಕನಿಷ್ಠ 180 ಕೋಟಿಯಷ್ಟು ಪ್ರಾಮಾಣಿಕವಾಗಿ ಖರ್ಚು ಮಾಡಿದ್ದರೂ ಸಾಕು. ಇಡೀ ಮಾಗಡಿಯ ಅಷ್ಟೂ ರಸ್ತೆಗಳು ದುಬೈ, ಸಿಂಗಾಪೂರ್‌ನ ಐಷಾರಾಮಿ ರಸ್ತೆಗಳಷ್ಟೇ ಮಿಂಚುತ್ತಿದ್ದವು.

ದುರಂತವೆಂದರೆ 680 ಕೋಟಿ ರೂಪಾಯಿಗಳಷ್ಟು ಮಂಜೂರಾಗಿ ಖರ್ಚಾದ ನಂತರವೂ ಮಾಗಡಿಯದ್ದು ಅವೇ ಕುಲಗೆಟ್ಟ ರಸ್ತೆಗಳು!

ಯಃಕಶ್ಚಿತ್ ಮೂರು ಲಕ್ಷದ ಅಂಗನವಾಡಿ ಕಟ್ಟಡದ ಶಂಕುಸ್ಥಾಪನೆಗೇ ಹಠಕ್ಕೆಬಿದ್ದು ಪತ್ರಕರ್ತರನ್ನು ಕರೆಸಿ ಗುದ್ದಲಿಪೂಜೆ ಮಾಡುವ ಶಾಸಕ ಬಾಲಕೃಷ್ಣ ಈ ಪ್ರಕರಣದಲ್ಲಿ ಮಾತ್ರ ಜಾಣನಿದ್ದೆ ನಟಿಸುತ್ತಾರೆ. ಜಿಲ್ಲಾ ಪಂಚಾಯ್ತಿ ಸದಸ್ಯರ ಪಾಲಿನ ಕಾಮಗಾರಿಗಳನ್ನೂ ಬಿಡದೆ ಪುಡಿ ಶೌಚಾಲಯವನ್ನೂ ಪಟ್ಟುಹಿಡಿದು ಉದ್ಘಾಟಿಸುವ ಶಾಸಕ ಬಾಲಕೃಷ್ಣ 680 ಕೋಟಿ ಮಾಗಡಿಗೆ ಬಂದಿದ್ದರ ಬಗ್ಗೆ ಏನೆಲ್ಲಾ ಪ್ರಚಾರ ಕಾರ್ಯಕ್ರಮ ನಡೆಸಬೇಕಿತ್ತಲ್ಲವೆ? ಅಷ್ಟಕ್ಕೂ ಪ್ರತಿಯೊಂದು ಕಾಮಗಾರಿಗೆ ದುಡ್ಡು ಮಂಜೂರಾಗಬೇಕೆಂದರೆ ಸ್ಥಳೀಯ ಶಾಸಕರ ಶಿಫಾರಸು ಪತ್ರ ಬೇಕೇಬೇಕು. ಇಂಥ ಸಾವಿರಾರು ಶಿಫಾರಸ್ಸು ಪತ್ರಗಳನ್ನು ಶಾಸಕ ಬಾಲಕೃಷ್ಣ ಬರೆದು ಕೊಟ್ಟಿದ್ದರಿಂದಲೇ ಮಂತ್ರಿ ಉದಾಸಿ ಫಂಡು ಬಿಡುಗಡೆ ಮಾಡಲು ಸಾಧ್ಯ ತಾನೆ?

ಆದರೆ ಎಮ್ಮೆಲ್ಲೇ ಬಾಲಕೃಷ್ಣ ಈ ಬಗ್ಗೆ ಎಲ್ಲೂ ಬಾಯಿಬಿಟ್ಟಿಲ್ಲ, ಯಾವ ಕಾಮಗಾರಿಗೂ ಗುದ್ದಲಿ ಪೂಜೆ, ಶಂಕುಸ್ಥಾಪನೆ ನಡೆದೇ ಇಲ್ಲ, ಪಕ್ಕದ ತುಮಕೂರು ಗ್ರಾಮಾಂತರದ ಶಾಸಕ ಸುರೇಶ್‌ಗೌಡ ಪ್ರತಿಯೊಂದು ಕಾಮಗಾರಿಗೂ ಶಂಕುಸ್ಥಾಪನೆ ಮಾಡಿ, ಕಾಮಗಾರಿ ಸ್ಥಳದಲ್ಲಿ ಬೋರ್ಡು ಬರೆಸಿ ಹಾಕಿಸಿ ಸಿಕ್ಕಾಪಟ್ಟೆ ಪ್ರಚಾರ ಪಡೆದಿರುವಾಗ ಮಾಗಡಿ ಶಾಸಕ ಬಾಲಕೃಷ್ಣ ಮಾತ್ರ ಏಕೆ 680 ಕೋಟಿ ಕಾಮಗಾರಿಗಳ ಯಾವೊಂದು ವಿವರವನ್ನೂ ಬಾಯಿಬಿಡುವುದಿಲ್ಲ?



ನಟರಾಜ್

ವಿಷಯ ಸ್ಪಷ್ಟ. ಖದೀಮ ಕಂಟ್ರಾಕ್ಟರ್ ಕೆಂಪರಾಜು ಹೇಗೆ ಉದಾಸಿ ಮಗನನ್ನು ಬುಟ್ಟಿಗೆ ಹಾಕಿಕೊಂಡು ಅಪಾಟ ರೊಕ್ಕ ದೋಚಿದನೋ? ಅದೇ ರೀತಿ ಮಾಗಡಿ ಶಾಸಕ ಬಾಲಕೃಷ್ಣರನ್ನೂ ತನ್ನ ಡಕಾಯಿತಿಗೆ ಬಳಸಿಕೊಂಡಿದ್ದಾನೆ. ಮಂತ್ರಿ ಉದಾಸಿಗೆ ಸಂದ 25 ಪರ್ಸೆಂಟ್ ಕಮೀಷನ್ನಿನಂತೆ ಶಾಸಕ ಬಾಲಕೃಷ್ಣರಿಗೂ ಶೇ. 25 ಪರ್ಸೆಂಟೇಜ್ ಸಂದಾಯವಾಗಿದೆ. ಅಂದರೆ 170 ಕೋಟಿ!

ಸ್ಥಳೀಯ ಶಾಸಕರ ಪಾಲುದಾರಿಕೆಯಿಲ್ಲದೆ 680 ಕೋಟಿ ಮೊತ್ತದ ಹಗಲು ದರೋಡೆ ಹೇಗೆ ಸಾಧ್ಯ?



...ಮು ಪ್ರತಿಭಟಿಸುತ್ತಾರೆ. ಎನ್‌ಇಎಸ್ ರಸ್ತೆಯಿಂದ ...ತ ಸರ್ಕಲ್ ತನಕ ವಾಹನಗಳು ಓಡಾಡುವುದಿರಲಿ, ... ಕೂಡ ನಡೆಯಲಾರದಷ್ಟು ಕುಲಗೆಟ್ಟ ರಸ್ತೆಯನ್ನು ...ಡಾಡುವಂತೆ ಆಗ್ರಹಿಸಿ ಆಟೋಚಾಲಕರು ನಡೆಸಿದ ...ಯ ಮೂಲಕ ಆಲ್ಲಿನ ರಸ್ತೆಗಳು ದುರ್ಗತಿಗೆ ...ಳ್ಳಿಗೆಟ್ಟು ಬೀದಿಗಿಳಿದಿದ್ದರು.

... ಸಹಜವಾಗೇ ಮಾಗಡಿಯ ಕಾಂಗ್ರೆಸ್ ನಾಯಕ ...ಜು ಅವರ ಕುತೂಹಲ ಕೆರಳಿಸಿದೆ. ಹಾಗಾದರೆ ...ನಾಲ್ಕು ವರ್ಷಗಳಿಂದ ಮಾಗಡಿಯ ಯಾವ ...ರ್ಕಾರದ ಫಂಡು ಬರಲಿಲ್ಲವೆ? ಕುತೂಹಲಕ್ಕೆಂದು ... ಹಕ್ಕು ಕಾಯ್ದೆಯಡಿ ಮಾಗಡಿ ಎನ್‌ಇಎಸ್ ... ಕೆಂಪೇಗೌಡ ವೃತ್ತದ ವರೆಗಿನ 900 ಮೀಟರ್‌ಗಳ ...ರುರಿತಂತೆ ಈತನಕ ನಡೆದಿರುವ ಕಾಮಗಾರಿಗಳ ...ೇಳಿ ಲೋಕೋಪಯೋಗಿ ಇಲಾಖೆಗೆ ಅರ್ಜಿ ...

...ಬಿಲ್ಲಿನ ದುಡ್ಡು ಗುಳುಂ...

...ಚಿತ ದಾಖಲೆಗಳು ಎಂಥವರನ್ನೂ ಬೆಚ್ಚಿ...ುತಿತ್ತು, 2010-11 ರ ಸಾಲಿಗೆಂದೇ ಎನ್‌ಇಎಸ್ ...ೇಗೌಡ ವೃತ್ತದ 900 ಮೀಟರುಗಳ ರಸ್ತೆಗೆ ...ವರೆ ಕೋಟಿ ರೂಪಾಯಿಗಳಷ್ಟು ...ಪಯೋಗಿ ಫಂಡು ಬಿಡುಗಡೆಯಾಗಿತ್ತು, ಇನ್ನೂ ...ವರೆ ಹಾಗೇ ಬಿಡುಗಡೆಯಾದ ಎರಡೂವರೆ ... ರೂಪಾಯಿಗಳ ಪೂರ್ತಿ ಮೊತ್ತವನ್ನು ...್‌ಗಳಾದ ಕೆಂಪರಾಜು, ಶಂಕ್ರ ಮತ್ತು ನಂಜಯ್ಯ ...ವಳಿಗಳಾಗಲೇ ನಗದಾಗಿಸಿಕೊಂಡೂ ಆಗಿತ್ತು! ...ಮಗಾರಿಯೇ ನಡೆಯದೆ, ಕುಲಗೆಟ್ಟ ರಸ್ತೆ ...ಯಲ್ಲೇ ಇರುವಾಗ ಅದ್ಹೇಗೆ ಬಿಡುಗಡೆಯಾದ ...ರೆ ಕೋಟಿಯ ಬಿಲ್ಲು ಗುತ್ತಿಗೆದಾರರ ಜೇಬು ...ಸಾಧ್ಯ?

...ಬಗ್ಗೆ ಮತ್ತಷ್ಟು ಕಾತುರಕ್ಕೆ ಬಿದ್ದ ಮಾಗಡಿಯ ... ನಾಯಕ ಎ. ಮಂಜು ಇಡೀ ಕಾಮಗಾರಿಯ ...ನ್ನು ಕೋರಿ ಮಾಹಿತಿ ಕಾಯ್ದೆಯಡಿ ಅರ್ಜಿ ...ಇದೊಂದೇ ಕಾಮಗಾರಿಯ ಹೆಸರಲ್ಲಿ ನಾಲ್ಕೂವರೆ ... ರಸ್ತೆ ಡಾಂಬರೀಕರಣದ ಲೆಕ್ಕ ತೋರಿಸಲಾಗಿತ್ತು. ...ಮಂಜೂರಾತಿಯ ಪ್ರಕಾರ 4.5 ಕಿ.ಮೀ.ಗಳ ...ಕರಣದ ಒಂದೇ ಕೆಲಸವನ್ನು ಕಾನೂನುಬಾಹಿರ ... ತುಂಡು ಗುತ್ತಿಗೆಗಳನ್ನಾಗಿ ವಿಂಗಡಿಸಲಾಗಿತ್ತು. ... ಲಕ್ಷ ರೂಪಾಯಿಗಳಂತೆ 300 ಮೀಟರುಗಳ ...ತಿ ಕಾಮಗಾರಿಗಳನ್ನಾಗಿಸಿ ಒಂದೇ ಗ್ಯಾಂಗಿನ ...್‌ಗಳ ಹೆಸರಲ್ಲಿ ಟೆಂಡರ್ ನೀಡಲಾಗಿತ್ತು, ಇನ್ನೂ ...ದರೆ ಈ ರೀತಿ ತುಂಡು ಗುತ್ತಿಗೆಗಳನ್ನಾಗಿ ... ಕಾಮಗಾರಿಗಳ ಟೆಂಡರ್ ಜಾಹೀರಾತನ್ನು ...ವಾಣಿಯ ಹುಬ್ಬಳ್ಳಿ ಗ್ರಾಮಾಂತರ ಆವೃತ್ತಿಯಲ್ಲಿ ...ಗಿತ್ತು!


...ಮಗಾರಿಯನ್ನೇ ನಡೆಸದೆ ಕೋಟಿಗಟ್ಟಲೆ ಬಿಲ್ಲಿನ ...ಡುಗಡೆಯಾಗಿದ್ದು ಗೊತ್ತಾಗುತ್ತಿದ್ದಂತೆಯೇ ಕಾಂಗ್ರೆಸ್ ... ಎ. ಮಂಜು ಮತ್ತಿತರ ಸಂಘಟನೆಗಳು ...ೋಷ್ಠಿ ಕರೆದದ್ದೇ ಎರಡೂವರೆ ಕೋಟಿಯ ...ನ್ನು ಬಯಲಿಗೆಳೆದರು. ಮಾಗಡಿಯ ಜೆಡಿಎಸ್ ...ಲಕೃಷ್ಣನೇ ನಿಂತು ಲೂಟಿಗೆ ಕೈಜೋಡಿಸಿದ್ದಾರೆಂಬ ...ವನ್ನೂ ಹೊರಡಿಸಿದರು. ಇದಕ್ಕೆ ತಕ್ಕ ಏಟು ...ಕೆಂದು ಪ್ರತಿ ಪತ್ರಿಕಾಗೋಷ್ಠಿಯೊಂದನ್ನು ಕರೆದ ... ಶಾಸಕ ಬಾಲಕೃಷ್ಣ 'ನಿಜ: ಆದರೆ ಇಡೀ ...ಾರಿಗಳನ್ನ ಮಾಗಡಿ ತಾಲ್ಲೂಕಿನ ...ಡು-ಜಲಸೂರು ರಸ್ತೆ ಮತ್ತು ಆಲಸಬೆಲೆ ಗೇಟ್ ... ಮಾಡಲಾಗಿದೆ. ಇದೊಂದು ರಾಜಕೀಯ ...ತ ಆರೋಪ....' ಎಂದುಬಿಟ್ಟರು.


ಸಾವಿರಾರು ಪೀಸ್‌ವರ್ಕ್

...ಾದರೆ ಈ ಕೆಲಸವನ್ನು ಬೇರೆಡೆಯಾದರೂ ...ೇಕಲ್ಲವೆ? ಅತ್ತ ಜಲಸೂರು ರಸ್ತೆ ಮತ್ತು ಆಲಸಬೆಲೆ ...ಸ್ತೆಗಳಲ್ಲಿ ನಡೆದಿದ್ದ ಕಾಮಗಾರಿ ವಿವರಗಳನ್ನು ... ಅದೇ ಮತ್ತೊಂದು ಹಗರಣವನ್ನು ತೆರೆದಿಟ್ಟಿತ್ತು, ... ಮೊತ್ತದ ಪ್ರತ್ಯೇಕ ಕಾಮಗಾರಿ ನಡೆದಿತ್ತಾದರೂ ...ಕೆ. ಪ್ರಕಾಶ್ ಎಂಬ ಕಂಟ್ರಾಕ್ಟರ್ ಈಗಾಗಲೇ

ಬಿಲ್ಲಿನ ಮೊತ್ತ ಪಡೆದುಬಿಟ್ಟಿದ್ದ. ಹಾಗಾದರೆ ಎನ್‌ಇಎಸ್ ರಸ್ತೆ ಸೇರಿದಂತೆ ಹುಣಸನಹಳ್ಳಿ-ಚಿಕ್ಕನಹಳ್ಳಿ ರಸ್ತೆ ಕಾಮಗಾರಿಯ ಎರಡೂವರೆ ಕೋಟಿಯ ಕಾಮಗಾರಿಯೇ ನಡೆದಿಲ್ಲ!

ಇದು ಒಂದು ಸಣ್ಣ ಸ್ಯಾಂಪಲ್ ಮಾತ್ರ. ಲೋಕೋಪಯೋಗಿ ಇಲಾಖೆಯ ಮಾಗಡಿ ಉಪವಿಭಾಗ ರಾಮನಗರ ಜಿಲ್ಲೆಯ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಕಾರ್ಯಪಾಲಕ ಅಭಿಯಂತರರ ವ್ಯಾಪ್ತಿಗೆ ಒಳಪಡುತ್ತದೆ. 5054 HOA




ಕರ್ನಾಟಕ ಸರ್ಕಾರ
ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಅಂದರೆ ಲೆಕ್ಕ ಶೀರ್ಷಿಕೆಯ ಅಡಿಯಲ್ಲಿ ಕೇಂದ್ರ ಸರ್ಕಾರದ Other road fund (ORF) ಬಾಬತ್ತಿನಲ್ಲಿ ಮಾಗಡಿಗೆಂದು ಮಂಜೂರಾದ 680 ಕೋಟಿ ರೂಪಾಯಿಗಳ ಪೂರ್ತಿ ನಿಧಿಯನ್ನು ಎಷ್ಟೊಂದು ವ್ಯವಸ್ಥಿತವಾಗಿ ಧೋಚಲಾಗಿದೆ ಎಂಬುದೇ ರಾಜ್ಯ ಭ್ರಷ್ಟಾಚಾರದ ಇತಿಹಾಸದಲ್ಲಿ ಪ್ರತ್ಯೇಕ ಅಧ್ಯಾಯವಾಗುತ್ತದೆ. 2008-09 ರಲ್ಲಿ ಬಿಡುಗಡೆಯಾದ 80 ಕೋಟಿಯಲ್ಲಿ ಶೇ. 5 ರಷ್ಟನ್ನೂ ಕಾಮಗಾರಿಗೆ ಬಳಸದೆ ದೋಚಲಾಗಿದೆ. 2009-10 ರಲ್ಲಿ 110 ಕೋಟಿ ರೂಪಾಯಿಗಳ ಪೈಕಿ ಬರೋಬ್ಬರಿ 105 ಕೋಟಿಯನ್ನು ಕಳ್ಳಬಿಲ್ಲು ಹಾಕಿ ಕಬಳಿಸಲಾಗಿದೆ. 2010-11 ರಲ್ಲಿ ಮತ್ತೆ 375 ಕೋಟಿ ಮಂಜೂರಾದರೆ ನಾಮಕಾವಸ್ಥೆಗೆ ಒಂದೆರಡು ಕೆಲಸ ಮಾಡಿ ಉಳಿಕೆ ಶೇ. 95 ರಷ್ಟನ್ನು ಬೋಗಸ್ ಬಿಲ್ ಮಾಡಿ ದೋಚಲಾಗಿದೆ. ಈ ವರ್ಷ ಅಂದರೆ 2011-12 ರ ಸಾಲಿನಲ್ಲಿ ಮಾಗಡಿಗೆ ಬಂದ 150 ಕೋಟಿಯದ್ದೂ ಇದೇ ಕತೆ.

ಇಡೀ ಮಾಗಡಿ ಬೋಗಸ್ ಬಿಲ್ ಹಗರಣದ ವೈಶಿಷ್ಟ್ಯವೇನೆಂದರೆ 680 ಕೋಟಿಯಷ್ಟು ಭಾರಿ ಮೊತ್ತದ ಹಣವನ್ನು ಸಾರಾಸಗಟಾಗಿ ತುಂಡು ಗುತ್ತಿಗೆಗಳನ್ನಾಗಿ ವಿಭಜಿಸಲಾಗಿದೆ. ಇದರರ್ಥ ಇಡೀ ಯೋಜನೆಯನ್ನೇ ಇ ಪ್ರಕ್ಯೂರ್‌ಮೆಂಟ್‌ಗೆ ಒಳಪಡದಂತೆ ವಂಚಿಸುವುದು. ತಲಾ 19 ಲಕ್ಷದಂತೆ ವಿಭಜಿಸಿದ ಟೆಂಡರುಗಳ ಜಾಹೀರಾತನ್ನು ಉತ್ತರ ಕರ್ನಾಟಕದ ಯಾವ್ಯಾವುದೋ ಅನಾಮಧೇಯ ಪತ್ರಿಕೆಗಳಲ್ಲಿ ಪ್ರಕಟಿಸಿ ಸ್ಥಳೀಯ ಯಾವೊಬ್ಬ ಗುತ್ತಿಗೆದಾರನಿಗೂ ಗೊತ್ತಾಗದಂತೆ ಬಚ್ಚಿಡಲಾಗಿದೆ. ಈ ಪೈಕಿ ಶೇ. 90 ರಷ್ಟನ್ನು ಅಂದರೆ ಸರಿಸುಮಾರು 600 ಕೋಟಿ ರೂಪಾಯಿಗಳ ಕಾಮಗಾರಿಯನ್ನು ಮಾಗಡಿಯ ಖದೀಮ ಕಂಟ್ರಾಕ್ಟರ್‌ಗಳಾದ ಕೆಂಪರಾಜು, ಶಂಕ್ರ ಮತ್ತು ನಂಜಯ್ಯರಿಗೇ ನೀಡಲಾಗಿದೆ. ಎಲ್ಲಕ್ಕೂ ಮಿಗಿಲಾಗಿ ಕಾಮಗಾರಿಯನ್ನೇ ಮಾಡದೆ ಬೋಗಸ್ ಬಿಲ್ ಜಡಿದು ಪೂರ್ತಿ ಹಣವನ್ನು ಲಪಟಾಯಿಸಲಾಗಿದೆ.

ಉದಾಸಿಗೆ ಜೈಲು ಏಕಿಲ್ಲ?

ಅಂದರೆ ಕರ್ನಾಟಕದ ಜನಕ್ಕಿರಲಿ ಖುದ್ದು ಮಾಗಡಿಯ ಯಾವೊಬ್ಬ ನರಪಿಳ್ಳೆಗೂ ಗೊತ್ತಾಗದಂತೆ ವ್ಯವಸ್ಥಿತವಾಗಿ ಇಡೀ ಪ್ರಕ್ರಿಯೆಯನ್ನೇ ತೆರೆಮರೆಯಲ್ಲಿ ದೋಚಲಾಗಿದೆ. ದೇವೇಗೌಡರ ಕಾಲದ ತುಂಡುಗುತ್ತಿಗೆ ಹಗರಣ, ಕೃಷ್ಣರ ಕಾಲದ ವಿಕಾಸಸೌಧದ ಕರ್ಮಕಾಂಡ, ಪಟೇಲ್ ಅವಧಿಯ ಬಾಂಡ್ ಕಾಮಗಾರಿ ದೋಖಾ, ಬಂಗಾರಪ್ಪ ಕಾಲದ ನಾರಾಯಣಪುರ ಬಲದಂಡೆ ಕಾಮಗಾರಿ ಮೋಸಕ್ಕೆ ಹೋಲಿಸಿದರೆ ಮಾಗಡಿ ಬೋಗಸ್ ಬಿಲ್ ಹಗರಣದ ಆಳವಿಸ್ತಾರವೇ ಭಯಾನಕ. ಇತ್ತೀಚೆಗೆ ಬಿಬಿಎಂಪಿಯ ಮೂರು ಕ್ಷೇತ್ರಗಳಲ್ಲಿ ನಡೆದ 1500 ಕೋಟಿಗೂ ಅಧಿಕ ಮೊತ್ತದ ಕಳಪೆ ಕಾಮಗಾರಿಗೆ ಹೋಲಿಸಿದರೆ ಮಾಗಡಿಯ ವೈಶಿಷ್ಟ್ಯವೇ ಬೇರೆಯಾಗುತ್ತದೆ. ಇಲ್ಲಿ ಒಬ್ಬನೇ ಕಂಟ್ರಾಕ್ಟರ್ ತನ್ನ ಬೇನಾಮಿಗಳ ಮೂಲಕ 600 ಕೋಟಿಗೂ ಅಧಿಕ ಮೊತ್ತ ದರೋಡೆ ನಡೆಸಿರುವುದೇ ವಿಚಿತ್ರ.

ಇಂಥಾದ್ದೊಂದು ಹಗಲು ದರೋಡೆಯ ಮೂಲ ಪುರುಷ ಮಂತ್ರಿ ಉದಾಸಿಯ ಮಗ ಶಿವಕುಮಾರ್ ಉದಾಸಿ!

680 ಕೋಟಿಯಲ್ಲಿ ಉದಾಸಿ ಮಗನಿಗೆ ಶೇ. 25 ರಷ್ಟು ಕಮೀಷನ್ ಎಂದರೆ ಅದೊಂದೇ 170 ಕೋಟಿ ರೂಪಾಯಿಗಳ ಲಂಚವಾಯಿತು. ಇನ್ನು ಆಯಾ ಹಂತದ ಇಂಜಿನಿಯರ್‌ಗಳು, ಲೋಕೋಪಯೋಗಿ ಸಚಿವಾಲಯದ ಮುಖ್ಯಸ್ಥರು, ಸ್ಥಳೀಯ ವಿವಿಧ ಅಧಿಕಾರಿಗಳೆಲ್ಲ ಸೇರಿ ಅರ್ಧಕ್ಕರ್ಧ ಕಬಳಿಸಿದರೂ ಉಳಿಕೆ ಅರ್ಧದಷ್ಟನ್ನು ಕಂಟ್ರಾಕ್ಟರ್ ಕೆಂಪರಾಜು ಒಬ್ಬನೇ ಲಪಟಾಯಿಸಿದ್ದಾನೆ. ದುರಂತವೆಂದರೆ ಮಂತ್ರಿ ಉದಾಸಿ ಸೇರಿದಂತೆ ಈ ಹಗರಣದ ಯಾರೊಬ್ಬರೂ ಜೈಲು ಪಾಲಾಗಿಲ್ಲ.

● ರಾ. ಸೋಮನಾಥ್


ಗೋವರ್ಧನಮೂರ್ತಿ ಖುಲಾಸೆ

ಕೊಂದ ಪಾಪಕ್ಕೆ ಕೊಟ್ಟಷ್ಟೆ ಪ್ರಾಯಶ್ಚಿತ್ತ!

ಅಂಥಾ ಸುಪ್ರೀಂಕೋರ್ಟಿನಲ್ಲೇ ಜಾಮೀನು ಗಿಟ್ಟದೆ ತಲೆತಲೆ ಚಚ್ಚಿಕೊಂಡಿದ್ದ ಗೋವರ್ಧನ ಮೂರ್ತಿಗೆ ಅನುಮಾನದ ಅದೃಷ್ಟ ಒಲಿದಿದೆ!

ಲೋಕದ ನ್ಯಾಯವೇ ಬೇರೆ ಕೋರ್ಟಿನ ರೀತಿ ರಿವಾಜುಗಳೇ ಬೇರೆ. ತನ್ನ ಪರಮಾಪ್ತ ವಿನೋದ್‌ನನ್ನು ಕುಡಿದು ವಿಕೃತಿಗೆ ಬಿದ್ದು ಗುಂಡಿಟ್ಟು ಕೊಂದಿದ್ದ ಗೋವರ್ಧನ ಮೂರ್ತಿ ಯಾವುದೇ ಕಾರಣಕ್ಕೂ ಅದರಿಂದ ಬಚಾವಾಗಲಾರ ಎಂದೇ ಪ್ರತಿಯೊಬ್ಬರೂ ಲೆಕ್ಕ ಹಾಕಿದ್ದರು. ದೇಶದ ಹೆಸರಾಂತ ವಕೀಲ ರಾಮ್ ಜೇಠ್ಮಲಾನಿಯವರನ್ನೇ ನೇಮಿಸಿಕೊಂಡು ಸುಪ್ರೀಂಕೋರ್ಟಿನಿಂದ ಜಾಮೀನು ಗಿಟ್ಟಿಸಲು ಹೋಗಿ ದುಡ್ಡೂ ಕೈಬಿಟ್ಟು ಜಾಮೀನು ದೊರಕದೆ ಹೈರಾಣಾಗಿದ್ದ ಗೋವರ್ಧನ ಮೂರ್ತಿ ಜೈಲಲ್ಲಿ ಹೆಚ್ಚೂಕಮ್ಮಿ ಹುಚ್ಚನಂತೆಯೇ ಪರಿತಪಿಸುತ್ತಿದ್ದ. ಮುರಿದುಬಿದ್ದ ಮದುವೆ, ಜೈಲಲ್ಲಿ ರೌಡಿಗಳ ಸುಲಿಗೆ, ಕೈತಪ್ಪಿದ ಕೋಟಿಗಟ್ಟಲೇ ರೊಕ್ಕ ಮತ್ತು ಮುಳುಗಿಹೋದ ರಿಯಲ್ ಎಸ್ಟೇಟ್ ಸಾಮ್ರಾಜ್ಯ. ಮುಗ್ಧ ವಿನೋದ್‌ನನ್ನು ಕಪಿಚೇಷ್ಟೆಗೆ ಬಿದ್ದು ಕೊಂದು ಹಾಕಿದ್ದರ ಪಾಪ ಮತ್ತು ಪ್ರಾಯಶ್ಚಿತ್ತ ಎರಡಕ್ಕೂ ತಲೆಕೊಟ್ಟ ಗೋವರ್ಧನಮೂರ್ತಿಗೆ ಕೊನೆಗೂ benefit of doubt ಅಂದರೆ ಅನುಮಾನದ ಲಾಭವೇ ಕೈಹಿಡಿಯಿತು.

2008 ರ ಅಕ್ಟೋಬರ್ 7 ರ ರಾತ್ರಿ ಬಾಗಲೂರಿನ ತನ್ನ ಎಲ್.ಜಿ. ರೋಸ್ ಹೆರಿಟೇಜ್ ಅಪಾರ್ಟ್‌ಮೆಂಟಿನಲ್ಲಿ ನಟ ವಿನೋದ್‌ನನ್ನು ಗುಂಡಿಟ್ಟು ಕೊಂದಾಗ ಜೊತೆಗಿದ್ದವನು ಚಿತ್ರ ನಿರ್ಮಾಪಕ ಶಂಕರ್ ರೆಡ್ಡಿ. ಆತನೇ ಈ ಪ್ರಕರಣದ ಪ್ರತ್ಯಕ್ಷ ಸಾಕ್ಷಿ. "ಗೆಳೆಯ ವಿನೋದ್‌ನನ್ನು ಕೊಂದದ್ದಕ್ಕೆ ಆತನಿಗೆ ಜೀವಾವಧಿ ಶಿಕ್ಷೆ ಕೊಡಿಸದೇ ಹೋದ್ರೆ ನಮ್ಮಪ್ಪನಿಗೇ ನಾನು ಹುಟ್ಟಿಲ್ಲ....!' ಎಂದು ವೀರಾವೇಶದಲ್ಲೇ ಶಂಕರ್ ರೆಡ್ಡಿ ಶಪಥಗೈದಿದ್ದ. ಕೊಲೆಯಾದ ವಿನೋದ್‌ನ ತಾಯಿಗೆ ನಾನು ಬೇರೆ ಅಲ್ಲ ವಿನೋದ್ ಬೇರೆ ಅಲ್ಲ ಎಂದೇ ಮಾತುಕೊಟ್ಟಿದ್ದ.




ಆದರೆ ಕೊಟ್ಟ ಮಾತು ದಿನಕಳೆದಂತೆ ಬಾಳಿಕೆ ಬರಲೇ ಇಲ್ಲ. ಎಷ್ಟೆಂದರೂ ಶಂಕರ್ ರೆಡ್ಡಿ ರಿಯಲ್ ಎಸ್ಟೇಟ್ ಕುಳ. ಜೊತೆಗೆ ಸಿನಿಮಾ ಶೋಕಿ ಬೇರೆ. ಮೊದಲೇ ಗೋವರ್ಧನ ಮೂರ್ತಿಯ ಜೊತೆ ರಿಯಲ್ ಎಸ್ಟೇಟ್ ಪಾಲು ದಾರಿಕೆಯಿತ್ತು. ಇದ್ದ ಆಸ್ತಿ ಮಾರಬೇಕೆಂದರೆ, ಲಾಭ ಮಾಡಬೇಕೆಂದರೆ ಜೈಲುಪಾಲಾದ ಗೋವರ್ಧನನ ಸಹಿ ಮತ್ತು ಸಹಕಾರ ಬೇಕೇಬೇಕು. ಇದಲ್ಲದೆ ರಾಧಿಕಾ ಪಂಡಿತ್‌ಳನ್ನು ಹಾಕಿಕೊಂಡು 'ಅದ್ದೂರಿ' ಎಂಬ ಚಿತ್ರವನ್ನು ಅದ್ದೂರಿಯಾಗೇ ನಿರ್ಮಿಸುವುದಕ್ಕೂ ಕಾಸುಬೇಕು. ಈ ಹಂತದಲ್ಲೇ ಕೊಲೆಯಾದ ವಿನೋದ್‌ನ ತಾಯಿಗೆ ಕೊಟ್ಟ ಮಾತನ್ನು ಶಂಕರ್ ರೆಡ್ಡಿ ಕೈಬಿಟ್ಟ. ಪರಿಣಾಮ ಗೋವರ್ಧನ ಮೂರ್ತಿಯ ಖುಲಾಸೆ!

ಶಂಕರ್ ರೆಡ್ಡಿ ಸೇರಿದಂತೆ ವಿನೋದ್ ಕೊಲೆ ಕೇಸಿನ ಬಹುತೇಕ ಸಾಕ್ಷಿಗಳೇ ಉಲ್ಟಾ ಹೊಡೆದರು. ಅದಕ್ಕೆ ತಕ್ಕಂತೆ ವಕೀಲ ಹನುಮಂತರಾಯ ತಮ್ಮ ಕೈಚಳಕ ಮೆರೆದರು. ಕೊಲೆಯಾದಾಗ ವಿನೋದ್ ಧರಿಸಿದ್ದ ಅಂಗಿಯ ಮೇಲಿನ ರಕ್ತದ ಕಲೆಗೂ ಆತನ ರಕ್ತದ ಗುಂಪಿಗೂ ಹೋಲಿಕೆಯೇ ಇರಲಿಲ್ಲ, ಪೊಲೀಸರು ಮಾಡಿದ ಸ್ಥಳ ಮಹಜರಿನ ಫಲವಾಗಿ ಕೊಲೆಗೆ ಬಳಸಿದ ರಿವಾಲ್ವರ್ ಗುಂಡುಗಳ ಸಂಖ್ಯೆಗೂ ಫೈರ್ ಆದ ಗುಂಡುಗಳಿಗೂ ತಾಳೆಯೇ ಇರಲಿಲ್ಲ. ಸಾಯುವ ಮುನ್ನ ವಿನೋದ್ ನೀಡಿದ ಹೇಳಿಕೆಗೆ ಅದನ್ನು ಪಡೆದ ಡಾಕ್ಟರ್‌ನ ಹಿನ್ನೆಲೆಯೇ ದೊಡ್ಡ ತಡೆಯಾಗಿ ಪರಿಣಮಿಸಿತು. ಏಕೆಂದರೆ ಯಾವ ಡಾಕ್ಟರ್ ವಿನೋದ್‌ನ ಹೇಳಿಕೆ ಪಡೆದಿದ್ದನೋ ಆತನ ಮಗಳನ್ನೇ ವಿನೋದ್ ಮದುವೆಯಾಗಬೇಕಿತ್ತು. ವಿನೋದ್‌ಗೆ ಗುಂಡೇಟು ಬಿದ್ದ ಸಮಯಕ್ಕೂ ಆತನನ್ನು ಮಣಿಪಾಲ ಆಸ್ಪತ್ರೆಗೆ ತಂದ ಸಮಯಕ್ಕೂ ಸಾಂದರ್ಭಿಕ ವಿರೋಧಾಭಾಸವಿತ್ತು. ಎಲ್ಲಕ್ಕೂ ಮಿಗಿಲಾಗಿ ಆಗ ಪೊಲೀಸ್ ಕಮೀಷನರ್ ಆಗಿದ್ದ ಶಂಕರ್ ಬಿದರಿ ದುಡುಕಿಗೆ ಬಿದ್ದು ಜಪ್ತಾದ ರಿವಾಲ್ವರನ್ನೇ ಪತ್ರಿಕಾ ಗೋಷ್ಠಿಯಲ್ಲಿ ಪ್ರದರ್ಶಿಸಿದ್ದು ಕೋರ್ಟಿನ ಲೆಕ್ಕಕ್ಕೆ ಗಂಭೀರ ಪ್ರಮಾದವಾಗಿತ್ತು.

ಇದೆಲ್ಲದರ ಲಾಭವಾಗಿದ್ದು ಹಂತಕ ಗೋವರ್ಧನನಿಗೆ. ಸುಪ್ರೀಂಕೋರ್ಟಿನ ಖರ್ಚು, ಸಾಕ್ಷಿಗಳ ತಿರುಗೇಟಿಗೆ ಶುಲ್ಕ(!) ಪೊಲೀಸರ ಯಡವಟ್ಟು, ದಂಡ, ಸಾಕ್ಷ್ಯಾಧಾರಗಳ ಸಂಭಾಳಿಸುವುದಕ್ಕೂ ಕಂದಾಯ, ಇತ್ಯಾದಿ ಗೋವರ್ಧನ್ ರಿಯಲ್ ಎಸ್ಟೇಟಿನಲ್ಲಿ ದುಡಿದ ದುಡ್ಡೆಲ್ಲ ಆತನ ಜೈಲುವಾಸದಲ್ಲೇ ಕಳೆದುಹೋಗಿತ್ತು. ನಾಲ್ಕು ವರ್ಷ ವೇಸ್ಟು. ಗಳಿಸಿದ ಆಸ್ತಿಯೂ ಲಾಸು. ಗೆಳೆಯನ ಪ್ರಾಣ ಹೋಯ್ತು. ಕೊನೆಗೂ ಉಳಿದದ್ದು ಕೊಲೆಗಾರನೆಂಬ ಹಣೆಪಟ್ಟಿಯೊಂದೇ.

ಸತ್ತವರ್ಯಾರೋ ಲಾಭ ಯಾರಿಗೋ? ಸಾಕ್ಷಿದಾರ ಶಂಕರ್ ರೆಡ್ಡಿಯ 'ಅದ್ದೂರಿ' ತೆರೆಕಂಡು ಕೋಟಿಗಟ್ಟಲೇ ಬಾಚಿದ್ದಕ್ಕೂ ಇತ್ತ ವಿನೋದ್‌ನ ಕೊಲೆ ಕೇಸಿನ ಒಟ್ಟೊಟ್ಟಿಗೇ ಸಾಕ್ಷಿಗಳು ಕೈಕೊಡುವುದಕ್ಕೂ ವಿಚಿತ್ರ ವಿಪರ್ಯಾಸವಿತ್ತು. ಕೊನೆಗೂ ಗೋವರ್ಧನ ಖುಲಾಸೆಯಾಗಿದ್ದಾನೆ ನಿಜ. ಹಾಗಂತ ಕೊಂದ ಪಾಪ ಕಳೆಯಬೇಕಲ್ಲ. ಎಷ್ಟೆಂದರೂ ನೈಸರ್ಗಿಕ ನ್ಯಾಯವೇ ಬೇರೆ, ಕೋರ್ಟಿನ ಭಾಷೆಯೇ ಬೇರೆ.



ಮಸಲತ್ತುಗಾರ ಮೋದಿಯೂ ಅಭಿವೃದ್ಧಿ ಮುಖವಾಡದ ಹಿಂದೂತ್ವವೂ!

ಗುಜರಾತಿನಲ್ಲಿ ಮನುಷ್ಯ ಭಕ್ಷಕ ಮೋದಿ ಮತ್ತೆ ಅಧಿಕಾರಕ್ಕೇರುತ್ತಾನೆಂದು ಎಲ್ಲರಿಗೂ ಗೊತ್ತಿತ್ತು. ಇದಕ್ಕೆ ಕಾರಣ ಇಷ್ಟೇ; ಮೋದಿ ಜೋರಾಗಿ ಬಾರಿಸುತ್ತಿದ್ದ ಹುಸಿ ಅಭಿವೃದ್ಧಿಯ ನಗಾರಿ ಹೊರಹೊಮ್ಮಿಸುತ್ತಿದ್ದ ಹಿಂದೂತ್ವದ ಪರಿಭಾಷೆ ಮತ್ತು ಗುಜರಾತಿ ಅಸ್ಮಿತೆಯ ಭಾವೋನ್ಮಾದ! ಇದು ಅಲ್ಪಸಂಖ್ಯಾತರನ್ನು ಯಾಮಾರಿಸಿದರೆ, ಬಹುಸಂಖ್ಯಾತ ಹಿಂದೂಗಳಲ್ಲಿ ಮತಾಂಧತೆಯ ಹುಚ್ಚೆಬ್ಬಿಸಿತ್ತು. ಹಾಗಾಗಿ ಮೋಸಗಾರ ಮೋದಿ ಮತ್ತೊಮ್ಮೆ ಗುಜರಾತಕ್ಕೆ 'ಗುಮ್ಮ'ನಾಗುವ ದುರಂತ ಸಂಭವಿಸಿಹೋಯ್ತು!

ಹಾಗೆ ನೋಡಿದರೆ ಮೋದಿಯದು ಕಳಪೆ ಗೆಲುವು. ಗುಜರಾತಿನ ಚುನಾವಣಾ ಫಲಿತಾಂಶ ಎತ್ತಿಂದೆತ್ತ ವಿಶ್ಲೇಷಿಸಿದರೂ ಮೋದಿಯ ರಕ್ಕಸ ಆರ್ಭಟಕ್ಕೆ ಸರಿದೂಗದ ಸಾಧಾರಣ ಸಾಧನೆಯಿದು. ಮೋದಿ ಚುನಾವಣೆ ಹೊತ್ತಲ್ಲಿ ಹಿಂದೆಂದಿಗಿಂತಲೂ ಹೆಚ್ಚು ಬಿಜೆಪಿ ಶಾಸಕರನ್ನು ಗೆಲ್ಲಿಸುವ ಭ್ರಮೆ ಮೂಡಿಸಿದ್ದನು. ಆದರೆ ಆತ ತಾನೇ ಕಟ್ಟಿ ನಿಲ್ಲಿಸಿದ ಉತ್ಪ್ರೇಕ್ಷೆಯ ಸ್ಥಾನ ಗೆಲ್ಲಲು ಸಾಧ್ಯವಾಗದೇ ಎಡವಿದ್ದನು. 2007 ಚುನಾವಣೆಗಿಂತಲೂ ಎರಡು ಸ್ಥಾನ ಕಡಿಮೆ ಮೋದಿ ಕಂಪನಿಗೆ ಸಿಕ್ಕಿದೆ. ಗೋದ್ರೋತ್ತರ ಕೋಮು ದಂಗೆಗಳ ನಂತರದ ಮತಾಂಧ ಧ್ರುವೀಕರಣದ ಬಿಸಿಯಲ್ಲಿ ಜರುಗಿದ್ದ 2002 ರ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಮೋದಿ ಮಾಮಾ 127 ಸೀಟು ಗೆದ್ದಿದ್ದ. ಕಳೆದ ಬಾರಿ 117 ಸ್ಥಾನದಲ್ಲಿ ವಿಜಯ ಸಾಧಿಸಿದ್ದ ಮೋದಿಯ ಬಿಜೆಪಿಗೆ ಈ ಸಲ ಒಟ್ಟು 182 ಸೀಟುಗಳಲ್ಲಿ ಬರೀ 115 ರಲ್ಲಿ ಮಾತ್ರ ಗೆಲ್ಲಲು ಸಾಧ್ಯವಾಗಿದೆ. ಅಂದರೆ ಇದು ಮೋದಿಯ ಅಧಃಪತನ; ಹೀನಾಯ ಗೆಲುವು.

ಮೋದಿಯ ಸುಳ್ಳುಗಾರಿಕೆ, ಜನರನ್ನು ದಿಕ್ಕು ತಪ್ಪಿಸುವ ವಂಚನೆ ಎದುರು ಮಂಕಾಗಿದ್ದ ಕಾಂಗ್ರೆಸ್‌ನ ಮುಂದೆ ಬಡಿವಾರದ ಮೋದಿ ಮಿಂಚಿದ್ದಾನೆಯೇ ವಿನಃ ಜನಪರ ಕೆಲಸ-ಕಾಮಗಾರಿಯಿಂದೇನೂ ಆತ ಮತ್ತೆಮತ್ತೆ ಅಧಿಕಾರ ವಶಪಡಿಸಿಕೊಳ್ಳುತ್ತಿಲ್ಲ. ಮೊದಲಿಂದಲೂ ಗುಜರಾತ್ ಬಿಜೆಪಿ ಹಿಡಿತದಲ್ಲೇ ಇದ್ದ ರಾಜ್ಯ. ಕೇಶುಭಾಯಿ ಪಟೇಲರಂಥವರೇ ಮೋದಿಗಿಂತ ಮುಂಚೆ ಸತತ ಎರಡು ಬಾರಿ ಬಿಜೆಪಿಯನ್ನು ಗೆಲ್ಲಿಸಿದ್ದರು. ಮೋದಿಯ 'ಮಹಾ ಸಾಧನೆ'ಗಳಿಂದಾಗಿಯೇ ಗುಜರಾತಲ್ಲಿ ಬಿಜೆಪಿ ದಿಗ್ವಿಜಯ ಸಾಧಿಸುತ್ತಿದೆ ಎಂಬುದೆಲ್ಲ ಬರೀ ಬೋಗಸ್! ಮುಂದಿನ ಲೋಕಸಭಾ ಎಲೆಕ್ಷನ್‌ನಲ್ಲಿ ಮೋದಿ ಬಿಜೆಪಿಯ ಪ್ರಧಾನಿ ಅಭ್ಯರ್ಥಿ ಆಗಲಿದ್ದಾನೆಂಬ ಪ್ರತೀತಿಯೂ ಈ ಬಾರಿ ಆತನ ನೆರವಿಗೆ ಬಂದಿಲ್ಲ. ಆ ಉದ್ಘೋಷಕ್ಕೆ ಜನ ಮರುಳಾಗಿದ್ದರೆ ಬಿಜೆಪಿಗೆ ಕನಿಷ್ಠ 125 ಸ್ಥಾನವಾದರೂ ಬರುತ್ತಿತ್ತು.

ಮೋದಿಯ ದುರಹಂಕಾರ ಸಹಿಸಲಾಗದೆ ಬಂಡೆದ್ದಿದ್ದ ಮಾಜಿ ಸಿಎಂ ಕೇಶುಭಾಯಿಯ ಪಟೇಲ್ ಸಮುದಾಯ ಹೆಚ್ಚಿರುವ ಸೌರಾಷ್ಟ್ರ ಪ್ರದೇಶದಲ್ಲೂ ಮೋದಿಗೆ



ಹಾನಿಯಾಗಿಲ್ಲ. ಆದರೆ ಪಟೇಲರ ಬೆಂಬಲ ಬಂದರೂ ಆತನ ಸ್ಥಾನ ಬಲ ಏರಿಲ್ಲ. ಇದು ಮೋದಿ ವರ್ಚಸ್ಸು ಮುಕ್ಕಾಗಿರುವುದನ್ನು ನಿಸ್ಸಂಶಯವಾಗಿ ಸಾಬೀತುಪಡಿಸುವಂತಿದೆ! ಗುಜರಾತ್ ಚುನಾವಣೆಯಲ್ಲಿ ಬಿಜೆಪಿ ಎಂಬ ಪಾರ್ಟಿ ಸ್ಪರ್ಧೆಯಲ್ಲಿ ಇರಲೇ ಇಲ್ಲ. ಅದರ ರಾಷ್ಟ್ರೀಯ ನಾಯಕರಿಗೂ ಈ ಎಲೆಕ್ಷನ್ ಯುದ್ಧ ಭೂಮಿಯಲ್ಲಿ ಕಿಮ್ಮತ್ತು ಇರಲಿಲ್ಲ. ಇದ್ದಿದ್ದು ಕೇವಲ ಮೋದಿಯ ಸಾರ್ವಭೌಮತ್ವದ ವರ್ಚಸ್ಸು ಮಾತ್ರ. ಮೋದಿಯ ಈ ಬಿಜೆಪಿ- ಆರೆಸೆಸ್‌ನ ದೊಡ್ಡವರಿಗೆಲ್ಲ ಸೆಡ್ಡು ಹೊಡೆಯುತ್ತ ಬಂದಿದ್ದ ಮೋದಿ ಹಾರಾಟಕ್ಕೆ ಬ್ರೇಕ್ ಹಾಕಿದೆ ಗುಜರಾತ್ ಚುನಾವಣಾ ಫಲಿತಾಂಶ. ದೆಹಲಿ ಬಾಗಿಲು ತನಗಾಗಿ ಪಕ್ಷದ ವರಿಷ್ಠರು ತೆರೆಯದಿದ್ದರೆ ಮುರಿದು ಒಳಗೆ ನುಗ್ಗುತ್ತೇನೆಂದು ಅಬ್ಬರಿಸುತ್ತಿದ್ದ ಮೋದಿಗೆ ಈಗ ಅಂಥ ಸೊಕ್ಕಿನ ಧ್ವನಿ ಎಬ್ಬಿಸುವುದು ಸಾಧ್ಯವಾಗದು. ಆರೆಸೆಸ್-ಬಿಜೆಪಿಯ ಒಂದು ಪ್ರಬಲ ವರ್ಗಕ್ಕೆ ಮೋದಿಯ ಪ್ರಚಂಡ ವಿಜಯ ಬೇಡವಾಗಿತ್ತು. ಸಾಮಾನ್ಯ ಗೆಲುವಿನೊಂದಿಗೆ ಆತ 'ಈಗೋ'ಕ್ಕೆ ಗುಜರಾತಿಗಳು ದೊಡ್ಡ ಹೊಡೆತವನ್ನೇ ಕೊಟ್ಟಿದ್ದಾರೆ. ಹೀಗಿರುವಾಗ ಬಿಜೆಪಿಯೊಳಗಿನ ಮೋದಿಯ ಹಿತಶತ್ರುಗಳು ಆತನನ್ನು ಪ್ರಧಾನಿಗಿರಿ ಕ್ಯಾಂಡಿಡೇಟ್ ಎಂದು ಒಪ್ಪಿಕೊಳ್ಳುವುದುಂಟಾ?

ಪ್ರಧಾನಿಗಿರಿಯ ಹಗಲುಕನಸು

ಮೋದಿಗೆ ಸಿಕ್ಕಿರುವ ಜನಾದೇಶ ಆತನ ಸಂಘಪರಿವಾರ-ಬಿಜೆಪಿ ಬಳಗದಲ್ಲೇ 'ಪ್ರಶ್ನಾತೀತ'ಗೊಳಿಸುವಷ್ಟು ಪ್ರಚಂಡವೇನಲ್ಲ. ತಾನೊಬ್ಬ ಸರ್ವಶಕ್ತ ಪ್ರಧಾನಿ ಅಭ್ಯರ್ಥಿಯೆಂದು ಗುಜರಾತಿಗೇ ಸೀಮಿತವಾಗಿರಲಿ ಎಂಬ ಆ ಗ್ಯಾಂಗಿನ ಒಳ ಆಸೆ ಈಡೇರಿದೆ.

ಮೋದಿಯನ್ನು ಪಿಎಂ ಕ್ಯಾಂಡಿಡೇಟೆಂದು ಬಿಂಬಿಸುತ್ತಿರುವುದೇ ವಿಪರ್ಯಾಸ! ಇದು ಅರ್ಥವಿಲ್ಲದ-ಅಸಾಧ್ಯವಾದ ವಿಚಾ[...] ಮಾತುಗಾರಿಕೆ. ಮೋದಿಯನ್ನು ಎಲ್ಲ ಜನ[...] ಸಮುದಾಯವಿರಲಿ, ಎನ್‌ಡಿಎದ ಮಿತ್ರ ಪಕ್ಷಗಳಿರಲಿ ಬಿಜೆಪಿಯೊಳಗಿನ ಭೂಪರೇ ಒಪ್ಪಲಾರದ ಪಿಎಂ ಅಭ್ಯರ್ಥಿತನ! ಎನ್‌ಡಿಎದ ಪ್ರಬಲ ಪಾಲುದಾರ ಪಕ್ಷಗಳಾದ ನಿತೀಶ್‌ಕುಮಾರ್‌ರ ಜೆಡಿಯು, ಬಿಜು ಪಟ್ನಾಯಕ್‌ರ ಬಿಜೆಡಿಗಳು ಈಗಲೇ ಮತಾಂಧ ಮೋದಿ ಪ್ರಧಾನಿ ಆಗುವುದು ಊಹಿಸಲಿಕ್ಕೂ ಸಾಧ್ಯವಿಲ್ಲ ಎಂಬಂತೆ ಬಾಯ್ಬಾಯಿ ಬಡಿದುಕೊಳ್ಳುತ್ತಿವೆ. ಅಲ್ಪಸಂಖ್ಯಾತರು ದೊಡ್ಡ ಮಟ್ಟದಲ್ಲಿ ಧ್ರುವೀಕರಣಗೊಂಡು ಕಾಂಗ್ರೆಸ್‌ನತ್ತ ವಾಲುವ ಅವಕಾಶ ಮೋದಿ ಪಿಎಂ ಉಮೇದುವಾರಿಕೆ ಯಿಂದ ಹೆಚ್ಚಾಗುತ್ತದೆಂಬ ಆತಂಕ ಚೆಡ್ಡಿ ಬಿಡಾರದಲ್ಲಿದೆ. ನಾಳೆ ದಿಲ್ಲಿಯಲ್ಲಿ ಮೋದಿ ವಿರಾಜಮಾನನಾದರೆ ಗುಜರಾತಲ್ಲಿ ಮಾಡಿದಂತೆ ತಮ್ಮನ್ನು ಕೇರ್ ಮಾಡದೆ ಏಕಚಕ್ರಾಧಿಪತಿ ಆಗುತ್ತಾನೆಂಬ ಭಾವನೆ ಚೆಡ್ಡಿ ವಲಯದಲ್ಲಿದೆ. ಹೀಗಿರುವಾಗ ಬಿಜೆಪಿ ರಾಷ್ಟ್ರಾಧ್ಯಕ್ಷತೆಯಿಂದ ಪ್ರಧಾನಿಗಾದಿ ತನಕದ ಹಾದಿ ಮೋದಿ ಮಹಾತ್ಮನಿಗೆ ಸುಲಭವಂತೂ ಅಲ್ಲ! ಮೋದಿ ಪಿಎಂ ಕ್ಯಾಂಡಿಡೇಟ್ ಎಂಬುದೇ ದೊಡ್ಡ ಜೋಕ್, ಅಷ್ಟೇ!

ವಿಕಾರ ಪುರುಷ

ಬಣ್ಣ ಬದಲಿಸುವುದರಲ್ಲಿ ನಿಸ್ಸೀಮನಾದ ಮೋದಿಯನ್ನು ಕೆಲವು ಮಾಧ್ಯಮಗಳು ಅಭಿವೃದ್ಧಿಯ ಹರಿಕಾರ-ವಿಕಾಸ ಪುರುಷ ಎಂದು ಬಣ್ಣಿಸುತ್ತ ಭೋಂಗು ಬಿಡುತ್ತಿವೆ. ಇಡೀ ದೇಶಕ್ಕೆ ಗೊತ್ತಿರುವಂತೆ ಆತ ವಿಕಾರ ಯೋಚನಾ ಲಹರಿಯ ಹಿಂದೂವಾದಿ; ರಕ್ತ ಪಿಪಾಸು ಪುಢಾರಿ; ಅಭಿವೃದ್ಧಿಯ ಹುಸಿ ಮಂತ್ರ ಪಠಿಸುತ್ತಲೇ ಮತಾಂಧತೆ ಉದ್ದೀಪಿಸುವ ಭಯೋತ್ಪಾದಕ! ಇಂಥವನಿಂದ ಅದೆಂಥ ಜನಪರ ಅಭಿವೃದ್ಧಿ ರಾಜಕಾರಣ ಮಾಡಲು ಸಾಧ್ಯ? ಆದರೂ ಮೋದಿ ವಿಜಯಕ್ಕೆ ಅಭಿವೃದ್ಧಿಯ ಬೀಜಮಂತ್ರವೇ ಕಾರಣ ಎಂಬುದೀಗ ಸಾಮಾನ್ಯ ಪರಿಜ್ಞಾನವಾಗಿದೆ. ವಾಸ್ತವವೇ ಬೇರೆ.

ಈ ಬಾರಿ ವಂಚಕ ಮೋದಿ ಅಭಿವೃದ್ಧಿ ಮತ್ತು ಗುಜರಾತ್ ಸ್ವಾಭಿಮಾನದ ಭಾವನಾತ್ಮಕತೆ ನಡುವೆ ಹಿಂದೂತ್ವವನ್ನು ಅಡಗಿಸಿಟ್ಟು ಚುನಾವಣಾ ಸೂತ್ರ ಹೆಣೆದಿದ್ದ. ಆರೆಸೆಸ್- ಬಿಜೆಪಿ ಭೂಪರು ಮೋದಿಯ ಈ ಛದ್ಮವೇಷದ ಹಿಂದೂತ್ವದಿಂದ ಲಾಭವಾದೀತೆಂದು ಅದರ ಬಳಕೆಗೆ ಭರಪೂರ ಅವಕಾಶ ಕೊಟ್ಟಿದ್ದರು. ಈ ಪ್ರಯೋಗದಿಂದ ಸಂಘಪರಿವಾರಕ್ಕೆ ಮತ್ತು ಮೋದಿ ಬಳಗಕ್ಕೆರಡಕ್ಕೂ ಪ್ರಯೋಜನವಾಯ್ತು! ಚುನಾವಣೆ ಪ್ರಚಾರದಲ್ಲಿ ಗೋದ್ರಾ ರೈಲು ಪ್ರಕರಣವಾಗಲೀ, ಸಬರಮತಿ ಎಕ್ಸ್‌ಪ್ರೆಸ್ ನರಮೇಧವಾಗಲಿ ಪ್ರಸ್ತಾಪ ಆಗದಂತೆ ಮೋದಿ ಪರಿವಾರ ಎಚ್ಚರ ವಹಿಸಿತ್ತು. ಮೋದಿ ಹಿಂದೂತ್ವಕ್ಕೆ ಜೋತು ಬಿದ್ದಿಲ್ಲವೆಂದು ತೋರಿಸುವ ನಾಟಕವಿದು. ಹಿಂದೂತ್ವವನ್ನು ಮತ್ತೆ ಚುನಾವಣೆಗೆ ತಂದರೆ ಹಿಂದೂಗಳೇ ಹೇಸಿಗೆ ಪಟ್ಟು ತಿರುಗಿಬಿದ್ದಾರೆಂದು ಆತಂಕ ಮೋದಿಗಿತ್ತು.

ಹಾಗಂತ ಮೋದಿ ಮತ್ತು ಬಿಜೆಪಿ ಹಿಂದೂತ್ವ ಬಿಟ್ಟು ಬದುಕುವುದಕ್ಕಾದರೂ ಸಾಧ್ಯವಾ? ಅಭಿವೃದ್ಧಿಯ ಹರಿಕಾರನಂತೆ ಬಿಂಬಿಸಲ್ಪಟ್ಟಿದ್ದ ಮೋದಿಯ ಅಂತರ್ಯದಲ್ಲಿ ಹಿಂದೂ ಸೈತಾನ ಅಡಗಿಕೊಂಡು ಕುಳಿತಿದ್ದ! ಆ ಹಿಂದೂತ್ವ ತೊರೆದರೆ ಮೋದಿಗೆಲ್ಲಿದೆ ಅಸ್ತಿತ್ವ? ಎಲ್ಲ ಆರ್ಥಿಕ-ಸಾಮಾಜಿಕ ವಲಯಕ್ಕೆ ಸೇರಿದ ಜನರನ್ನು ಒಟ್ಟಿಗೆ ಕೊಂಡೊಯ್ಯುವವನೇ ನಿಜವಾದ ಜನನಾಯಕ. ಈ ಗುಣಲಕ್ಷಣ ಇಲ್ಲದ ಮೋದಿ ಈ ಸಲ ಹುಸಿ ಅಭಿವೃದ್ಧಿಗೆ ನೇತು ಬಿದ್ದು ಜನರನ್ನು ಯಶಸ್ವಿಯಾಗಿ ಗೊಂದಲಗೊಳಿಸಿ ಗೆದ್ದುಬಂದ. ಮತಾಂಧತೆ ಬಿಟ್ಟಿರುವ ಮೋದಿ ರಾಜ್ಯದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಒಂದೇ ಒಂದು ಕೋಮುಗಲಭೆ ಆಗಿಲ್ಲವೆಂದು ಆತನ ಅಭಿಮಾನಿಗಳು ಹೇಳುತ್ತಾರೆ. ಹಾಗಂತ ಮೋದಿ ಅಥವಾ ಆತನ ಮತಾಂಧ ಪರಿವಾರದ ಅನ್ಯಧರ್ಮೀಯರನ್ನು ಕೆರಳಿಸುವ-ಮೂದಲಿಸುವ ಕಿತಾಪತಿಯೇನೂ ನಿಂತಿಲ್ಲ. ಕಂಗಾಲಾಗಿರುವ ಮುಸ್ಲಿಮರು ಸ್ವಾಭಿಮಾನವನ್ನು ತೋರಿಸದೆ ಜೀವ ಭಯ ದಿಂದ ತೆಪ್ಪಗಿದ್ದಾರೆ. ಹಾಗಾಗಿ ಒಳಗೊಳಗೆ ಕುದಿಯುತ್ತಿರುವ ಗುಜರಾತ್ ಹೊರಗೆ ಮಾತ್ರ ತಣ್ಣಗೆ ಕಾಣಿಸುತ್ತಿದೆ.

ಚುನಾವಣಾ ಪ್ರಚಾರದ ಆರಂಭದ ದಿನಗಳಲ್ಲಿ ಮೋದಿ 'ಸದ್ಭಾವನಾ ಯಾತ್ರೆ' ಶೋ ನಡೆಸಿದ್ದ. ಇದೊಂದು ಧರ್ಮ[...]

ಮೋದಿ ಆಗಮನಕ್ಕೂ ಮುನ್ನ ಗುಜರಾತ್ ಜಾತ್ಯತೀತವಾಗಿರಲಿಲ್ಲ

ನರಹಂತಕ ನರೇಂದ್ರ ಮೋದಿ ಮೂರನೆ ಬಾರಿಗೆ ಚುನಾವಣೆಯಲ್ಲಿ ಜಯ ಸಾಧಿಸಿದ್ದಾನಲ್ಲದೆ ಆತ ನಾಲ್ಕನೆ ಬಾರಿಗೆ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾನೆ. ಹಲವರ ಪ್ರಕಾರ ಮೋದಿಯ ಗೆಲುವು ಪ್ರಜಾಸತ್ತಾತ್ಮಕವಾಗಿ ನಡೆದಿರುವುದರಿಂದ ನಮ್ಮಂತಹ ಸ್ಯೂಡೋ ಸೆಕ್ಯೂಲರ್‌ವಾದಿಗಳು ಬಾಯಿ ಮುಚ್ಚಿಕೊಂಡಿರಬೇಕು. ಆದರೆ ಪ್ರಜಾತಂತ್ರ ವ್ಯವಸ್ಥೆಯಲ್ಲೇ ಹಿಟ್ಲರ್ ಎಂಬ ಕೊಲೆಗಡುಕನೂ ಮೊದಲು ಜನಮನ್ನಣೆ ಪಡೆದಿದ್ದ ಎಂದು ಮೋದಿ ಬೆಂಬಲಿಗರನ್ನು ಎಚ್ಚರಿಸುವ ಅಗತ್ಯವಿದೆ.


ಮೋದಿ ಎಂಬ ನರಹಂತಕನ ನೇತೃತ್ವದಲ್ಲಿ ಸುಮಾರು ಮೂರು ಸಾವಿರ ಅಮಾಯಕ ಜನರು ಕೊಲೆಯಾಗಿದ್ದರೂ, ಆತನ ಸಚಿವಸಂಪುಟದಲ್ಲಿ ಪ್ರಮುಖಳಾಗಿದ್ದ ಮಾಯಾ ಕೊಡ್ನಾನಿ ಎಂಬಾಕೆ ಆ ಕೊಲೆಗಳಲ್ಲಿ ಭಾಗಿಯಾಗಿದ್ದಳು ಎಂಬ ಕಾರಣಕ್ಕೆ ಆಕೆಗೆ ಗುಜರಾತ್ ನ್ಯಾಯಾಲಯ ಜೀವಾವಧಿ ಶಿಕ್ಷೆಯನ್ನು ನೀಡಿದ್ದರೂ ಗುಜರಾತಿನ ಜನ ಯಾಕೆ ಆತನನ್ನು ಮತ್ತೆ ಆಯ್ಕೆ ಮಾಡಿದ್ದಾರೆ? ಅವರಿಗೆ ಮೋದಿ ಮಾಡಿರುವ ಕೊಲೆಗಳ ಬಗ್ಗೆ ಗೊತ್ತಿಲ್ಲವೆ? ಅವರಿಗೆ ಜಾತ್ಯತೀತತೆಯ ಮೌಲ್ಯಗಳು ಗೊತ್ತಿಲ್ಲವೇ? ಅವರೆಲ್ಲ ಕೋಮುವಾದಿಗಳೇ? ಇಂತಹ ಪ್ರಶ್ನೆಗಳಿಗೆ 'ಇಂಡಿಯನ್ ಎಕ್ಸ್‌ಪ್ರೆಸ್' ಎಂಬ ಇಂಗ್ಲಿಷ್ ಪತ್ರಿಕೆಯ ಸಂಪಾದಕರಾದ ಶೇಖರ್ ಗುಪ್ತಾ ಅವರು ತಮ್ಮ ಒಂದು ಲೇಖನದಲ್ಲಿ ಹಲವು ಉತ್ತರಗಳನ್ನು ಕಂಡುಕೊಳ್ಳಲು ಪ್ರಯತ್ನಿಸಿದ್ದಾರೆ.

ಅವರ ಲೇಖನ ಒಂದು ಭಾಗದ ಅನುವಾದ ಇಲ್ಲಿದೆ:

"ನರೇಂದ್ರ ಮೋದಿ ಮತ್ತು ಗುಜರಾತ್ ರಾಜ್ಯ ಸರಳ ಸಾಮಾನ್ಯೀಕರಣಕ್ಕೆ ಒಳಗಾಗುವುದಿಲ್ಲ. ಉದಾಹರಣೆಗೆ ಮೋದಿಯ ಆಗಮನಕ್ಕೂ ಮುನ್ನ ಗುಜರಾತ್ ತುಂಬಾ ಪರಧರ್ಮಸಹಿಷ್ಣು ರಾಜ್ಯವಾಗಿತ್ತು ಆದರೆ ಮೋದಿಯ ಆಗಮನದ ನಂತರವೇ ಇಲ್ಲಿ ಕೋಮುವಾದ ಹೆಚ್ಚಾಯಿತು ಎಂದು ಹೇಳಲಾಗುವುದಿಲ್ಲ.

1995ರಲ್ಲಿ ಮೊದಲು ಅಧಿಕಾರ ಪಡೆದ ದಿನದಿಂದ ಈ ರಾಜ್ಯದಲ್ಲಿ ಬಿಜೆಪಿ ಯಾವ ಚುನಾವಣೆಯಲ್ಲೂ ಸೋತಿಲ್ಲ, ಬದಲಾಗಿ ಶಂಕರ್‌ಸಿಂಗ್ ವಘೇಲಾ, ಸುರೇಶ್ ಮೆಹತಾ, ಕೇಶುಭಾಯ್ ಪಟೇಲ್ ಮತ್ತೀಗ ಮೂರನೆ ಬಾರಿಗೆ ಗೆದ್ದಿರುವ ಮೋದಿ ಎಂಬ ನಾಲ್ಕು ಬಿಜೆಪಿ ಮುಖ್ಯಮಂತ್ರಿಗಳನ್ನು ಕಂಡಿರುವ ಗುಜರಾತ್ ಒಂದು ರೀತಿಯಲ್ಲಿ ವಿಚಿತ್ರ ರಾಜ್ಯದಂತೆ ಕಾಣಿಸುತ್ತದೆ.

ಗುಜರಾತಿಯ ವಿಚಿತ್ರ ಕುರಿತು ನಾನು ಪಾಠ ಕಲಿತದ್ದು ಸುಮಾರು ಎರಡು ದಶಕಗಳ ಹಿಂದೆ. ಆಗ ನಾನು ಇಂಡಿಯಾ ಟುಡೆ ಪತ್ರಿಕೆಗೆ ಕೆಲಸ ಮಾಡುತ್ತಿದ್ದೆ. 1992ರ ನವರಾತ್ರಿ ಹಬ್ಬದ ಸಂದರ್ಭದಲ್ಲಿ ಇಂಡಿಯಾ ಟುಡೆ ಪತ್ರಿಕೆಯ ಗುಜರಾತಿ ಆವೃತ್ತಿಯನ್ನು ಶುರುಮಾಡಲು ನಾನಾಗ ಆ ರಾಜ್ಯಕ್ಕೆ ಆಗಾಗ್ಗೆ ಹೋಗುತ್ತಿದ್ದೆ. ಪತ್ರಿಕೆಯ ಗುಜರಾತಿ ಆವೃತ್ತಿಯು ಪ್ರಾರಂಭವಾದ ಹಲವೇ ದಿನಗಳಲ್ಲಿ ಎಷ್ಟು ಜನಪ್ರಿಯವಾಯಿತೆಂದರೆ ಒಂದು ಲಕ್ಷ ಪ್ರತಿಗಳು ಮಾರಾಟವಾಗಲಾರಂಭಿಸಿದವು.



ಇದಾದ ಒಂದೆರಡು ತಿಂಗಳಲ್ಲಿ ಬಾಬ್ರಿ ಮಸೀದಿಯನ್ನು ಕೆಡವಲಾಯಿತು. ಆ ಪ್ರಕರಣವನ್ನು ಖಂಡಿಸಿ ಇಂಡಿಯಾ ಟುಡೆ ಪತ್ರಿಕೆಯು 'ಅ ನೇಷನ್ಸ್ ಶೇಮ್' ಎಂಬ ಮುಖಪುಟವರದಿಯನ್ನು ತನ್ನ ಇಂಗ್ಲಿಷ್ ಆವೃತ್ತಿಯಲ್ಲಿ ಪ್ರಕಟಿಸಿತು. ನಾವು ಆಗ ತೆಗೆದುಕೊಂಡ ಸಂಪಾದಕೀಯ ನಿಲುವಿನ ಬಗ್ಗೆ ಈಗಲೂ ನನಗೆ ಹೆಮ್ಮೆ ಇದೆ.

ಆ ಸಂದರ್ಭದಲ್ಲಿ ಗುಜರಾತಿ ಆವೃತ್ತಿಯ ಮುಖಪುಟಕ್ಕೆ 'ದೇಶ್ನಾ ಮಾಥನು ಕಲಂಕ್' ಎಂಬ ಶೀರ್ಷಿಕೆಯನ್ನು ನೀಡಿದ್ದೆವು. ಪತ್ರಿಕೆ ಇನ್ನೇನು ಮುದ್ರಣಕ್ಕೆ ಹೋಗಬೇಕು, ಆಗ ಮಾರ್ಕೆಟಿಂಗ್ ವಿಭಾಗದ ಮುಖ್ಯಸ್ಥ ಓಡಿಬಂದು ಗುಜರಾತಿ ಆವೃತ್ತಿಗೆ ಅಂತಹ ಶೀರ್ಷಿಕೆಯನ್ನು ನೀಡಿದರೆ ಪತ್ರಿಕೆಯ ಪ್ರಸಾರ ಸಂಖ್ಯೆ ಕುಗ್ಗುತ್ತದೆ ಎಂದೂ, ಅಂತಿಮವಾಗಿ ಆವೃತ್ತಿಯನ್ನೇ ನಿಲ್ಲಿಸಬೇಕಾಗುತ್ತದೆ ಎಂದೂ ಆತಂಕ ವ್ಯಕ್ತಪಡಿಸಿದರು. ಆದರೆ ಆತನ ಅಭಿಪ್ರಾಯವನ್ನು ನಾವು ತಳ್ಳಿಹಾಕಿದೆವು. ಆದರೆ ಆತನ ವಾದವೇ ಸರಿಯಾಗಿತ್ತೆಂದು ಹಲವೇ ದಿನಗಳಲ್ಲಿ ನಮಗೆ ಗೊತ್ತಾಯಿತು.

ಆ ಸಂಚಿಕೆ ಮಾರುಕಟ್ಟೆಯನ್ನು ತಲುಪಿದ ನಂತರ ಪತ್ರಗಳ, ಕಾರ್ಡ್‌ಗಳ, ಇನ್‌ಲ್ಯಾಂಡ್ ಕವರ್‌ಗಳ ಪ್ರಪಾತವೇ ಹರಿದುಬಂದಿತು (ಅದಿನ್ನೂ ಇಂಟರ್‌ನೆಟ್ ಇಲ್ಲದಿದ್ದ ದಿನಗಳು). ನಮ್ಮ ಪತ್ರಿಕೆಯನ್ನು 'ಇಸ್ಲಾಂ ಟುಡೆ', 'ಪಾಕಿಸ್ತಾನ್ ಟುಡೆ' ಎಂದೆಲ್ಲಾ ಜನ ಜರಿದಿದ್ದರು. ಏಜೆಂಟರು ಮತ್ತು ಅಂಗಡಿ ಮಾಲೀಕರು ನಮ್ಮ ಪತ್ರಿಕೆಯನ್ನು ಮಾರಾಟ ಮಾಡಲು ನಿರಾಕರಿಸಿದರು. ಪರಿಣಾಮವಾಗಿ ಪತ್ರಿಕೆಯ ಪ್ರಸಾರ ಸಂಖ್ಯೆ ಇಪ್ಪತ್ತು ಸಾವಿರಕ್ಕೆ ಕುಸಿಯಿತು. ಕೊನೆಗೆ ವಿಧಿ ಇಲ್ಲದೆ ಗುಜರಾತಿ ಆವೃತ್ತಿಯನ್ನು ನಿಲ್ಲಿಸಲಾಯಿತು. ಇಲ್ಲಿಯತನಕ ಇಂಡಿಯ ಟುಡೆ ಸಂಸ್ಥೆಯ ಇತಿಹಾಸದಲ್ಲಿ ನಿಲ್ಲಿಸಲಾಗಿರುವ ಏಕೈಕ ಭಾಷಾ ಆವೃತ್ತಿ ಅದಾಗಿದೆ.

ಆ ಸಂದರ್ಭದಲ್ಲಿ ಇಂಡಿಯಾ ಟುಡೆಯ ಹಿಂದಿ ಆವೃತ್ತಿಗೂ ಅದೇ ತರಹದ ಶೀರ್ಷಿಕೆಯನ್ನು ನೀಡಲಾಗಿತ್ತು, ಆದರೆ ಹಿಂದಿ ಆವೃತ್ತಿಯ ಪ್ರಸಾರ ಸಂಖ್ಯೆ ಹೆಚ್ಚಾಯಿತು. ಇದನ್ನು ಹೇಗೆ ಅರ್ಥೈಸುವುದು?"

ಇದನ್ನು ಓದಿದನಂತರ ಮಹಾತ್ಮಾ ಗಾಂಧಿ ತರಹದ ಜಾತ್ಯತೀತ ಮನುಷ್ಯ ಜನಿಸಿದ ರಾಜ್ಯದ ಜನರ ಮನಸ್ಸಿನಲ್ಲೇ ಕೋಮುವಾದ ಬೇರು ಬಿಟ್ಟಿದೆಯಾ ಎಂಬ ಅನುಮಾನ ಮೂಡದೆ ಇರದು.

ಕ್ಷತೆಯ ಸಂಕೇತ ಎಂಬಂತೆ ಪ್ರಚಾರ ಕೊಡಲಾಯ್ತು, ಸ್ಲಿಮರು ಕೊಟ್ಟ ಟೋಪಿ ಹಾಕಿಕೊಳ್ಳಲಿಲ್ಲ 'ಜಾತ್ಯತೀತ' ದಿ. ಎಲೆಕ್ಷನ್‌ನಲ್ಲಿ 182 ಕ್ಷೇತ್ರಗಳ ಪೈಕಿ ಒಂದರಲ್ಲೂ ಸ್ಲಿಮರಿಗೆ ಬಿಜೆಪಿ ಟಿಕೆಟ್ ಕೊಡಲಿಲ್ಲ 'ಸದ್ಭಾವನೆ'ಗಳ ಸನಕಾರ ಮೋದಿ!! 'ಮೋದಿ ಭಯ' ಅದೆಷ್ಟು ರಾತಿನಲ್ಲಿ ನೆಲೆ ನಿಂತಿದೆಯೆಂದರೆ, ಅಲ್ಪಸಂಖ್ಯಾತರು, ವಾಸಿಗಳೂ ಈ ಬಾರಿ ಬಿಜೆಪಿಯತ್ತ ಒಲವು ರಿಸಿದ್ದಾರೆ. ಇದು ಅಮಾಯಕ ಜನ ವರ್ಗದಲ್ಲಿನ -ಹತಾಶೆಗೆ ಸಾಕ್ಷಿಯಂತಿದೆ; ಎಲ್ಲಿ ಜನರ ಒಳಿತು ಸುವ ಧರ್ಮ ನಿರಪೇಕ್ಷ-ಜಾತ್ಯತೀತ ಜನತಂತ್ರ ರಾತಿನಲ್ಲಿ ಇಲ್ಲವೆಂಬುದಕ್ಕೆ ಮೋದಿ ಮನೋಹಲಿ ಾಮ)ಯೇ ಸಾರಿ-ಸಾರಿ ಹೇಳುತ್ತಿದೆ.

ಹುಸಿ ಅಭಿವೃದ್ಧಿ

ಜನ ತಲೆದೂಗುವಂತೆ ಸತ್ಯದ ತಲೆ ಮೇಲೆ ಹೊಡೆದು ಹೇಳುವ ಕಲೆ ಕರಗತ ಮಾಡಿಕೊಂಡಿರುವ ಮೋದಿ ದ ಗುಜರಾತ್ ಅತ್ಯದ್ಭುತ ಪ್ರಗತಿ ಸಾಧಿಸಿದೆ ಎಂದು ಸು ಕೊಟ್ಟವ್ರ. ಚುನಾವಣೆಯಲ್ಲಿ 'ಅಭಿವೃದ್ಧಿ'ಯನ್ನೇ ುಖ ವಿಷಯ ಮಾಡಿಕೊಂಡು ಶಂಖ ಊದಿದ್ದ. ರೆ ಗುಜರಾತಿನ ಅಭಿವೃದ್ಧಿಯೆಂದರೆ, ಅದು ನಗರ ದ್ರಿತ ಉದ್ಯಮ ಪ್ರಗತಿಯೇ ಹೊರತು ಗ್ರಾಮೀಣ ದ ಹಿತಚಿಂತನೆ ಅಲ್ಲ! ಹಳ್ಳಿಗಳು ಉದ್ಧಾರವೇ ಆಗಿಲ್ಲ, ತನ -ಶಿಶು ಮರಣ ಪ್ರಮಾಣ ಕಡಿಮೆ ಆಗಿಲ್ಲ, ಗೂ ಆರೋಗ್ಯವೆಂಬುದು ಕನಸಿನ ಮಾತಾಗಿದೆ. ದಿಯ ಮುಖ್ಯಮಂತ್ರಿಗಿರಿ ಪರ್ವದ 2004 ರಿಂದ 11 ರ ವರೆಗಿನ ಅವಧಿಯ 'ಗುಜರಾತ್ ಅಭಿವೃದ್ಧಿ' ಾಹಲಕರವಾಗಿದೆ. ಇದೊಂದು ಅಪ್ಪಟ ನಕಲಿ ಅಭಿವೃದ್ಧಿ. ಅಂಕಿ-ಸಂಖ್ಯೆ ಸಂಸ್ಥೆಯ ಮಾಹಿತಿ ಪ್ರಕಾರ ಪ್ರಗತಿ ರುವ ಎಂಟು ರಾಜ್ಯಗಳಲ್ಲಿ ಶೇ. 10ಕ್ಕೂ ಹೆಚ್ಚು ದರ ಸಾಧ್ಯವಾಗಿದೆ. ಈ ಎಂಟರಲ್ಲಿ ಗುಜರಾತಿಗೆ ನೇ ಸ್ಥಾನ!! ಮಿಕ್ಕ ಆರು ರಾಜ್ಯಗಳು ಗುಜರಾತ್‌ಗಿಂತ ದಿದ್ದರೆ ಒಂದು ರಾಜ್ಯ ಮಾತ್ರ ಹಿಂದುಳಿದಿದೆ. 1995-02ರ ಅವಧಿಯಲ್ಲಿ ಈ ಎಂಟರಲ್ಲಿ ನಾಲ್ಕು ರಾಜ್ಯಗಳು ರಾತಿಗಿಂತ ಹಿಂದಿದ್ದವು. ಆ ಬಳಿಕ ಗುಜರಾತನ್ನು ದಿಕ್ಕಿದವು. ಗುಜರಾತಿನ ಎರಡಂಕಿ ಅಭಿವೃದ್ಧಿಗೂ ದಿಯ ಮುಖ್ಯಮಂತ್ರಿಗಿರಿಗೂ ಸಂಬಂಧವಿಲ್ಲ, ಅಂದರೆ ಪ್ರಗತಿಗೆ ಮೋದಿ ಕಾರಣರಲ್ಲ, ಇಡೀ ದೇಶವೇ ಈ ಧಿಯಲ್ಲಿ ಪ್ರಗತಿ ಸಾಧಿಸಿದೆ. ಗುಜರಾತ್ ಅದರ ಒಂದು ಗವಷ್ಟೇ.


ಇತ್ತೀಚಿನ ಒಂದು ಸಮೀಕ್ಷೆಯಂತೆ ಗುಜರಾತನ್ನು ದರದಲ್ಲಿ ತಮಿಳುನಾಡು, ಮಹಾರಾಷ್ಟ್ರ, ಉತ್ತರಾಖಂಡ ತ್ತು ಹರಿಯಾಣ ರಾಜ್ಯಗಳು ಹಿಂದೆ ಹಾಕಿವೆ. ಗುಜರಾತಿನ ವೃದ್ಧಿಗೆ ಮೋದಿಯೇ ಕಾರಣವೆಂದು ಬೊಬ್ಬೆ ಹೊಡೆ ವ ಭರದಲ್ಲಿ ಉದ್ಯಮಶೀಲರಾದ ಗುಜರಾತಿಗಳನ್ನು ಪಿ ಭಂಡರು ಅವಮಾನಿಸುತ್ತಿದ್ದಾರೆ. ಇನ್ನೊಂದು ದುರಂತ ಡಿ. ಗುಜರಾತಿನಲ್ಲಿ ಉದ್ಯೋಗಾವಕಾಶಗಳು ಹೆಚ್ಚಾಗದೆ ವಕರು ಒದ್ದಾಡುತ್ತಿದ್ದಾರೆ. ಉದ್ಯೋಗ ಅವಕಾಶ ಕಡಿಮೆ ುತ್ತಿದೆ. ರಾಷ್ಟ್ರೀಯ ಸ್ಯಾಂಪಲ್ ಸರ್ವೆ ಸಂಸ್ಥೆ - ಎಸ್‌ಎಸ್‌ಓ-ಅಂಕಿಅಂಶಗಳ ಪ್ರಕಾರ 1994 ರಿಂದ 04 ರ ತನಕದ ಅವಧಿಯಲ್ಲಿ ಉದ್ಯೋಗಾವಕಾಶ ದರ 2.69 ಆಗಿತ್ತು, 2005 ರಿಂದ 2010ರ ಧಿಯಲ್ಲಿ ಉದ್ಯೋಗಾವಕಾಶ ಸೊನ್ನೆ!!

ಗುಜರಾತಿನಲ್ಲಿ ಮೋದಿ ದರ್ಬಾರಿನಲ್ಲಿ ಕೈಗಾರಿಕೆಗಳಿಗೆ ಡಿಕೆ ಏರುಗತಿಯಲ್ಲೇನೋ ಇತ್ತು, ಆದರೆ ಹೆಚ್ಚೆಚ್ಚು ದ್ಯೋಗಸೃಷ್ಟಿ ಮಾಡದೆ ಮತ್ತು ಹೆಚ್ಚು ವೇತನ ದುಡಿವ ಳಿಗೆ ಕೊಡದೆ ಹೋಗಿದ್ದರಿಂದ ಬಂಡವಾಳಶಾಹಿಗಳ ಟ್ಟೆ-ತಿಜೋರಿ ಬೆಳೆಯಿತು. ಲಾಭ ಜನಸಾಮಾನ್ಯರಿಗೆ ದಂತೆ ಕೈಗಾರಿಕೆ -ಉದ್ಯಮ ಬೆಳೆಸುವುದು ಮೋದಿಯ ಲೀ ಅಭಿವೃದ್ಧಿಯ ರೀತಿ-ನೀತಿ! ಐಟಿ ಉದ್ಯಮದಲ್ಲಂತೂ ದಿ ಮಹಾರಾಜನ ಗುಜರಾತ್ ತೀರಾ ಹಿಂದುಳಿದಿದೆ. ದಿಯ ಸರ್ಕಾರದ ಎಡವಟ್ಟು ಧೋರಣೆಯಿಂದ ತ್ರಿಕ ಶಿಕ್ಷಣ ಗುಜರಾತಿನಲ್ಲಿ ನೆಲೆ ಕಾಣಲೇ ಇಲ್ಲ, ಉದ್ಯಮಕ್ಕೆ ಅಗತ್ಯವಾದ ಇಂಗ್ಲಿಷ್ ಕಲಿಕೆಗೆ ಬಿಜೆಪಿ-ಸ್‌ನ ಮೂಲಭೂತವಾದಿಗಳು ಕಲ್ಲು ಹಾಕಿದರು. ಾ ಮಾಧ್ಯಮವಾಗಿ ಗುಜರಾತಿಗೆ ವಿಶೇಷ ಸ್ಥಾನಮಾನ ಟ್ಟು ಪುರಸ್ಕರಿಸಲಾಯ್ತು, ಇದರಿಂದ ತಾಂತ್ರಿಕ ಶಿಕ್ಷಣಕ್ಕೆ ಕಾಶ ಕಮ್ಮಿಯಾಯ್ತು.

ಶಿಕ್ಷಣ ಇಲಾಖೆ- ಗುಜರಾತಿ ಭಾಷೆಗೆ ಸಂಬಂಧಿಸಿದ ತೆಗಳನ್ನು ಆರೆಸೆಸ್ ಸುಪರ್ದಿಗೆ ಕೊಟ್ಟ ಮೋದಿ ಉಳಿದ ುಕಟ್ಟಿನ ಇಲಾಖೆಗಳನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ಾಸ ಪುರುಷ'ನೆಂದು ಸ್ವಯಂಘೋಷಿಕೊಂಡು ರಾಡಿದ್ದೇ ಹಾರಾಡಿದ್ದು! ಹೀಗಾಗಿ ಬಂಡವಾಳಶಾಹಿ ದ್ಯಮಪತಿಗಳು ಬೆಳೆದರೇ ಹೊರತು ಗುಜರಾತಿನ ಜೀವನ ಸುಧಾರಿಸಲೇ ಇಲ್ಲ. ಮೋದಿ ಹೇಳುವ ಪ್ರಗತಿ ಮೀಣ ಭಾಗಕ್ಕೆ, ಸೌರಾಷ್ಟ್ರ, ಕಛ್‌ನಂಥ ಏರಿಯಾಕ್ಕೆ ಿಟಿಯೇ ಇಲ್ಲ, ತನ್ನ ಪಾತಕವನ್ನೆಲ್ಲ ಮುಚ್ಚಿಕೊಳ್ಳಲು ವೃದ್ಧಿಯ ಮುಖವಾಡ ಹಾಕಿಕೊಂಡಿರುವ ಮೋದಿಯ ಅವತಾರ ಜನರಿಗೆ ಕಾಣಿಸುವ ದಿನ ದೂರವಿಲ್ಲ!

■ ನಹುಷ

ದಾವಣಗೆರೆ ಯುವ ಜನೋತ್ಸವವಲ್ಲ, ರಾಮಚಂದ್ರೋತ್ಸವ



ಕರ್ನಾಟಕದಲ್ಲಿ ಈಗ ಏನು ನಡೆಯುತ್ತಿದೆ ಎಂಬುದೇ ಯಾರಿಗೂ ಅರ್ಥವಾಗುವುದಿಲ್ಲ, ಅಷ್ಟೊಂದು ಕೆಟ್ಟ ಆಡಳಿತ ರಾಜ್ಯದಲ್ಲಿ ಇದೆ. ಕೆ.ಜೆ.ಪಿ.-ಬಿ.ಜೆ.ಪಿ.ಗಳ ಮಾರಾಮಾರಿಯಂತೂ ಪುಕ್ಕಟೆ ಮನರಂಜನೆಯನ್ನು ಜನತೆಗೆ ನೀಡುತ್ತಿದೆ. ಚುನಾವಣೆಗಳು ಇನ್ನು ಕೆಲವೇ ತಿಂಗಳುಗಳಲ್ಲಿ ಎದುರಾಗಲಿವೆ ಎಂಬುದನ್ನು ಅರಿತಿರುವ ರಾಜಕಾರಣಿಗಳು ಸರ್ಕಾರಿ ಕಾರ್ಯಕ್ರಮಗಳನ್ನೂ ತಮ್ಮ ಚುನಾವಣಾ ಪ್ರಚಾರ ಕಾರ್ಯಕ್ರಮಗಳಾಗಿ ಪರಿವರ್ತಿಸುತ್ತಿದ್ದಾರೆ. ಅಂತಹದ್ದೊಂದು ಕಾರ್ಯಕ್ರಮ ಮೊನ್ನೆ ದಾವಣಗೆರೆಯ ಉಚ್ಚಂಗಿದುರ್ಗದಲ್ಲಿ ನಡೆಯಿತು.

ಡಿಸೆಂಬರ್ 14, 15 ಹಾಗೂ 16ರಂದು ಉಚ್ಚಂಗಿದುರ್ಗದಲ್ಲಿ ರಾಜ್ಯ ಮಟ್ಟದ ಯುವಜನೋತ್ಸವ ನಡೆಯಿತು. ಆದರೆ ಇದನ್ನು ಯುವಜನೋತ್ಸವ ಎನ್ನುವುದಕ್ಕಿಂತಲೂ 'ರಾಮಚಂದ್ರೋತ್ಸವ' ಎಂದೇ ಕರೆಯಬಹುದಿತ್ತು. ಏಕೆಂದರೆ ಅಲ್ಲಿ ಎಲ್ಲವೂ ಜಗಳೂರು ಶಾಸಕ ರಾಮಚಂದ್ರಮಯವಾಗಿತ್ತು. ಎಲ್ಲೆಂದರಲ್ಲಿ ಶಾಸಕ ರಾಮಚಂದ್ರರ ಬೃಹತ್ ಫ್ಲೆಕ್ಸ್‌ಗಳು ರಾರಾಜಿಸುತ್ತಿದ್ದವು. ಕೆಲವು ಕಡೆ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಯಡಿಯೂರಪ್ಪ ಬೆಂಬಲಿಗ ಸಚಿವರುಗಳ ಫೋಟೋಗಳಿದ್ದ ಫ್ಲೆಕ್ಸ್‌ಗಳು ಕಂಡುಬಂದವು.

ಇದು ರಾಜ್ಯ ಮಟ್ಟದ ಯುವ ಜನೋತ್ಸವವಾದರೂ ಎಲ್ಲಿಯೂ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ ಸಚಿವ ಅಪ್ಪಚ್ಚು ರಂಜನ್‌ರವರ ಫೋಟೋ ಇರಲಿಲ್ಲ, ಅಷ್ಟೇ ಏಕೆ, ಉದ್ಘಾಟನಾ ಸಮಾರಂಭದ ಆಮಂತ್ರಣ ಪತ್ರದಲ್ಲಿಯೂ ಅವರ ಹೆಸರು ಇರಲಿಲ್ಲ, ಅವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲೇ ಇಲ್ಲ. ಇಂತಹ ಒಂದು ಯುವಜನೋತ್ಸವ ನಡೆದದ್ದು ಅವರಿಗೆ ತಿಳಿದಿದೆಯೋ ಎಂಬ ಸಂಶಯ ಬರುವ ರೀತಿಯಲ್ಲಿ ಈ ಕಾರ್ಯಕ್ರಮ ನಡೆಯಿತು.

14ರ ಬೆಳಗ್ಗೆ ನಡೆಯಲಿದ್ದ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವವರು ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬೇಕು ಎಂದು ಜಿಲ್ಲಾ ಕೇಂದ್ರಗಳಲ್ಲೇ ತಿಳಿಸಲಾಗಿತ್ತು. ಅವತ್ತು ಬೆಳಗ್ಗೆ 11 ಗಂಟೆಗೆ ಸಾವಿರಾರು ಕಲಾವಿದರು ಜಮಾಯಿಸಿದರೂ ಅಲ್ಲಿ ಯಾವುದೇ ಒಬ್ಬ ಅಧಿಕಾರಿಯ ಸುಳಿವೂ ಅಲ್ಲಿರಲಿಲ್ಲ. ರಾತ್ರಿ ಪ್ರಯಾಣ ಮಾಡಿ ಬಂದ ಕಲಾವಿದರು ಎಲ್ಲಿ ಉಳಿದುಕೊಳ್ಳಬೇಕು ಮತ್ತು ತಮ್ಮ ನಿತ್ಯ ಕರ್ಮಗಳನ್ನು ಪೂರೈಸುವುದು ಎಲ್ಲಿ ಎಂದು ತಿಳಿಯದೆ ಕಂಗಾಲಾಗಿದ್ದರು. ಅಪರಾಹ್ನ 1 ಗಂಟೆಗೆ ಆಗಮಿಸಿದ ಒಂದಷ್ಟು ಸ್ವಯಂಸೇವಕರು ನೋಂದಾವಣೆ ಕಾರ್ಯವನ್ನು ಆರಂಭಿಸಿದರು. ಆಗಲೂ ಉದ್ಘಾಟನಾ ಕಾರ್ಯಕ್ರಮ ಎಷ್ಟು ಹೊತ್ತಿಗೆ ನಡೆಯುತ್ತದೆ ಎಂಬ ಅರಿವು ಯಾರಿಗೂ ಇರಲಿಲ್ಲ. ನಂತರ ಯುವತಿಯರಿಗೆ ಪಕ್ಕದ ಶಾಲೆಯಲ್ಲಿ ವಾಸ್ತವ್ಯಕ್ಕೆ ಅವಕಾಶ ಮಾಡಲಾಗಿದೆ. ಯುವಕರಿಗೆ ಸುಮಾರು 18 ಕಿ.ಮೀ. ದೂರದಲ್ಲಿ ಇರುವ ಅರಸೀಕೆರೆ ಎಂಬಲ್ಲಿ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿ, ಸುಮಾರು 4 ಗಂಟೆಯ ವೇಳೆಗೆ ಕಲಾವಿದರುಗಳಿಗೆ ವಾಸ್ತವ್ಯದ ಮಾಹಿತಿಯನ್ನು ನೀಡಿದರು. ಜೊತೆಗೆ ಉದ್ಘಾಟನಾ ಕಾರ್ಯಕ್ರಮ ಅಂದು ಸಂಜೆ 6 ಗಂಟೆಗೆ ನಡೆಯುತ್ತದೆ. ಆ ನಂತರ ಕಾರ್ಯಕ್ರಮಗಳು ಪ್ರಾರಂಭವಾಗುತ್ತದೆ ಎಂದು ತಿಳಿಸಲಾಯಿತು.

ಆದರೆ ಉದ್ಘಾಟನಾ ಕಾರ್ಯಕ್ರಮ ಅಂದು ನಡೆಯಲೇ ಇಲ್ಲ. ಕೊನೆಗೆ ಮುಂದಿನ ದಿನ ಅಂದರೆ 15ರ ಬೆಳಗ್ಗೆ 11 ಗಂಟೆಗೆ ಉದ್ಘಾಟನಾ ಕಾರ್ಯಕ್ರಮ ನಡೆಯಲಿದೆ ಎಂದು ತರಾತುರಿಯಲ್ಲಿ ಒಂದು ಆಮಂತ್ರಣ ಪತ್ರವನ್ನು ಮುದ್ರಿಸಿ ವಿತರಿಸಲಾಯಿತು. ಅಪರಾಹ್ನ 2-30 ಗಂಟೆಗೆ ಸಂಸದ ಸಿದ್ದೇಶ್ವರ್ ಆಗಮಿಸಿದ ನಂತರವೇ ಉದ್ಘಾಟನಾ ಕಾರ್ಯಕ್ರಮ ಆರಂಭವಾಯಿತು. ಸುಮಾರು 150 ಜನರಿಗೆ ಸ್ವಾಗತ ಕೋರಿದ ಶಾಸಕ ರಾಮಚಂದ್ರ, ತಮ್ಮ ಸಾಧನಾಪಟ್ಟಿಯ ಸ್ವಯಂ ಪ್ರಶಂಸೆ ಹಾಗೂ ಮುಂದಿನ ಚುನಾವಣೆಯಲ್ಲಿ ತನ್ನನ್ನು ಮತ್ತೆ ಆಯ್ಕೆ ಮಾಡಿದಲ್ಲಿ ಉಚ್ಚಂಗಿದುರ್ಗವನ್ನು ಒಂದು ಮಾದರಿ ಪ್ರವಾಸೋದ್ಯಮ ಕೇಂದ್ರ ಆಗಿಸುವ ಭರವಸೆ ನೀಡುವುದರೊಂದಿಗೆ ಅವರ ಚುನಾವಣಾ ಪ್ರಚಾರ ಕಾರ್ಯ ಸರಕಾರದ ಹಣದಲ್ಲಿ ಉದ್ಘಾಟನೆಯಾಯಿತು. ಕಾರ್ಯಕ್ರಮ ಉದ್ಘಾಟಿಸಿದ ಸಿದ್ದೇಶ್ವರ್ ಕೂಡ ತಮ್ಮ ಸಾಧನೆಯ ಜೊತೆಯಲ್ಲಿ ರಾಮಚಂದ್ರರ ಸಾಧನೆಯನ್ನೂ ಶ್ಲಾಘಿಸಿದರು.

ಯುವಜನೋತ್ಸವ ಎಷ್ಟೊಂದು ಅಸ್ತವ್ಯಸ್ತವಾಗಿತ್ತೆಂದರೆ ಯಾವುದೇ ಕಾರ್ಯಕ್ರಮಗಳು ಸರಿಯಾದ ಸಮಯಕ್ಕೆ ನಡೆಯಲಿಲ್ಲ. ಯಾವಾಗ ಕಾರ್ಯಕ್ರಮ ನಡೆಯುತ್ತದೆ ಎಂಬ ಅರಿವು ಆಯೋಜಕರಿಗೆ ಇರಲಿಲ್ಲ. ಶಾಸಕ ರಾಮಚಂದ್ರ ಮತ್ತು ಆತನ ಹಿಂಬಾಲಕ ಮಂಜುನಾಥ್ (ಈತ 10 ವರ್ಷಗಳ ಹಿಂದೆ ರಾಷ್ಟ್ರೀಯ ಯುವ ಪ್ರಶಸ್ತಿ ಪಡೆದಿದ್ದಾತ) ಎಂಬುವವನು ಇಡೀ ಕಾರ್ಯಕ್ರಮವನ್ನು ಹೈಜಾಕ್ ಮಾಡಿದ್ದರು.

ಇಲ್ಲಿನ ಯುವಜನ ಸೇವಾ ಅಧಿಕಾರಿ ಶ್ರೀಮತಿ ಸುಚೇತ ಎಲ್ಲಿಯೂ ಯಾರ ಕಣ್ಣಿಗೂ ಬೀಳಲಿಲ್ಲ. ಅವರು ಮನೆಯೊಂದರಲ್ಲಿ ಕುಳಿತುಕೊಂಡಿದ್ದರು. ಅವರನ್ನು ಹುಡುಕಿ ತರಾಟೆಗೆ ತೆಗೆದುಕೊಂಡಾಗ ಆಕೆ ತನ್ನ ಅಸಹಾಯಕತೆಯನ್ನು ತೋಡಿಕೊಂಡರು. "ತಮಗೆ ಉಚ್ಚಂಗಿದುರ್ಗದಲ್ಲಿ ಯುವಜನೋತ್ಸವ ನಡೆಸಲು ಸಾಧ್ಯವಿಲ್ಲ, ಅಲ್ಲಿ ಯಾವುದೇ ಮೂಲಭೂತ ಸೌಕರ್ಯಗಳು ಇಲ್ಲ ಎಂಬುದನ್ನು ಆಯುಕ್ತರಾದ ಬಲದೇವಕೃಷ್ಣ ಹಾಗೂ ಕ್ರೀಡಾ ಸಚಿವ ಅಪ್ಪಚ್ಚು ರಂಜನ್‌ರವರ ಗಮನಕ್ಕೆ ತಂದಿದ್ದರೂ ಕೂಡ, ಶಾಸಕರು ಒತ್ತಡ ಹೇರಿ ಆ ಕಾರ್ಯಕ್ರಮವನ್ನು ನಾಲ್ಕು ದಿನಗಳ ಹಿಂದಷ್ಟೇ ಉಚ್ಚಂಗಿದುರ್ಗಕ್ಕೆ ಮಂಜೂರು ಮಾಡಿಸಿಕೊಂಡಿದ್ದರು. ಮತ್ತು ತಮಗೆ ಯಾವುದೇ ಜವಾಬ್ದಾರಿಯನ್ನು ವಹಿಸಿಕೊಳ್ಳದಂತೆ ಒತ್ತಡವನ್ನು ಹೇರಿದ್ದಾರೆ.



ಶಾಸಕ ರಾಮಚಂದ್ರ ರಾರಾಜಿಸುತ್ತಿರುವುದು

ಕಾರ್ಯಕ್ರಮವೆಲ್ಲವನ್ನೂ ಶಾಸಕರು ಮತ್ತು ಅವರ ಹಿಂಬಾಲಕರು ನಡೆಸುತ್ತಿದ್ದಾರೆ. ಫಲಿತಾಂಶ ಪ್ರಕಟಿಸುವುದಷ್ಟೇ ತಮ್ಮ ಕೆಲಸ" ಎಂದು ಆಕೆ ಹೇಳಿದರು.

ಸಮಾರೋಪ ಸಮಾರಂಭ ಎಂಬ ಗೊಂದಲ

ಕರ್ನಾಟಕದ ಮೂಲೆಮೂಲೆಗಳಿಂದ ಈ ಯುವಜನೋತ್ಸವದಲ್ಲಿ ಪಾಲ್ಗೊಳ್ಳಲು ಹಲವಾರು ಕಲಾವಿದರು ಬಂದಿದ್ದರು. ಅವರೆಲ್ಲರೂ ಈ ಅವ್ಯವಸ್ಥೆಯ ನಡುವೆಯೂ ತಮಗೆ ಬಹುಮಾನಗಳು ಲಭಿಸಿವೆಯೇ ಎಂದು ತಿಳಿದುಕೊಳ್ಳುವ ತವಕ ಹಾಗೂ ತಮ್ಮ ಊರುಗಳಿಗೆ ಹಿಂದಿರುಗಬೇಕಾದ ಆತುರದಲ್ಲಿದ್ದರು. ಆದರೆ ಆಯೋಜಕರಿಗೆ ಇದ್ಯಾವುದೂ ಮುಖ್ಯವಾಗಿರಲೇ ಇಲ್ಲ. ಏಕೆಂದರೆ ಅವರಿಗೆ ಈ ಕಾರ್ಯಕ್ರಮ ರಾಜಕೀಯ ವೇದಿಕೆಯಾಗಿತ್ತೇ ಹೊರತು ಯುವಜನೋತ್ಸವ ಆದರೆಷ್ಟು ಬಿಟ್ಟರೆಷ್ಟು ಎಂಬ ಭಾವನೆ ಅವರಲ್ಲಿತ್ತು.

ಸಮಾರೋಪ ಸಮಾರಂಭಕ್ಕೆ ಅಬಕಾರಿ ಸಚಿವ ರೇಣುಕಾಚಾರ್ಯ ಮತ್ತು ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಆಗಮಿಸಿದರು. ಸಂಜೆ 6 ಗಂಟೆಗೆ ಸಮಾರೋಪ ನಡೆಯುತ್ತದೆ ಎಂದು ಪ್ರಕಟಣೆಯಾಗಿದ್ದರೂ ಸಚಿವರು ಅಲ್ಲಿಗೆ ಆಗಮಿಸಿದ್ದು ಸುಮಾರು 8 ಗಂಟೆಯ ವೇಳೆಗೆ. ಹೀಗೆ ತಡವಾಗಿ ಬಂದಿದ್ದರೂ ಅವರಿಬ್ಬರು ಒಂದು ಪತ್ರಿಕಾಗೋಷ್ಠಿ ನಡೆಸಿದ ನಂತರವೇ ಕಾರ್ಯಕ್ರಮಕ್ಕೆ ಆಗಮಿಸಿದರು. ಸಮಾರೋಪ ಸಮಾರಂಭದಲ್ಲೂ ಶಾಸಕ ರಾಮಚಂದ್ರ ಮತ್ತೆ ತನ್ನ ಸಾಧನೆಗಳನ್ನು ವಿವರಿಸಿ ಮುಂದೆ ತನ್ನನ್ನು ಏತಕ್ಕಾಗಿ ಆಯ್ಕೆ ಮಾಡಬೇಕು ಎಂದು ಹೇಳಿದರು. ಇದೊಂದು ರೀತಿಯಲ್ಲಿ ಸರಕಾರಿ ವೆಚ್ಚದಲ್ಲಿ ಚುನಾವಣಾ ಪ್ರಚಾರದಂತಿತ್ತು. ವೇದಿಕೆಯಲ್ಲಿ ಯುವಜನ ಸೇವಾ ಇಲಾಖೆಯ ಯಾವುದೇ ಅಧಿಕಾರಿಗೆ ಕೆಲಸವಿರಲಿಲ್ಲ.

ತಮಾಷೆ ಎಂದರೆ ಈ ಕಾರ್ಯಕ್ರಮದಲ್ಲಿ ದಾವಣಗೆರೆಯ ವಾಣಿಜ್ಯೋದ್ಯಮಿಯಾದ ಅಂಬರ್‌ಕರ್ ಪ್ರಕಾಶ್, ಮತ್ತೋರ್ವ ವಾಣಿಜ್ಯೋದ್ಯಮಿ ವೇದಮೂರ್ತಿ, ವ್ಯಂಗ್ಯಚಿತ್ರಗಾರ ಹೆಚ್.ಬಿ. ಮಂಜುನಾಥ್ ಇವರುಗಳನ್ನು ಸನ್ಮಾನಿಸಲಾಯಿತು. ಈ ಮೂವರ ಸಾಧನೆ ಏನು ಎಂದರೆ, ಹಿಂದೆ ಕಾಂಗ್ರೆಸಿನಲ್ಲಿ ಶಾಸಕರಾಗಿದ್ದ ಜಗಳೂರಿನ ರಾಮಚಂದ್ರ ಆನಂತರ ಆಪರೇಷನ್ ಕಮಲಕ್ಕೆ ತುತ್ತಾಗಿ ಬಿಜೆಪಿ ಸೇರಿಕೊಂಡು, ಈಗ ಯಡಿಯೂರಪ್ಪನವರ ಹಿಂಬಾಲಕರಾಗಿ ಕೆಜೆಪಿಯ ಕಡೆ ವಾಲಿದ್ದು ಅವರ ಏಳಿಗೆಗಾಗಿ ಈ ಮೂವರು ಶ್ರಮಿಸಿದ್ದಾರಂತೆ. ಆದಕ್ಕೇ ಅವರುಗಳನ್ನು ಸನ್ಮಾನಿಸಲಾಗುತ್ತಿದೆ ಎಂದು ಶಾಸಕ ರಾಮಚಂದ್ರ ವಿವರಣೆಯನ್ನು ನೀಡಿದರು. ಅಂದರೆ ಇದು ಸರಕಾರಿ ಕಾರ್ಯಕ್ರಮವಲ್ಲ, ತನ್ನ ಖಾಸಗಿ ಕಾರ್ಯಕ್ರಮ ಎಂದು ರಾಮಚಂದ್ರ ಭಾವಿಸಿದ್ದು ಸ್ಪಷ್ಟವಾಗಿತ್ತು.

ಇನ್ನು ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಬಂದಿದ್ದ ಸಚಿವ ರೇಣುಕಾಚಾರ್ಯ "ಮುಂದಿನ ಚುನಾವಣೆಯಲ್ಲಿ ನೀವುಗಳು ಶಾಸಕ ರಾಮಚಂದ್ರರವರನ್ನು ಮರು ಆಯ್ಕೆ ಮಾಡದಿದ್ದಲ್ಲಿ ನಿಮಗೆ ನಷ್ಟ" ಎಂದು ಹೇಳುತ್ತಾ "ಇಂದಿನ ಯುವಪೀಳಿಗೆ ಎಲ್ಲಿಯೋ ಒಂದು ಕಡೆ ಹಾದಿ ತಪ್ಪುತ್ತಿದೆ ಎಂಬ ಆತಂಕ ಕಾಡುತ್ತಿದೆ" ಎಂದರು. ಅದನ್ನು ಕೇಳಿದ ಪ್ರೇಕ್ಷಕರು "ಮೊದಲು ನೀನು ನೆಟ್ಟಗಿರು, ಆ ನಂತರ ಬೇರೆಯವರಿಗೆ ಬುದ್ಧಿ ಹೇಳು" ಎಂದು ಗೊಣಗಿಕೊಂಡಿದ್ದು ರೇಣುಕಾಚಾರ್ಯನ ಕಿವಿಗೆ ಬೀಳಲಿಲ್ಲ!

ಇನ್ನು ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್‌ಗೆ ...ರ್ಯಕ್ರಮ ಎಂತಹದ್ದು ಎಂಬುದೇ ತಿಳಿದಿರಲಿಲ್ಲ. ...ತ್ಸವದಲ್ಲಿ ಭಾಗವಹಿಸಿದ್ದವರು ಕಲಾವಿದರು ...ದೂ ತಿಳಿಯದಷ್ಟು ಅಜ್ಞಾನಿಯಾಗಿದ್ದರು ಸಿಂಗ್. ...ರಣಕ್ಕೇ ಅವರು "ಉತ್ಸವದಲ್ಲಿ ಭಾಗವಹಿಸಲು ... ಎಲ್ಲೆಡೆಯಿಂದ ಬಂದಿರುವ ಕ್ರೀಡಾಪಟುಗಳನ್ನು ...ುತ್ತೇನೆ" ಎಂದು ಹಲವಾರು ಬಾರಿ ಹೇಳಿದರು. ...ಹುಮಾನ ವಿತರಣಾ ಕಾರ್ಯಕ್ರಮ ಸಮಾರೋಪ ...ಭದಲ್ಲಿ ನಡೆಯುವುದು ವಾಡಿಕೆ. ಬಂದ ಅತಿಥಿಗಳು ...ಮಾನ ವಿತರಣೆ ಮಾಡುತ್ತಾರೆ. ಆದರೆ ...ಾಚಾರ್ಯ ಆಗಲಿ, ಆನಂದ್ ಸಿಂಗ್ ಆಗಲಿ ...ಾನ ವಿತರಣೆ ಮಾಡಲೇ ಇಲ್ಲ, ತಮಗೆ ಅದಕ್ಕೆಲ್ಲ ...ುವಿಲ್ಲ ಎಂದು ಸಭೆಯಿಂದ ನಡೆದರು. ಸಾಂಕೇತಿಕವಾಗಿ ಒಂದೆರಡು ಬಹುಮಾನವಾದರೂ ನೀಡಿ ಎಂದರೂ ಕೂಡ ಕೇಳಲಿಲ್ಲ, ಇನ್ಯಾವ ಪುರುಷಾರ್ಥಕ್ಕಾಗಿ ಅವರು ಆಗಮಿಸಿ ದ್ದರೋ ತಿಳಿಯದು. ರಾಮಚಂದ್ರ, ರೇಣುಕಾಚಾರ್ಯ ಹಾಗೂ ಆನಂದ್ ಸಿಂಗ್ ಬಫೂನ್‌ಗಳಂತೆ ವರ್ತಿಸಿದರು.

ಬಹುಮಾನ ವಿತರಣೆ ಆಗುವ ಮುನ್ನ ಸನ್ಮಾನ ಕಾರ್ಯಕ್ರಮ ಉಳಿದುಕೊಂಡಿದೆ ಎಂದು ಮತ್ತೊಮ್ಮೆ ಆಯೋಜಕರು ಪ್ರಕಟಿಸಿದಾಗ, ಊರಿಗೆ ಹಿಂತಿರುಗುವುದು ಹೇಗೆ ಎಂಬ ಆತಂಕದಲ್ಲಿದ್ದ ಜನ ಜಗಳಕ್ಕೆ ನಿಂತರು. ಆಗ ವಿಧಿ ಇಲ್ಲದೆ ಬಹುಮಾನ ವಿತರಣೆ ಕಾರ್ಯಕ್ರಮ ನಡೆಯಿತು. ಆದರೂ ಬಹುತೇಕ ಕಲಾವಿದರಿಗೆ ಅಂದು ತಮ್ಮ ಊರುಗಳಿಗೆ ಹಿಂದಿರುಗಲು ಸಾಧ್ಯವಾಗಲಿಲ್ಲ.

ಬಹುಮಾನ ವಿತರಣೆಯಲ್ಲೂ ಗೋಲ್‌ಮಾಲ್


ಹತ್ತು ವರ್ಷಗಳ ಹಿಂದೆ ಪ್ರಶಸ್ತಿ ಪಡೆದಿದ್ದ ಮಂಜುನಾಥ ಎಂಬಾತ ಜಿಲ್ಲಾ ಪಂಚಾಯತಿಯ ಮಾಜಿ ಅಧ್ಯಕ್ಷೆ ಹಾಲಮ್ಮನವರ ಪುತ್ರ ಎಂಬ ಕಾರಣಕ್ಕೆ ಆತ ಎಲ್ಲವನ್ನೂ ನಿಯಂತ್ರಿಸುತ್ತಿದ್ದ. ಎಲ್ಲಾ ಕಲಾಪ್ರಕಾರಗಳಲ್ಲಿ ಮೊದಲ ಬಹುಮಾನ ದಾವಣಗೆರೆ ಹಾಗೂ ಸುತ್ತಮುತ್ತಲಿನ ಪ್ರದೇಶದವರಿಗೇ ಸಲ್ಲಬೇಕು ಎಂದು ಮಂಜುನಾಥ್ ತೀರ್ಪುಗಾರರ ಮೇಲೆ ಒತ್ತಡ ಹಾಕಿದ್ದರಿಂದ ಬಹಳಷ್ಟು ಕಲಾವಿದರಿಗೆ ಅನ್ಯಾಯವಾಯಿತು. ಮೊದಲ ಬಹುಮಾನ ಪಡೆದವರು ಮಾತ್ರ ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶವಿರುವುದರಿಂದ ಇಂತಹ ವಂಚನೆ ನಡೆಯಿತು. ಹಲವು ಕಲಾವಿದರು ವೇದಿಕೆಯಲ್ಲಿಯೇ ಇದನ್ನು ಪ್ರತಿಭಟಿಸಿದರು.

ಉತ್ಸವದಲ್ಲಿ ಭಾಗವಹಿಸಿದ ಮತ್ತು ಬಹುಮಾನ ಪಡೆದ ಕಲಾವಿದರಿಗೆ ಸರ್ಟಿಫಿಕೇಟ್ ಕೂಡ ನೀಡಲಿಲ್ಲ. ರಾಜ್ಯ ಸರಕಾರವು ಅಧಿಕೃತವಾಗಿ ನಡೆಸುವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಕ್ಕೆ ಆಧಾರ ಈ ಸರ್ಟಿಫಿಕೇಟ್ ಆಗಿರುತ್ತದೆ. ಆಯೋಜಕರಿಗೆ ಈ ಬಗ್ಗೆ ಯಾವ ಪರಿಜ್ಞಾನವೂ ಇರಲಿಲ್ಲ. ತಮ್ಮ ಚುನಾವಣಾ ಪ್ರಚಾರ ಸರಕಾರಿ ವೆಚ್ಚದಲ್ಲಿ ಆಗಬೇಕು ಎಂಬುದಷ್ಟೇ ಅವರ ಬಯಕೆಯಾಗಿತ್ತು. "ಯಾರದೋ ದುಡ್ಡು ಎಲ್ಲಮ್ಮನ ಜಾತ್ರೆ" ಎನ್ನುವಂತೆ ಯುವಜನೋತ್ಸವದ ಹೆಸರಿನಲ್ಲಿ ರಾಮಚಂದ್ರೋತ್ಸವ ನಡೆಯಿತು.

■ ಬಿ.ಎನ್. ಮನು ಶೆಣೈ



ಮಣಿಪುರದ ತಾಯಂದಿರ ಬೆತ್ತಲೆ ಪ್ರತಿಭಟನೆ...





ಅತ್ಯಾಚಾರವೇ ರಾಜನೀತಿ ಆದಾಗ....

ಸಂಪಾದಕರಿಗೆ ಪತ್ರ


ಪ್ರಿಯರೆ,

ಕಳೆದ ವಾರದ ಸಂಚಿಕೆಯ ನಿಮ್ಮ ಸಂಪಾದಕೀಯದಲ್ಲಿ ದೆಹಲಿಯ ಇತ್ತೀಚಿಗಿನ ಅತ್ಯಾಚಾರ ಪ್ರಕರಣದ ಬಗ್ಗೆ ಬರೆಯುತ್ತ ನೀವು ಧರ್ಮಸ್ಥಳದಲ್ಲಿ ಸೌಜನ್ಯಳ ಮೇಲೆ ನಡೆದ ಅತ್ಯಾಚಾರ ಮತ್ತು ಆಕೆಯ ಕೊಲೆಯನ್ನು ನೆನಪಿಸಿಕೊಂಡದ್ದು ಸಂದರ್ಭಕ್ಕೆ ತಕ್ಕುದಾಗಿತ್ತು. 'ಒಂದು ಅತ್ಯಾಚಾರ ನಮಗೆ ಎಲ್ಲ ಅತ್ಯಾಚಾರಗಳನ್ನೂ ನೆನಪಿಸಬೇಕು. ಮನುಷ್ಯ ದೇಹದ ಮೇಲೆ ನಡೆಯುವ ಯಾವ ಆಕ್ರಮಣವೂ ನಮಗೆ "ಅನ್ಯ" ಅಥವಾ ಹೊರಗಿನದ್ದು ಎಂದು ಅನ್ನಿಸ ಕೂಡದು' ಎಂಬ ನಿಮ್ಮ ನಿಲುವಿಗೆ ನಾನೂ ದನಿಗೂಡಿಸ ಬಯಸುತ್ತೇನೆ.

ದೆಹಲಿಯ ಅತ್ಯಾಚಾರ ಪ್ರಕರಣದಲ್ಲಿ ನಾವು ಅಗತ್ಯ ಗುರುತಿಸಬೇಕಾದ ಕೆಲವು ವಾಸ್ತವಗಳಿವೆ. ದೇಶದ ರಾಜಧಾನಿಯಲ್ಲಿ ಕಾನೂನಿನ ರಕ್ಷಣೆ, ಆಳುವವರಿಗೆ ಮಾತ್ರ ಇದೆ ಎಂಬುದು ಹಿಂದೆಯೂ ಹಲವು ಬಾರಿ ಸಾಬೀತಾಗಿತ್ತು. 1984ರ ಸಿಖ್ ನರಮೇಧದ ದಿನಗಳಲ್ಲಿ ಒಂದು ಇಡೀ ಸಮುದಾಯಕ್ಕೇನೆ ಕಾನೂನಿನ ರಕ್ಷಣೆಯನ್ನು ನಿರಾಕರಿಸಲಾಗಿತ್ತು. ಪೊಲೀಸರ ಕಣ್ಣೆದುರಿಗೇ ಆಗ ಸಿಖ್ ತರುಣಿಯರ ಮೇಲೆ ಅತ್ಯಾಚಾರ ನಡೆದಿತ್ತು. ದೆಹಲಿಯಲ್ಲಿ ಮೊನ್ನೆ ನಡೆದ ಭೀಭತ್ಸಮಯ ಘಟನೆಗೆ ಅಗತ್ಯವಾದ ವಾತಾವರಣ, ಆ ಶಹರದಲ್ಲಿ ಯಾವತ್ತೋ ನಿರ್ಮಾಣಗೊಂಡಿದೆ. 'ಅತ್ಯಾಚಾರಕ್ಕೊಳಗಾಗಿರುವ ಹೆಂಗಸರೇ ಅದನ್ನು ತಮ್ಮ ಮೈಮೇಲೆ ಎಳೆದುಕೊಂಡಿದ್ದಾರೆ' ಎಂಬ ದೆಹಲಿಯ ಪೊಲೀಸರ ಮನೋವೃತ್ತಿ ಕೂಡ ಇವತ್ತು ನಿನ್ನೆಯದಲ್ಲ. ಈ ಹಿನ್ನೆಲೆಯಲ್ಲಿ ದೆಹಲಿಯ ಇತ್ತೀಚೆಗಿನ ಈ ದುರ್ಘಟನೆಯ ವಿರುದ್ಧ ಭಾರೀ ಪ್ರತಿಭಟನೆ ಮತ್ತು ಆಕ್ರೋಶ ವ್ಯಕ್ತವಾಗಿರುವುದು ಸಹಜವೇ ಆಗಿದೆ. ಇದರ ಹಿಂದಿರುವ ನೈತಿಕ ಕಾಳಜಿಯನ್ನು ಕಿಂಚಿತ್ತೂ ಅನುಮಾನಿಸದೆ ಈ ದೇಶದಲ್ಲಿ ಅತ್ಯಾಚಾರಕ್ಕೆ ಇರುವ ಪರಂಪರೆಯ ಬಗ್ಗೆ ನಾವು ಹೇಳಲೇಬೇಕಾದ ಕೆಲವು ಮಾತುಗಳಿವೆ.

ದೆಹಲಿಯಲ್ಲಿ ಮೊನ್ನೆ ನಡೆದ ಅತ್ಯಾಚಾರದ ಭೀಕರತೆಯನ್ನು ಅಲ್ಲಗಳೆಯದೆ, ಅದನ್ನು ಮೀರಿಸುವ ಸಾಮೂಹಿಕ ಅತ್ಯಾಚಾರದ ಅನೇಕ ಪ್ರಕರಣಗಳು ದೇಶದಲ್ಲಿ ಸಂಭವಿಸಿವೆ ಎಂಬ ವಾಸ್ತವವನ್ನು ನಾವು ಗಮನಿಸಲೇಬೇಕು. ದೆಹಲಿಯ ಪ್ರಕರಣದಲ್ಲಿ ಎಲ್ಲ 6 ಆರೋಪಿಗಳನ್ನು ಬಂಧಿಸಲಾಗಿದೆ. ಅವರಲ್ಲಿ ಇಬ್ಬರು ತಮ್ಮ ಅಪರಾಧವನ್ನು ಒಪ್ಪಿಕೊಂಡಿರುವುದೇ ಅಲ್ಲದೆ, ಆ ಬಗ್ಗೆ ಪಶ್ಚಾತ್ತಾಪವನ್ನೂ ವ್ಯಕ್ತಪಡಿಸಿ, ತಮಗೆ ಫಾಸಿ ಶಿಕ್ಷೆ ಆಗಲಿ ಎಂದು ಹೇಳಿದ್ದಾರೆ. ದೆಹಲಿಯ ಈ ಅತ್ಯಾಚಾರ ಚರಿತ್ರೆಯಲ್ಲಿ ಮೊದಲನೆಯದ್ದೂ ಅಲ್ಲ; ದುರದೃಷ್ಟವಶಾತ್ ಅದು ಕಡೆಯದೂ ಆಗಿರುವುದಿಲ್ಲ. ಆದರೆ ಹಿಂದೆ ನಡೆದ ಸಾಮೂಹಿಕ ಅತ್ಯಾಚಾರದ ಎಷ್ಟು ಪ್ರಕರಣಗಳಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ? ಎಷ್ಟು ಪ್ರಕರಣಗಳಲ್ಲಿ ಅಪರಾಧಿಗಳು ತಮ್ಮ ಕೃತ್ಯಕ್ಕೆ ಪಶ್ಚಾತ್ತಾಪ ಪಟ್ಟಿದ್ದಾರೆ? 1984ರ ದೆಹಲಿಯ ಸಿಖ್ ನರಮೇಧ, 1992-93ರ ಮುಂಬೈ ಹಿಂಸಾಕಾಂಡ, ಗುಜರಾತ್-2002 ಮತ್ತು 2008ರಲ್ಲಿ ಒರಿಸ್ಸಾದ ಕಂದಮಾಲ್ ಜಿಲ್ಲೆಯಲ್ಲಿ ಆದಿವಾಸಿ ಕ್ರೈಸ್ತರ ಮೇಲೆ ನಡೆದ ಹಿಂಸಾಚಾರಗಳ ಸಂದರ್ಭಗಳಲ್ಲಿ ಕೊಲೆ ಮತ್ತು ಜೀವಹಿಂಸೆಗಳ ಜೊತೆ ಹೆಂಗಸರ ಮೇಲೆ ಅತ್ಯಾಚಾರ ಕೂಡ ದೊಡ್ಡ ಪ್ರಮಾಣದಲ್ಲಿ ನಡೆದಿದೆ. ದೆಹಲಿಯಲ್ಲಿ ಮೊನ್ನೆ ನಡೆದ ಅತ್ಯಾಚಾರವನ್ನು ದೊಡ್ಡ ಗಂಟಲಲ್ಲಿ ಖಂಡಿಸಿ, ಆ ಬಗ್ಗೆ ಲೋಕಸಭೆಯ ವಿಶೇಷ ಅಧಿವೇಶನವೊಂದನ್ನು ಕರೆಯಬೇಕು ಎಂದು ಒತ್ತಾಯಿಸಿದ ಬಿ.ಜೆ.ಪಿ. ನಾಯಕಿ ಸುಷ್ಮಾ ಸ್ವರಾಜ್ ಮುಂಬಯಿ, ಗುಜರಾತ್ ಮತ್ತು ಒರಿಸ್ಸಾಗಳಲ್ಲಿ ತಮ್ಮ ಪಕ್ಷದವರೇ ಖುದ್ದು ನಡೆಸಿದ ಸಾವಿರಾರು ಅತ್ಯಾಚಾರಗಳ ಬಗ್ಗೆ ಇದುವರೆಗೆ ಬಾಯಿ ತೆರೆದಿಲ್ಲ. ದೆಹಲಿಯ ಹಾಲಿ ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್ ನಾಯಕಿ ಶೀಲಾ ದೀಕ್ಷಿತ್ ಮೊನ್ನೆ ನಡೆದ ದುರ್ಘಟನೆಯನ್ನು ಖಂಡಿಸಿದ್ದಾರೆ. ಆದರೆ 1984ರ ಡಿಸೆಂಬರ್‌ನಲ್ಲಿ ದೆಹಲಿಯಲ್ಲಿ ನೂರಾರು ಸಿಖ್ ಮಹಿಳೆಯರ ಮೇಲೆ ನಡೆದ ಅತ್ಯಾಚಾರ ಮತ್ತು ಕಗ್ಗೊಲೆಗಳ ಬಗ್ಗೆ ಮಾತ್ರ ಅವರದ್ದು ಮೌನವ್ರತ; ಯಾಕೆಂದರೆ ಆ ನರಮೇಧದ ಉಸ್ತುವಾರಿ ನಡೆಸಿದ್ದು ಅವರದ್ದೇ ಕಾಂಗ್ರೆಸ್ ಪಕ್ಷ. ಈ ಅತ್ಯಾಚಾರಗಳಿಗೆ ಜನಸಾಮಾನ್ಯರು ಹೇಗೆ ಸ್ಪಂದಿಸಿದರು? ಗುಜರಾತ್ ನರಮೇಧದ ನಂತರ ಆ ರಾಜ್ಯದಲ್ಲಿ ನಡೆದ ಮೂರು ಚುನಾವಣೆಗಳಲ್ಲಿಯೂ ಬಿ.ಜೆ.ಪಿ. ಭಾರೀ ಬಹುಮತ ಪಡೆಯಿತು. 1984ರ ಸಿಖ್ ನರಮೇಧದ ನಂತರ ಅದರ ರೂವಾರಿಯಾಗಿದ್ದ ಕಾಂಗ್ರೆಸ್ ಪಕ್ಷವೇ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿತು. 1992-93ರ ಮುಂಬಯಿ ಹಿಂಸಾಕಾಂಡದ ನೇತೃತ್ವ ವಹಿಸಿದ್ದ ಬಿ.ಜೆ.ಪಿ ಮತ್ತು ಶಿವಸೇನೆಗಳೇ ಆ ರಾಜ್ಯದಲ್ಲಿ 1995ರಲ್ಲಿ ನಡೆದ ಚುನಾವಣೆಯಲ್ಲಿ ಬಹುಮತ ಪಡೆದವು. ಗುಜರಾತ್‌ನಲ್ಲಂತೂ 2002ರ ದಿನಗಳಲ್ಲಿ ಮುಸ್ಲಿಮ್ ಮಹಿಳೆಯರ ಮೇಲೆ ಅತ್ಯಾಚಾರ ನಡೆಸಿದ ಸಂಘಪರಿವಾರದ ಪುರುಷಮೃಗಗಳನ್ನು ಹಿಂದೂ ಮಹಿಳೆಯರೇ ಪ್ರೋತ್ಸಾಹಿಸಿದರು.

ದೇಶಾದ್ಯಂತ ಒಂದಲ್ಲ ಒಂದು ಕಡೆ ದಲಿತ ಮಹಿಳೆಯರ ಮೇಲೆ ಅತ್ಯಾಚಾರ ನಿರಂತರವಾಗಿ ನಡೆಯುತ್ತಿದ್ದರೂ ಜನ ಅದನ್ನು ಪ್ರತಿಭಟಿಸುವುದು ಹಾಗಿರಲಿ, ಗಮನಿಸುವುದು ಸಹ ಇಲ್ಲ. 2006 ಸೆಪ್ಟೆಂಬರ್‌ನಲ್ಲಿ ಮಹಾರಾಷ್ಟ್ರದ ಖೈರ್ಲಾಂಜಿಯಲ್ಲಿ ಪ್ರಿಯಾಂಕ ಮತ್ತು ಸುರೇಖ ಭೋತ್‌ಮಾಂಗೆ ಎಂಬ ಇಬ್ಬರು ದಲಿತ ಮಹಿಳೆಯರನ್ನು ಬೆತ್ತಲೆ ಮೆರವಣಿಗೆ ಮಾಡಿ ನಂತರ ಅವರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ ಕೊಲೆ ಮಾಡಲಾಯಿತು. ಆದರೆ ರಾಜ್ಯದ ಜನರು ಮಾತ್ರ ಏನೂ ಆಗದವರಂತೆ ತಣ್ಣಗಿದ್ದರು. ಖೈರ್ಲಾಂಜಿಯ ಅತ್ಯಾಚಾರದ ವಿರುದ್ಧ ಆ ರಾಜ್ಯದ ದಲಿತ ಸಮುದಾಯ ಮಾತ್ರ ಪ್ರತಿಭಟಿಸಿತು.



ಖೈರ್ಲಾಂಜಿಯಲ್ಲಿ ಹೆಣವಾದ ಪ್ರಿಯಾಂಕ...

ಮಹಿಳೆಯರೇ ಒಟ್ಟು ಸೇರಿ ತಮ್ಮ ಮೇಲೆ ಅತ್ಯಾಚಾರ ನಡೆಸಲು ವಿನಂತಿಸಿಕೊಂಡ ಒಂದು ವಿಲಕ್ಷಣ ಪ್ರತಿಭಟನೆಯನ್ನು ನಾನು ಇಲ್ಲಿ ಹೇಳಲೇ ಬೇಕು. ಈಶಾನ್ಯ ಭಾರತದ ಮಣಿಪುರ ರಾಜ್ಯದಲ್ಲಿ ಹೆಸರಿಗೆ ಒಂದು ಚುನಾಯಿತ ಸರಕಾರವಿದ್ದರೂ ಅಲ್ಲಿ ನಡೆಯುವುದು ಸೈನ್ಯದ್ದೇ ಕಾರುಬಾರು. 2004ರಲ್ಲಿ ಅಲ್ಲಿ ಬೀಡು ಬಿಟ್ಟಿದ್ದ ಸೈನ್ಯದ ಅಸ್ಸಾಂ ರೈಫಲ್ಸ್ ತುಕಡಿಯ ಸೈನಿಕರು ತಂಗ್ಜಂ ಮನೋರಮ ಎಂಬ 32 ವರ್ಷದ ಮಹಿಳೆಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದರು. ಈ ಸೈನಿಕರ ವಿರುದ್ಧ ರಾಜ್ಯದ ಪೊಲೀಸರಾಗಲೀ, ನ್ಯಾಯಾಲಯಗಳಾಗಲೀ ಯಾವುದೇ ಕ್ರಮ ತೆಗೆದುಕೊಳ್ಳುವಂತಿರಲಿಲ್ಲ. ಆ ರಾಜ್ಯದಲ್ಲಿ ಜಾರಿಯಲ್ಲಿರುವ 'ಸೈನಿಕ ಪಡೆಗಳ ವಿಶೇಷ ಅಧಿಕಾರದ ಕಾಯ್ದೆ'ಯ ಪ್ರಕಾರ ಅಂತಹ ಕ್ರಮಗಳಿಗೆ ಅವಕಾಶವಿರಲಿಲ್ಲ. ಇದರಿಂದ ಕ್ರುದ್ಧರಾದ ಮಣಿಪುರದ ಸುಮಾರು 40 ಮಹಿಳೆಯರು ಸಂಪೂರ್ಣ ಬೆತ್ತಲಾಗಿ "ಇಂಡಿಯನ್ ಆರ್ಮಿ; ರೇಪ್ ಅಸ್" ಎಂಬ ಬ್ಯಾನರನ್ನು ಹಿಡಿದು ಮಣಿಪುರದ ರಾಜಧಾನಿ ಇಂಫಾಲ್‌ನಲ್ಲಿರುವ ಅಸ್ಸಾಂ ರೈಫಲ್ಸ್‌ನ ಮುಖ್ಯ ಕಚೇರಿ ಎದುರು ಪ್ರತಿಭಟನೆ ನಡೆಸಿದರು. 'ಸೈನಿಕ ಪಡೆಗಳ ವಿಶೇಷ ಅಧಿಕಾರ ಕಾಯ್ದೆ' ಕಾಶ್ಮೀರದಲ್ಲಿ ಸಹ ಜಾರಿಯಲ್ಲಿದ್ದು ಆ ರಾಜ್ಯದಲ್ಲಿಯೂ ಅಸಂಖ್ಯ ಮಹಿಳೆಯರ ಮೇಲೆ ಸೈನಿಕರು ಅತ್ಯಾಚಾರ ನಡೆಸಿದ್ದಾರೆ. ಆ ಕರಾಳ ಕಾಯ್ದೆಯ ವಿರುದ್ಧ ಇಂಫಾಲ್‌ನಲ್ಲಿ ಇರೋಮ್ ಶರ್ಮಿಳ ಕಳೆದ 12 ವರ್ಷಗಳಿಂದ ಉಪವಾಸ ಸತ್ಯಾಗ್ರಹ ನಡೆಸಿದ್ದಾರೆ. ಆದರೆ ಕೇಂದ್ರ ಸರ್ಕಾರ ಅವರ ಈ ಶಾಂತಿಯುತ, ಪ್ರಜಾಸತ್ತಾತ್ಮಕ ಪ್ರತಿಭಟನೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿಬಿಟ್ಟದೆ.

ಇರೋಮ್ ಶರ್ಮಿಳರ ಈ ಪ್ರತಿಭಟನೆಗೆ ವ್ಯತಿರಿಕ್ತವಾಗಿ ದೇಶದ ಜಾರ್ಖಂಡ್, ಛತ್ತೀಸ್‌ಗಢ, ಒರಿಸ್ಸಾ ಮುಂತಾದ ರಾಜ್ಯಗಳ ಆದಿವಾಸಿಗಳು ತಮ್ಮ ನೆಲದಲ್ಲಿ ತಾವು ಬದುಕಿಕೊಂಡಿರುವ ಹಕ್ಕಿಗಾಗಿ ಇಂದು ಹಿಂಸಾತ್ಮಕ ಹೋರಾಟದ ಮಾರ್ಗ ಹಿಡಿದಿದ್ದಾರೆ. ಈ ಆದಿವಾಸಿಗಳ ದುರ ದೃಷ್ಟಕ್ಕೆ ಅವರ ವಾಸಸ್ಥಳಗಳು ಅದಿರುಸಂಪನ್ನ ಪ್ರದೇಶವಾಗಿದ್ದು ಸರಕಾರ ಈಗ ಆ ನೆಲವನ್ನು ಟಾಟಾ, ಮಿತ್ತಲ್, ಜಿಂದಾಲ್, ವೇದಾಂತ, ಪೋಸ್ಕೋ ಮುಂತಾದ ಭಾರೀ ಬಂಡವಾಳಶಾಹಿಗಳಿಗೆ ಸಾರಾಸಗಟಾಗಿ ಪರಭಾರೆ ಮಾಡಿದೆ. ಗಣಿಗಾರಿಕೆಯ ಉದ್ಯಮಗಳಿಗೆ ನೆಲ ತೆರವು ಮಾಡಿಕೊಡಲು ಸರಕಾರ ಪೊಲೀಸು ಮತ್ತು ಅರೆಮಿಲಿಟರಿ ಪಡೆಗಳನ್ನು ಬಳಸಿಕೊಂಡು ಆದಿವಾಸಿಗಳನ್ನು ಬಲಾತ್ಕಾರವಾಗಿ ಒಕ್ಕಲೆಬ್ಬಿಸುತ್ತಿದೆ. ಛತ್ತೀಸ್‌ಗಢದಲ್ಲಂತೂ, ಅಲ್ಲಿನ ರಾಜ್ಯ ಸರಕಾರ ಸುಪ್ರೀಂಕೋರ್ಟ್‌ನ ನಿಷೇಧಾಜ್ಞೆಗೆ ಸಹ ಕ್ಯಾರೆ ಎನ್ನದೆ ಆದಿವಾಸಿಗಳ ಹೋರಾಟವನ್ನು ಹತ್ತಿಕ್ಕಲು ಸಲ್ವಾ ಜುಡುಂ ಎಂಬ ಬಾಡಿಗೆ ಕಾಲಾಳುಗಳ ಪಡೆಯನ್ನು ಬಳಸುತ್ತಿದೆ. ಸಲ್ವಾ ಜುಡುಂ ಮಾಮೂಲಾಗಿ ಅನುಸರಿಸುವ ಒಂದು ಬೆದರಿಕೆಯ ತಂತ್ರವೆಂದರೆ ಆದಿವಾಸಿ ಮಹಿಳೆಯರ ಮೇಲೆ ಅತ್ಯಾಚಾರ ನಡೆಸುವುದು. ಬಂಡವಾಳಶಾಹಿಗೆ ಅನುಕೂಲ ಮಾಡಿಕೊಡಲು ಆದಿವಾಸಿಗಳನ್ನು ಬಲಾತ್ಕಾರವಾಗಿ ಒಕ್ಕಲೆಬ್ಬಿಸುವುದರಲ್ಲಿ ಈ ದೇಶದ ರಾಜಕೀಯ ಪಕ್ಷಗಳ ನಡುವೆ ಅದರಲ್ಲೂ ಮುಖ್ಯವಾಗಿ ಎರಡು ಮುಖ್ಯ ಪಕ್ಷಗಳಾಗಿರುವ ಕಾಂಗ್ರೆಸ್ ಮತ್ತು ಬಿ.ಜೆ.ಪಿ.ಗಳ ನಡುವೆ ಸಂಪೂರ್ಣ ಒಮ್ಮತವಿದೆ; ಪ್ರಜೆಗಳನ್ನು ಮಣಿಸುವುದಕ್ಕೆ ಅತ್ಯಾಚಾರವನ್ನು ಒಂದು ತಂತ್ರವಾಗಿ ಬಳಸುವುದರಲ್ಲೂ ಈ ಎರಡು ಪಕ್ಷಗಳ ನಡುವೆ ಒಮ್ಮತವಿದೆ. ಈ ಒಮ್ಮತದ ಇತ್ತೀಚಿಗಿನ ಉದಾಹರಣೆ ಎಂದರೆ ಛತ್ತೀಸ್‌ಗಢದ ಆದಿವಾಸಿ ತರುಣಿ ಸೋನಿ ಸೋರಿಯ ಮೇಲೆ "ನಕ್ಸಲ್" ಎಂಬ ಆಪಾದನೆ ಹೊರಿಸಿ, ಆಕೆಯನ್ನು ಚಿತ್ರಹಿಂಸೆಗೆ ಗುರಿಪಡಿಸಿದ್ದು ಛತೀಸ್‌ಗಢದ ಬಿ.ಜೆ.ಪಿ. ಸರಕಾರ. ಆಕೆಯ ಮೇಲೆ ಬಗೆಬಗೆಯ ಹಿಂಸಾಕೃತ್ಯಗಳನ್ನು ಎಸಗುವುದರ ಜೊತೆಗೆ ಆಕೆಯ ಮರ್ಮಾಂಗದೊಳಗೆ ಕಲ್ಲು ತುರುಕುವುದಕ್ಕೂ ಹೇಸದ ಆ ರಾಜ್ಯದ ಪೋಲಿಸ್ ಅಧಿಕಾರಿ ಅಂಕಿತ್ ಗಾರ್ಗ್‌ನಿಗೆ ರಾಷ್ಟ್ರಪತಿಗಳ ವಿಶೇಷ ಪದಕವನ್ನು ನೀಡಿ ಗೌರವಿಸಿದ್ದು ಕೇಂದ್ರದ ಯು.ಪಿ.ಎ. ಸರಕಾರ. ಆಳುವ ವರ್ಗಕ್ಕೆ ಅವಶ್ಯವೆನ್ನಿಸಿದರೆ ಅತ್ಯಾಚಾರವೇ ಅದರ ರಾಜನೀತಿ ಆಗುತ್ತದೆ. ಆಳುವವರಿಗೆ ಆ ಬಗ್ಗೆ ಪಶ್ಚಾತ್ತಾಪವಿಲ್ಲ. ಅವರು ಆದಿವಾಸಿಗಳ ಮೇಲೆ ನಡೆಸುವ ಹಿಂಸೆ 'ಪ್ರಧಾನ ಧಾರೆಯ ಪ್ರಜೆಗಳಿಗೆ ಗೊತ್ತಾಗದಂತೆ ನೋಡಿಕೊಳ್ಳಲು ಮಾಧ್ಯಮಗಳಿವೆ'. ಹಾಗಾಗಿ ನಕ್ಸಲ್ ನಿಗ್ರಹದ ಹೆಸರಿನಲ್ಲಿ ನಡೆಯುವ ಹಿಂಸೆ, ಅತ್ಯಾಚಾರಗಳಿಗೆ ಪ್ರತಿಭಟನೆಯೂ ಇಲ್ಲ. ದೆಹಲಿಯಲ್ಲಿ ಮೊನ್ನೆ ನಡೆದ ದುರ್ಘಟನೆಗೆ ವ್ಯಕ್ತವಾದ ಭಾರೀ ಪ್ರತಿರೋಧದ ಜೊತೆಗೆ ದನಿಗೂಡಿಸುತ್ತಲೇ ನಾವು ದೇಶಾದ್ಯಂತ ಸಾವಿರಾರು "ಪ್ರಾಯೋಜಿತ" ಅತ್ಯಾಚಾರಗಳಿಗೆ "ಮೂಕಬಲಿ"ಯಾದ ಮಹಿಳೆಯರನ್ನೂ ನೆನಪಿಸಿಕೊಳ್ಳಬೇಕು.

ದೆಹಲಿಯಲ್ಲಿ ಮೊನ್ನೆ ನಡೆದ ಅತ್ಯಾಚಾರದ ಭೀಕರತೆಯನ್ನು ಅಲ್ಲಗಳೆಯದೆ, ಅದನ್ನು ಮೀರಿಸುವ ಸಾಮೂಹಿಕ ಅತ್ಯಾಚಾರದ ಅನೇಕ ಪ್ರಕರಣಗಳು ದೇಶದಲ್ಲಿ ಸಂಭವಿಸಿವೆ ಎಂಬ ವಾಸ್ತವವನ್ನು ನಾವು ಗಮನಿಸಲೇಬೇಕು. ದೆಹಲಿಯ ಪ್ರಕರಣದಲ್ಲಿ ಎಲ್ಲ 6 ಆರೋಪಿಗಳನ್ನು ಬಂಧಿಸಲಾಗಿದೆ. ಅವರಲ್ಲಿ ಇಬ್ಬರು ತಮ್ಮ ಅಪರಾಧವನ್ನು ಒಪ್ಪಿಕೊಂಡಿರುವುದೇ ಅಲ್ಲದೆ, ಆ ಬಗ್ಗೆ ಪಶ್ಚಾತ್ತಾಪವನ್ನೂ ವ್ಯಕ್ತಪಡಿಸಿ, ತಮಗೆ ಫಾಸಿ ಶಿಕ್ಷೆ ಆಗಲಿ ಎಂದು ಹೇಳಿದ್ದಾರೆ. ದೆಹಲಿಯ ಈ ಅತ್ಯಾಚಾರ ಚರಿತ್ರೆಯಲ್ಲಿ ಮೊದಲನೆಯದ್ದೂ ಅಲ್ಲ; ದುರದೃಷ್ಟವಶಾತ್ ಅದು ಕಡೆಯದೂ ಆಗಿರುವುದಿಲ್ಲ. ಆದರೆ ಹಿಂದೆ ನಡೆದ ಸಾಮೂಹಿಕ ಅತ್ಯಾಚಾರದ ಎಷ್ಟು ಪ್ರಕರಣಗಳಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ? ಎಷ್ಟು ಪ್ರಕರಣಗಳಲ್ಲಿ ಅಪರಾಧಿಗಳು ತಮ್ಮ ಕೃತ್ಯಕ್ಕೆ ಪಶ್ಚಾತ್ತಾಪ ಪಟ್ಟಿದ್ದಾರೆ?

1984ರಲ್ಲಿ ದೆಹಲಿ, 1992-93ರಲ್ಲಿ ಮುಂಬೈ, 2002ರಲ್ಲಿ ಗುಜರಾತ್ ಮತ್ತು 2008ರಲ್ಲಿ ಒರಿಸ್ಸಾದ ಕಂದಮಾಲ್‌ನಲ್ಲಿ ಅಸಹಾಯಕ 'ಅನ್ಯಮತೀಯ' ಮಹಿಳೆಯರ ಮೇಲೆ ನಡೆದ ಅತ್ಯಾಚಾರಗಳಿಗೆ 'ಧರ್ಮರಕ್ಷಣೆ'ಯ ಕಾರಣವಿದೆ. ಮಣಿಪುರ ಮತ್ತು ಕಾಶ್ಮೀರದಲ್ಲಿ ನಡೆಯುವ ಅತ್ಯಾಚಾರಗಳಿಗೆ ಪ್ರಭುತ್ವದ ಕಾರಣವಿದೆ. ಜಾರ್ಖಂಡ್, ಛತ್ತೀಸ್‌ಘಡಗಳಲ್ಲಿ ನಡೆಯುವ ಅತ್ಯಾಚಾರಗಳಿಗೆ 'ಅಭಿವೃದ್ಧಿ'ಯ ಕಾರಣವಿದೆ. ಆದರೆ ಮೊನ್ನೆ ದೆಹಲಿಯಲ್ಲಿ ಆ ಯುವತಿಯ ಮೇಲೆ ನಡೆದ ಅತ್ಯಾಚಾರಕ್ಕೆ ಕಾರಣವೂ ಇಲ್ಲ, ವಿವರಣೆಯೂ ಇಲ್ಲ. ಈ ಅತ್ಯಾಚಾರ ಈಗಲೂ ಅನಾಮಧೇಯಳಾಗಿರುವ ಅಸಹಾಯಕ ಹೆಣ್ಣೊಬ್ಬಳ ದೇಹದ ಮೇಲೆ ಗಂಡು ನಡೆಸಿದ ಆಕ್ರಮಣ-ಅಕ್ಷರಶಃ ನಗ್ನ ಆಕ್ರಮಣ. ಅದು ಶತಶತಮಾನಗಳಿಂದ ಹೆಣ್ಣಿನ ದೇಹದ ಮೇಲೆ ನಡೆದಿರುವ ಆಕ್ರಮಣದ ಒಂದು ರೂಪಕವೂ ಹೌದು. ದೆಹಲಿಯಲ್ಲಿ ಜನ ಅಷ್ಟು ದೊಡ್ಡ ಸಂಖ್ಯೆಯಲ್ಲಿ ಒಟ್ಟಾಗಿ ನಡೆಸಿದ ಆಂದೋಲನ ಹೆಣ್ಣಿನ ಮೇಲೆ ನಡೆಯುತ್ತಿರುವ ಆಕ್ರಮಣದ ವಾಸ್ತವ ಮತ್ತು ರೂಪಕ ಎರಡನ್ನೂ ಪ್ರತಿರೋಧಿಸುವಂತಹದ್ದು. ಅದರಲ್ಲಿ ನಾವೂ ಪಾಲುಗೊಳ್ಳಬೇಕು.

■ ಜೆ. ರಾಜಶೇಖರ, ಉಡುಪಿ

...ಸಂಗಮ ಫಕೀರನಿಗೊಲಿದ ಅಕಾಡೆಮಿ ಯುವ ಪುರಸ್ಕಾರ

ಪುಸ್ತಕ ವಿಮರ್ಶೆ


■ ಡಾ. ಅರುಣ್ ಜೋಳದಕೂಡ್ಲಿಗಿ

...ನಾನೊಮ್ಮೆ ಮೊಹರಂ ಕ್ಷೇತ್ರಕಾರ್ಯಕ್ಕೆಂದು ...ದುರ್ಗ ತಾಲೂಕಿನ ಹಳ್ಳಿಗಳಲ್ಲಿ ಸುತ್ತಾಡುತ್ತಿದ್ದೆ. ಹಾಗೆ ...ಫ್‌ನ ಊರು ಅರಕೆರಾಕ್ಕೆ ಹೋದೆ. ಅಲ್ಲಿ ಮೊಹರಂ ...ೀದಿ ಸುತ್ತಾಡಿ ನಾಲ್ಕಾರು ಜನರನ್ನು ಮಾತಾಡಿಸಿ, ...ಗುಂಡದ ಹನುಮಯ್ಯನ ಜತೆ ಆರಿಫ್ ಮನೆ ಹತ್ತಿರ ...ೀದೆ. ಮುನ್ಸೂಚನೆಯಿಲ್ಲದ ಏಕಾಏಕಿ ನನ್ನ ಭೇಟಿ ...ಫ್‌ಗೆ ಖುಷಿ ಮತ್ತು ಅಚ್ಚರಿಯನ್ನು ಹುಟ್ಟಿಸಿದಂತಿತ್ತು. ...ಮು ರಾತ್ರಿ ಅರಕೆರಾದಲ್ಲಿ ಉಳಿದು ಅಲ್ಲಿನ ಹಿರಿಯ ...ಜಾವರರಿಂದ ಮೊಹರಂ ಆಚರಣೆಗಳ ಬಗ್ಗೆ ತಿಳಿದು, ...ವರಿಂದ ರಿವಾಯತ ಹಾಡುಗಳನ್ನು ಆಡಿಸಿದೆವು. ರಾತ್ರಿ ...ಫ್ ಅಮ್ಮಿಯ ಕೈರುಚಿ ಊಟಮಾಡಿ, ಆತನ ...ಯರಾದ ಸೀನು, ಹನುಮಂತ್ರಾಯ, ರೆಡ್ಡಿಯರೊಡಗೂಡಿ ...ರಾತ್ರಿಯವರೆಗೆ ಏನೇನೋ ಹರಟಿದ್ದು, ಬೆಳಗಿನ ...ನಲ್ಲಿ ಕಾಡುಹರಟೆ ಹೊಡೆದದ್ದೂ ಎಲ್ಲವೂ ಈ ...ತಹ ಬರೆವ ಹೊತ್ತಿಗೆ ನೆನಪಾಗುತ್ತಿದೆ.

...ಏಷ್ಯಾ ಖಂಡದಲ್ಲಿಯೇ ಹಿಂದುಳಿದ ತಾಲೂಕೆಂದು ...ರು ಪಡೆದಿದ್ದ ರಾಯಚೂರು ಜಿಲ್ಲೆಯ ದೇವದುರ್ಗದ ...ೀಪದ ಅರಕೆರಾದ ಹುಡುಗನಿಗೆ ದೂರದ ದೆಹಲಿಯ ...ದ್ರ ಸಾಹಿತ್ಯ ಅಕಾಡೆಮಿಯ ಯುವ ಪುರಸ್ಕಾರವೊಂದು ...ಡುಕಿಕೊಂಡು ಬಂದಿದೆ. ಇದು ನಿಜಕ್ಕೂ 'ನನ್ನಂತವರ ...ತಸವನ್ನು ಇಮ್ಮಡಿಗೊಳಿಸಿದೆ. 'ದೇವರು ದೊಡ್ಡವನು/ ...ದ ನೀರಸದಲ್ಲೂ ನಮಗೆ ಗೊತ್ತಿಲ್ಲದಂತೆ ಆಗಾಗ/ ...ಹುಮಾನಗಳನ್ನಿಟ್ಟಿರುತ್ತಾನೆ/ ಆ ಅಳು ಆಲಿಸಲು ...ವೊಬ್ಬರಿಗಾದರೂ/ಕಿವಿಗಳನ್ನು ಕೊಟ್ಟಿರುತ್ತಾನೆ' ಎನ್ನುವ ...ಫ್‌ನ ಪದ್ಯದ ಸಾಲು ಈ ಅರ್ಥದಲ್ಲಿಯೂ ನಿಜವಾಗಿದೆ.


...ಕನ್ನಡದ ಹೊಸ ತಲೆಮಾರಿನ ಲೇಖಕರಲ್ಲಿ ಆರಿಫ್ ...ದೇ ಜಾಡು ಹಿಡಿದು ನಡೆವ ಕವಿ. ಆತನು ಜಂಗಮ ...ತ್ತು ಫಕೀರರನ್ನು ಬೆಸೆವ ತಾತ್ವಿಕತೆಯೇ ಆತನ ಕಾವ್ಯದ ...ಗಳ ಶಕ್ತಿಯನ್ನು ಕಾಣಿಸುತ್ತಿದೆ. ಜಂಗಮ ಫಕೀರನ ...ೀಳಿಗೆ ಸಂಕಲನದ ಪದ್ಯಗಳನ್ನು ಓದುತ್ತಿದ್ದರೆ, ಮಾತಿಗೆ ...ಕ್ಕೂ ದೊರಕದ ಹೊಸ ರೆಕ್ಕೆಗಳನ್ನು ಮೂಡಿಸುತ್ತಿದ್ದಾರೆ ...ನ್ನಿಸುತ್ತದೆ. ಅಂತೆಯೇ ಇಲ್ಲಿನ ಪದ್ಯದ ಸಾಲುಗಳಿಗೆ ...ಗೆ ನುಗ್ಗುವ, ನಾವೇ ದನಿಗೊಟ್ಟು ಓದಿಕೊಳ್ಳುವಂತೆ ...ಸ್ಸಾಯಿಸುವ ಗುಣ ದಕ್ಕಿದೆ. ಇದು ಕವಿಯೊಬ್ಬರ ಯಶಸ್ಸೂ ...ಡ. ನಾವು ಬದುಕುತ್ತಿರುವ ಕಾಲದ ಬಿಕ್ಕಟ್ಟುಗಳನ್ನು ... ತುಂಬಾ ತಾಳ್ಮೆಯಿಂದ ತನ್ನೊಳಗೆ ಇಳಿಸಿಕೊಂಡು, ...ೀಕ್ಷಿಸಿ ಆಳದ ಮಾತೊಂದನ್ನು ಹೊಮ್ಮಿಸಿದಂತೆ ಕವಿತೆಯ ...ಲುಗಳು ನಮ್ಮನ್ನು ತಾಕುತ್ತವೆ.

ಆರಿಫ್ ಕಾವ್ಯದ ಭಾಷೆ ಧ್ವನಿಪೂರ್ಣವಾಗಿದೆ. ಧ್ವನಿಯಲ್ಲಿ ...ಗ್ಯವೂ ವಿಷಾದವೂ ಬೆರೆತ ಮಾನವೀಯ ನೆಲೆಯ ಸಂವೇದನೆ ರೂಪುಗೊಂಡಂತಿದೆ. ಇಲ್ಲಿನ ಕಾವ್ಯದಲ್ಲಿ ಮುಖ್ಯವಾಗಿ ಅನುಭಾವ ಆಧ್ಯಾತ್ಮದ ಸೆಳಕುಗಳಿವೆ. ಇವು ಉಲ್ಲೇಖ ಗಳಷ್ಟೇ ಆಗದೆ ಈ ಅನುಭವವನ್ನು ಅರಗಿಸಿ ಕೊಂಡು ಹೊಮ್ಮಿದ ಮಾತುಗಳಾಗಿವೆ.



ಹಾಗಾಗಿ ಆರಿಫ್ ಕಾವ್ಯದಲ್ಲಿ ಸರಳತೆ, ಗಹನತೆ ಒಟ್ಟೊಟ್ಟಿಗೆ ಬೆಸೆದ ಗುಣವಿದೆ. ಹೆಚ್.ಎಸ್.ಶಿವಪ್ರಕಾಶ್ ಅವರನ್ನು ಕಾವ್ಯದ ಮಹಾಗುರು ಎಂದು ಹೇಳಿಕೊಂಡರೂ ಅವರ ಕಾವ್ಯದ ಪ್ರಭಾವಕ್ಕೆ ಒಳಗಾಗದಿರುವುದು ಮೆಚ್ಚತಕ್ಕ ಸಂಗತಿ. ಮುಸ್ಲಿಂ ದಿನಬದುಕಿನ ಸಣ್ಣ ಸಣ್ಣ ಸಂಗತಿಗಳನ್ನು ಬೆಸೆಯುವ ಮೂಲಕ ಜಾಗತಿಕ ಮುಸ್ಲಿಂ ತಲ್ಲಣಗಳಿಗೆ ಎದುರಾಗುತ್ತಾರೆ. ಹಾಗಾಗಿಯೇ 'ಅಮ್ಮಿಯ ಚಕ್ರ ತಿರುಗಿದರೆ ಇತಿಹಾಸ ಒಂದು ಸುತ್ತು ಉರುಳುತ್ತದೆ.'

'ಎಲ್ಲರ ಬದುಕನ್ನು/ ಹಸನುಗೊಳಿಸುವ ಮಂತ್ರವೊಂದು ನನ್ನ ಬಳಿ ಇದ್ದಿದ್ದರೆ?' ಎಂದು ಹಂಬಲಿಸುವ ಕವಿ 'ಈಗೀಗ ನಾನು ಅಳುವುದು ನನಗೇ ಕೇಳಿಸುವುದಿಲ್ಲ' ಎನ್ನುವಷ್ಟರಮಟ್ಟಿಗೆ ಮೌನಿ. 'ಹೇ ಕನಸಿಗೆ ನಕಾಶೆ ಇಲ್ಲದ ಹುಡುಗನೇ/ಬೆನ್ನಿನ ಮೇಲೆ ಒಂದಷ್ಟು ನೀರು ಇಟ್ಟುಕೊಂಡೇ/ ಮರುಭೂಮಿಯಲ್ಲಿ ಓಡಾಡಬೇಕು/ ಒಂಟೆಯ ಒಂದಾಣಿಕೆ ಮಾಡಿಕೊಂಡೇ 'ಯುದ್ಧ ಹೂಡಬೇಕು' (ಕನಸಿಗೆ ನಕಾಶೆಯಿಲ್ಲ) ಎನ್ನುವಲ್ಲಿ ಪ್ರತಿರೋಧದ ಬೀಜಗಳೂ ಅಡಗಿವೆ. 'ಪ್ರಾರ್ಥನೆಯ ಭಾಷೆ ಪ್ರಭುತ್ವಕ್ಕೆ ಬೇಗ ಬರುವುದಿಲ್ಲ' ಎಂಬ ನಿಜಸತ್ಯದ ಕಡೆಗೂ ಕಾವ್ಯ ಚಲಿಸುತ್ತದೆ. 'ಕನಸು' ಆರೀಫ್ ಕಾವ್ಯದ ಒಳಹರಿವಿನ ಜೀವಜಲದಂತೆ ಮತ್ತೆ ಮತ್ತೆ ಬಸಿಯುತ್ತದೆ. 'ಈ ಬದುಕಿಗೆ ಅರ್ಪಣೆ ಬೇಕು/ಆದೇಶ ಹೊರಗಡೆಯಿಂದ ಬರಬಾರದು/ಒಳಗಡೆಯಿಂದ ಬರಬೇಕು' (ಕಂಬನಿ ಒರೆಸುವ ಕವಿತೆ) ಎನ್ನುವ ಸಾಲುಗಳು ಆರಿಫ್ ಕಾವ್ಯದ ಒಳಮೈ ಶಕ್ತಿಯೂ ಕೂಡ.



ಮುಸ್ಲಿಂ ಲೇಖಕರು ತಮಗೆ ಅನ್ನಿಸಿದ್ದನ್ನು ನೇರವಾಗಿ ಮುಕ್ತವಾಗಿ ಹೇಳಲಾರದ ವಾತಾವರಣವೊಂದು ಇಂದು ಸೃಷ್ಟಿಯಾಗಿದೆ ಅಥವಾ ಹಾಗೆ ಹೇಳಿದಾಕ್ಷಣ ಆ ಮಾತಿನ ಮೈಗೆ ಧಾರ್ಮಿಕ ನೆಲೆಯ ಬಣ್ಣ ಬಂದುಬಿಡುವ ಅಪಾಯವೂ ಇದೆ. ಆದರೆ ಆರಿಫ್ ಈ ಬಿಕ್ಕಟ್ಟನ್ನು ಬಿಡಿಸಿಕೊಂಡಂತಿದೆ. ಇದು ಕಾವ್ಯ ಪ್ರಕಾರದಲ್ಲಿ ಮಾತ್ರ ಸಾಧ್ಯವಾಗುವ ಗುಣವಾ? ಎಂದು ಪರೀಕ್ಷಿಸಬೇಕಿದೆ. ಹಾಗಾಗಿಯೇ 'ಮುಲ್ಲಾ ಮಹಾಸ್ವಾಮಿಗಳನ್ನು ಸುಟ್ಟು ಬೂದಿಮಾಡಬೇಕೆಂದು ಅನ್ನಿಸುತ್ತದೆ' (ಗೋಧ್ರಾ: ಒಂದು ಅಂತಿಮ ಸಂದೇಶ) ಎಂದು ಗಟ್ಟಿಯಾಗಿ ಹೇಳಬಲ್ಲರು.

ಬಂಡಾಯ ಕಾವ್ಯದ ನಂತರದ ಕಾವ್ಯದ ಹೊಸ ಲಕ್ಷಣಗಳನ್ನು ಈಗಿನ ಹೊಸ ತಲೆಮಾರಿನಲ್ಲಿ ಹುಡುಕಬೇಕಿದೆ. ಕಾರಣ ಬಂಡಾಯ ಕಾವ್ಯದಲ್ಲಿ ಜನಪದ ಕಾಳಜಿಯಿದ್ದರೂ ಅದು ಕಲಾಕೃತಿಯ ಗಟ್ಟಿತನವನ್ನು ಪಡೆಯಲಿಲ್ಲ, ವಾಚ್ಯವಾಯಿತು ಎನ್ನುವ ಟೀಕೆಗೆ ಗುರಿಯಾಯಿತು. ಅಪಾರ ಜನಪರ ಕಾಳಜಿಯನ್ನು ಇಟ್ಟುಕೊಂಡೂ, ಆಧ್ಯಾತ್ಮಿಕ ಆಳವನ್ನೂ ಒಳಗೊಂಡೂ, ಕಲಾಕೃತಿಯಾಗಿಯೂ ಯಶ ಕಂಡಿರುವ ಆರಿಫ್ ತರಹದ ಕಾವ್ಯವನ್ನು ಈ ಹಿನ್ನೆಲೆಯಲ್ಲಿ ಇನ್ನಷ್ಟು ಪರೀಕ್ಷೆಗೆ ಒಳಪಡಿಸಬೇಕಿದೆ.

ಕ್ಷಣದ ಮಿಂಚನ್ನು ಪದಗಳಲ್ಲಿ ಹಿಡಿದಿಡುವ, ಹೃದಯದಿಂದ ತೂಗಿ ನೋಡುವ, ನೋಯುವ ಗುಣ ಆರಿಫ್ ಕಾವ್ಯಕ್ಕಿದೆ. ಇದು ಸುಲಭವಾಗಿ ದಕ್ಕಬಲ್ಲ ಗುಣವಲ್ಲ, ಇಂತಹ ಗುಣವೊಂದು ಕವಿ ಏಟ್ಸ್‌ಗೆ ಇತ್ತೆಂದು ಲಂಕೇಶ್ ಒಂದು ಕಡೆ ಬರೆದ ನೆನಪು. ಇಲ್ಲಿನ ಬಹುಪಾಲು ಕವಿತೆಗಳು ಉದ್ದೀಪಕಗಳಾಗಿವೆ. ಹಾಗಾಗಿ ಈ ಕವಿತೆಗಳು ಸಹಜವಾಗಿ ಓದುಗನ ಜಗತ್ತನ್ನು ವಿಸ್ತರಿಸಲು ಶಕ್ತವಾಗಿವೆ. ಬದುಕು ಮತ್ತು ಸಮಾಜವನ್ನು ನೋಡುವ ಪ್ರಾಥಮಿಕ ಬೆರಗನ್ನು ಕವಿ ಇಲ್ಲಿ ಕಳೆದುಕೊಂಡಿಲ್ಲ, ಆ ಕಾರಣಕ್ಕೆ ಕಾವ್ಯ ಇಲ್ಲಿ ಜೀವಂತವಾಗಿ ಹುಸಿರಾಡಿದೆ.

ಅಚ್ಚಿನ ಮನೆಗೆ ತೆರಳು ಸಿದ್ದವಾದ ಪಲ್ಲವ ಪ್ರಕಾಶನ ಪ್ರಕಟಿಸಲಿರುವ 'ಬೆಂಕಿಗೆ ತೊಡಿಸಿದ ಬಟ್ಟೆ' ಸಂಕಲನದಲ್ಲಿ 60 ಪದ್ಯಗಳಿವೆ. ಆರೀಫ್‌ನ ಒಟ್ಟು ನೂರಾ ಇಪ್ಪತ್ತು ಪದ್ಯಗಳನ್ನು ಎದುರಿಗಿಟ್ಟು ಹೇಳುವುದಾದರೂ ನಿಸ್ಸಂಶಯವಾಗಿ ಕನ್ನಡ ಕಾವ್ಯಕ್ಕೆ ಬೇರೆಯದೇ ಆದ ನುಡಿಗಟ್ಟನ್ನು ಕೊಟ್ಟಿದ್ದಾರೆಂದೇ ಹೇಳಬಹುದು. ಮೊದಲ ಸಂಕಲನಕ್ಕೆ ಪ್ರಶಸ್ತಿ ಪಡೆವ ಹೊತ್ತಲ್ಲಿ ಆರಿಫ್ ತನ್ನ ಎರಡನೇ ಸಂಕಲನದಲ್ಲಿ ತನ್ನನ್ನು ತಾನೇ ಮೀರುವ ಜಿಗಿತವೊಂದನ್ನು ಮಾಡಿದ್ದಾರೆ.

ಬಹುಶಃ ಯುವ ತಲೆಮಾರಿನ ಕವಿಗಳಲ್ಲಿ ಅನೇಕರು, ಮೊದಲ ಕಾವ್ಯದ ಕಟ್ಟನಲ್ಲಿ ತೋರಿದ ತೀವ್ರತೆಯನ್ನಾಗಲಿ, ನುಡಿಗಟ್ಟನ್ನಾಗಲಿ ಮೀರಲು ಸಾಧ್ಯವಾಗದೆ, ಮತ್ತಷ್ಟು ಅಳ್ಳಕವಾಗಿ ಬರೆದಿರುವುದನ್ನೂ, ಹಳೆಯದರ ಮುಂದುವರೆದ ಭಾಗದಂತೆಯೂ ಇರುವುದನ್ನು ಗಮನಿಸಿದ್ದೇನೆ. ಆದರೆ ಆರಿಫ್ 'ಬೆಂಕಿಗೆ ತೊಡಿಸಿದ ಬಟ್ಟೆ' ಸಂಕಲನದಲ್ಲಿ ಹೊಸ ಭಾಷೆ, ಹೊಸ ನುಡಿಗಟ್ಟಿನಲ್ಲಿ ಹೊಸ ಹುಡುಕಾಟ ಮಾಡಿದ್ದಾರೆ ಅನ್ನಿಸುತ್ತಿದೆ. ಆರಿಫ್ ಕಾವ್ಯದ ಈ ಜಿಗಿತ ಕೂಡ ಯುವ ಪುರಸ್ಕಾರಕ್ಕೆ ಸಂದ ಗೌರವ ಎಂದು ಭಾವಿಸಬಹುದು.

'ಹಮ್ಮುಗಳಿರುವ ಸಂಕೋಚ ಸ್ವಭಾವದ ಸಿಡುಕು ಕೆಡುಕಿನವನಾದರೂ, ಸ್ಟ್ರಾಂಗ್ ಎಮೋಶನ್ಸ್ ಇರುವ ಅಳುಬುರುಕ ಜೀವ ನನ್ನದು' ಎಂದು ಆರಿಫ್ ತನ್ನ ವ್ಯಕ್ತಿತ್ವವನ್ನು ತಾನೆ ಕಟ್ಟಿಕೊಡುತ್ತಾರೆ. 'ನನ್ನನ್ನು ಯಾವತ್ತಿನಿಂದಲೂ ಕಾಡಿಕೊಂಡೇ ಬಂದ ಅಧೈರ್ಯದ ಸಂಗತಿಗಳೆಂದರೆ ಸಾವು ಹಾಗೂ ನೈತಿಕತೆಯ ಭಯ' ಎನ್ನುವ ಮಾತಿನಲ್ಲಿಯೂ ಆರಿಫ್ ಅವರ ಕಾವ್ಯ ಮತ್ತು ಬದುಕಿನ ಬದ್ಧತೆಯನ್ನು ಕಾಣಬಹುದು. ಹೀಗೆ ಸಾಹಿತ್ಯವನ್ನು ಹೊರತುಪಡಿಸಿಯೂ ಘನತೆಯ ವ್ಯಕ್ತಿತ್ವವನ್ನು ಹೊಂದಿದ ಆರೀಫ್ ಕಾವ್ಯದ ಪಯಣ ಮತ್ತಷ್ಟು ಎತ್ತರಕ್ಕೆ ಏರಲಿ. ●

ಶ್ರೀಲಂಕಾದ ಎರಡು ಕವಿತೆಗಳು

ಜೂನ್ 1, 1981. ಶ್ರೀಲಂಕಾದ ತಮಿಳು ಪ್ರಾಬಲ್ಯದ ಪ್ರದೇಶ ಜಾಫ್ನಾದಲ್ಲಿ ಜಿಲ್ಲಾ ಅಭಿವೃದ್ಧಿ ಪ್ರಾಧಿಕಾರದ ಚುನಾವಣೆಯಿತ್ತು. ಬಿಗಿ ಬಂದೋಬಸ್ತು, ರಕ್ಷಣೆಯ ಹೆಸರಲ್ಲಿ ಮಫ್ತಿಯಲ್ಲಿದ್ದ ಸಿಂಹಳ ಪೊಲೀಸರು ಜಾಫ್ನಾದ ಪಬ್ಲಿಕ್ ಲೈಬ್ರರಿಯನ್ನು ಸುಟ್ಟುಹಾಕಿದರು. ಅಂದು ನಡೆದ ಹಿಂಸಾಚಾರದಲ್ಲಿ ತಮಿಳರ ಜೀವಗಳೂ ಬಲಿಯಾದವು. 1930ರಲ್ಲಿ ಸ್ಥಾಪಿಸಲಾದ ಆ ಲೈಬ್ರರಿಯಲ್ಲಿ 90,000ಕ್ಕಿಂತ ಹೆಚ್ಚು ತಮಿಳು ಪುಸ್ತಕಗಳಿದ್ದವು. ಅಪರೂಪದ ಓಲೆಗರಿಯ ಹಸ್ತಪ್ರತಿಗಳಿದ್ದವು. ಜೀವನಾಶವಷ್ಟೇ ಅಲ್ಲ, ಗ್ರಂಥಾಲಯ ಸುಡುವಿಕೆ ತಮ್ಮ ಬೌದ್ಧಿಕ ಅಸ್ಮಿತೆಯ ನಾಶ ಎಂದೇ ಶ್ರೀಲಂಕಾದ ತಮಿಳರ ಮನದಲ್ಲಿ ದಾಖಲಾಯಿತು. ಅಷ್ಟೇ ಅಲ್ಲ, ಜನಾಂಗೀಯ ಕಲಹ ಸಶಸ್ತ್ರ ಹೋರಾಟವಾಗಿ ಉಲ್ಬಣಗೊಳ್ಳಲು ಕಾರಣವಾಯಿತು.

ಈ ಘಟನೆ ಕುರಿತು ಶ್ರೀಲಂಕಾದ ಖ್ಯಾತ ತಮಿಳು ಕವಿಗಳಾದ ರುದ್ರಮೂರ್ತಿ ಚೇರನ್ ಬರೆದ 'ಎರಡನೆಯ ಸೂರ್ಯೋದಯ' ಹಾಗೂ ಅವರ ತಂದೆಯ ಗೆಳೆಯರಾಗಿದ್ದ ಎಂ.ಎ.ನುಹ್ಮನ್ ಬರೆದ ಪ್ರಸಿದ್ಧ ಕವಿತೆ 'ಬುದ್ಧನ ಕೊಲೆ' ಇಲ್ಲಿವೆ.

1. ಎರಡನೆಯ ಸೂರ್ಯೋದಯ



ಆ ದಿನ ಗಾಳಿ ಬೀಸಲಿಲ್ಲ
ಅಲೆಗಳ ಏರಿಳಿತವಿರಲಿಲ್ಲ
ಕಡಲೂ ಸತ್ತಹಾಗೆ ಬಿದ್ದಿತ್ತು

ಕಡಲ ದಂಡೆಯಲಿ ನಡೆವಾಗ
ಮರಳ ಆಳಕ್ಕೆ ಕುಸಿವ ಪಾದಗಳು
ಅರೆ, ಮತ್ತೊಂದು ಸೂರ್ಯೋದಯ!
ಅಲ್ಲ, ಈ ಬಾರಿ ದಕ್ಷಿಣ ದಿಕ್ಕಿನಲ್ಲಿ.

...ಏನಾಗಿತ್ತು?
...ನನ್ನ, ಪುಟ್ಟ ...ಹೊತ್ತುರಿಯುತ್ತಿತ್ತು,

ನನ್ನ ಜನ ಮುಖ ಕಳಕೊಂಡರು
ನಮ್ಮದೇ ನೆಲ
ನೆಲದ ಮೇಲೆ ಬೀಸುವ ಗಾಳಿಗೆ
ಪರಕೀಯರ ಮೊಹರು

ಯಾರಿಗಾಗಿ ಕಾಯುತ್ತಿರುವೆ ಗೆಳೆಯನೆ?
ಬೆನ್ನಹಿಂದೆ ನಿನ್ನ ಕೈ ಕಟ್ಟಿರುವುದೆ?
ಹಾರುವ ಮೋಡಗಳ ಮೇಲೆ ಬೆಂಕಿಯ ಜ್ವಾಲೆಗಳು
ತಮ್ಮ ಸಂದೇಶ ಬರೆಯುತ್ತಿವೆ.

ಈಗಲೂ ಯಾರು ಕಾಯುತ್ತಾರೆ?
ಎದ್ದೇಳು,
ಬೀದಿಯ ಇಕ್ಕೆಲಗಳಲ್ಲೂ
ಬೂದಿರಾಶಿಯೊಳಗಿಂದ ಹೊಗೆಯೇಳುತ್ತಿದೆ
ದಾಟು ದಿಟ್ಟವಾಗಿ, ಮುನ್ನುಗ್ಗು.


● ರುದ್ರಮೂರ್ತಿ ಚೇರನ್

2. ಬುದ್ಧನ ಕೊಲೆ

ಕಳೆದ ರಾತ್ರಿ, ನನ್ನ ಕನಸಲ್ಲಿ
ಬುದ್ಧಗುರುವನ್ನು ಕೊಲ್ಲಲಾಯಿತು
ಮಫ್ತಿಯ ಪೊಲೀಸರು
ಬುದ್ಧನನ್ನು ಗುಂಡಿಟ್ಟು ಕೊಂದರು.
ಜಾಫ್ನಾ ಲೈಬ್ರರಿಯ ಮೆಟ್ಟಿಲುಗಳ ಮೇಲೆ
ರಕ್ತಮಡುವಿನಲ್ಲಿ ಮುಳುಗಿ
ಅಂಗಾತ ಬಿದ್ದ ಬುದ್ಧನ ದೇಹ..

ರಾತ್ರಿಯ ಕಗ್ಗತ್ತಲಿನಲ್ಲೇ
ಓಡೋಡಿ ಬಂದ ಮಂತ್ರಿ ಕಿಂಡಾಮಂಡಲ,
'ಅವನ ಹೆಸರು ನಮ್ಮ ಯಾದಿಯಲ್ಲಿರಲಿಲ್ಲ
ಕೊಂದಿದ್ದು ಏಕೆ?'

'ಇಲ್ಲ, ಇಲ್ಲ' ಪೊಲೀಸರೆಂದರು.
'ಏನೂ ಪ್ರಮಾದವಾಗಿಲ್ಲ
ಅವನ ಕೊಲ್ಲದೇ ಹೋಗಿದ್ದರೆ



ಒಂದೇ ಒಂದು ನೊಣವನ್ನೂ
ಕೊಲ್ಲಲಾಗುತ್ತಿರಲಿಲ್ಲ
ಎಂದೇ..'

'ಆಯಿತು, ಆಯಿತು.
ಕೂಡಲೇ ಶವ ವಿಲೇವಾರಿ ಮಾಡಿಬಿಡಿ',
ಕರಗಿಹೋದರು ಗುಡುಗಿದ ಮಂತ್ರಿ..

ಮಫ್ತಿಯ ಪೊಲೀಸರು
ಶವವನ್ನು ಒಳಗೆಳೆದು
ಬುದ್ಧನ ದೇಹವನ್ನು
ತೊಂಭತ್ತು ಸಾವಿರ ಪುಸ್ತಕಗಳಿಂದ ಮುಚ್ಚಿದರು.
ಸಿಕಲೋಕವಾದ ಸುತ್ತದಿಂದ ಬೆಂಕಿಯಿಟ್ಟರು

ಬುದ್ಧಗುರುವಿನ ದೇಹ ಬೂದಿಯಾಯ್ತು
ಅಂತೆಯೇ ಧಮ್ಮಪದವೂ..


● ಎಂ.ಎ. ನುಹ್ಮನ್

ಅನು: ಡಾ. ಎಚ್.ಎಸ್.ಅನುಪಮಾ

ಜೆಸ್ಸಿಕಾ ಲಾಲ್‌ಗೆ ಮರುಗಿದ ಮನಸ್ಸು ಬಡ ಹೆಣ್ಣುಮಕ್ಕಳಿಗೂ ಮರುಗಲಿ

ಇದೊಂದು ಚರ್ಚೆ ಈಗ ದೇಶಾದ್ಯಂತ ಸಾಕಷ್ಟು ನಡೆಯುತ್ತಿದೆ. ದೆಹಲಿಯಲ್ಲಿ ನಡೆದ ಅತ್ಯಾಚಾರದ ವಿರುದ್ಧ ಇಡೀ ದೇಶದಲ್ಲಿ, ಅದರಲ್ಲೂ ದೆಹಲಿಯಲ್ಲಿ ಬಹಳ ಆಕ್ರೋಶಭರಿತ ಪ್ರತಿಭಟನೆಗಳು ನಡೆಯುತ್ತಿವೆ. ಇಂತಹುದೇ ಪ್ರತಿಭಟನೆಯು ಛತ್ತೀಸ್‌ಗಢ್‌ನಲ್ಲಿ ಸೋನಿ ಸೂರಿ ಎಂಬ ಹೆಣ್ಣು ಮಗಳು ಅತ್ಯಂತ ಭೀಕರವಾಗಿ ಅತ್ಯಾಚಾರಕ್ಕೊಳಪಟ್ಟಾಗ ಯಾಕೆ ನಡೆಯಲಿಲ್ಲ? ಮಣಿಪುರ ಹಾಗೂ ಈಶಾನ್ಯ ಭಾರತದ ಇತರೆಡೆಗಳಲ್ಲಿ ಅಲ್ಲಿನ ಮಹಿಳೆಯರು ಅತ್ಯಾಚಾರಕ್ಕೊಳಪಟ್ಟಾಗ ಯಾಕೆ ನಡೆಯಲಿಲ್ಲ? ಮೊನ್ನೆ ಮೊನ್ನೆ ರಾಯಚೂರಿನ ಹಳ್ಳಿಯಲ್ಲಿ 14 ವರ್ಷದ ದಲಿತ ಬಾಲಕಿಯ ಮೇಲೆ ಅತ್ಯಾಚಾರ ನಡೆದಾಗ ಯಾಕೆ ಈ ಸಂವೇದನೆ ಇರಲಿಲ್ಲ? ಬಡವರು, ಆದಿವಾಸಿಗಳು, ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತ ಸಮುದಾಯದ ಮಹಿಳೆಯರು ಇಷ್ಟೇ ಭೀಕರವಾಗಿ ದಾಳಿಗೆ ಒಳಗಾದಾಗ ಇರದ ಸಂವೇದನೆ ಈ ಮಧ್ಯಮ ವರ್ಗದವರಲ್ಲಿ ಇದ್ದಕ್ಕಿದ್ದ ಹಾಗೆ ಯಾಕೆ ಉಕ್ಕುತ್ತಿದೆ ಎಂಬ ಪ್ರಶ್ನೆ ಕೇಳಿಬರುತ್ತಿದೆ. ಪತ್ರಿಕೆಗಳ ವಾಚಕರ ಕಾಲಂಗಳಲ್ಲಿ, ಹಿರಿಯ ವರದಿಗಾರರ ಲೇಖನಗಳಲ್ಲಿ, ಇಂಟರ್‌ನೆಟ್‌ನ ಬೇರೆ ಬೇರೆ ತಾಣಗಳಲ್ಲಿ ಈ ಮಾತು ಸಾಕಷ್ಟು ಚರ್ಚೆಯನ್ನೆಬ್ಬಿಸಿದೆ.

ನಮ್ಮ ದೇಶದ ಮಾಧ್ಯಮಗಳಲ್ಲಿ, ಮಧ್ಯಮ ವರ್ಗದ ವಿವಿಧ ರೀತಿಯ ಕಿವಿವರಿಕೆಗಳಲ್ಲಿ, ಮೇಲ್ವರ್ಗದ ಮನಸ್ಸುಗಳಲ್ಲಿ ಗಾಢವಾಗಿ ಕೂತ ಪೂರ್ವಗ್ರಹ ಪೀಡಿತ ಆಲೋಚನೆಗಳಲ್ಲಿ ಇರುವ ಸಮಸ್ಯೆಯನ್ನು ಈ ಮೇಲಿನ ಪ್ರಶ್ನೆಗಳು ಎತ್ತಿ ತೋರಿಸುತ್ತವೆ. ಮೇಲ್ವರ್ಗದ, ಸುಶಿಕ್ಷಿತ, 'ಕುಲೀನ' ವರ್ಗದ ಜನರು, ಮಹಿಳೆಯರು ಇಂತಹ ಸಂಕಷ್ಟಕ್ಕೆ ಒಳಗಾದಾಗ ಮಾತ್ರ ಇಂತಹವರ ಸಂವೇದನೆ ಉಕ್ಕುತ್ತದೆ ಎಂಬ ಮಾತಿನಲ್ಲಿ ಸತ್ಯವಿದೆ.



ಆದರೆ ಇಂದು ಈ 'ಪ್ರತಿ ಧೋರಣೆ' ಕೂಡಾ ಒಂದು ಫ್ಯಾಷನ್ ಆಗುತ್ತಿರುವುದು ದುರಂತವೇ ಆಗಿದೆ. ಅಂದರೆ ತಳಸಮುದಾಯಗಳ ಪರವಾಗಿ ಇಂಟರ್‌ನೆಟ್‌ನ ಅಮೂರ್ತ ಲೋಕದಲ್ಲಿ ಕಾರಿಕೊಳ್ಳುತ್ತಿರುವವರಲ್ಲಿ ಎಷ್ಟು ಮಂದಿ ಮೇಲೆ ಹೇಳಲಾದ ಛತ್ತೀಸ್‌ಗಡ, ಮಣಿಪುರ, ರಾಯಚೂರು ಇತ್ಯಾದಿಗಳೆಡೆಯಲ್ಲೆಲ್ಲಾ ಶೋಷಿತ ವರ್ಗಗಳ ಹೆಣ್ಣುಮಕ್ಕಳ ಮೇಲೆ ಅನ್ಯಾಯವಾದಾಗ ಬೀದಿಗಿಳಿದು ಆಕ್ರೋಶ ವ್ಯಕ್ತಪಡಿಸಿದ್ದರು? ಶೇ.10ರಷ್ಟು ಮಾತ್ರ ಇರಬಹುದು ಎಂದು ಯಾವ ಹಿಂಜರಿಕೆಯಿಲ್ಲದೇ ಹೇಳಬಹುದು.

ಯಾಕೆ ಈ ಮಾತುಗಳನ್ನು ಹೇಳಬೇಕಾಗಿದೆಯೆಂದರೆ ದೆಹಲಿಯಲ್ಲಿ ಅತ್ಯಾಚಾರಕ್ಕೊಳಗಾದ ಹೆಣ್ಣುಮಗಳು ಒಬ್ಬ ಪ್ಯಾರಾ ಮೆಡಿಕಲ್ ವಿದ್ಯಾರ್ಥಿನಿ, (ಅಂದರೆ ಎಂಬಿಬಿಎಸ್ ವಿದ್ಯಾರ್ಥಿನಿಯೂ ಅಲ್ಲ, ಎಂಬಿಬಿಎಸ್ ವಿದ್ಯಾರ್ಥಿನಿ ಆಗಿಬಿಟ್ಟರೆ ಆಕೆಯ ಮೇಲಾಗುವ ದಾಳಿ ಸಮರ್ಥನೀಯವೇನೂ ಅಲ್ಲ). ಆದರಲ್ಲೂ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದಾಕೆ. ಇಲ್ಲದಿದ್ದರೆ ಕಾರಿನಲ್ಲಿ ಅಥವಾ ಕನಿಷ್ಠ ಬೈಕಿನಲ್ಲಿ ಓಡಾಡುತ್ತಿದ್ದಳು. ಇಂತಹ ಒಂದು ವರ್ಗಕ್ಕೆ ಸೇರಿದ ವಿದ್ಯಾರ್ಥಿನಿಯ ಮೇಲೆ ಅತ್ಯಂತ ಕ್ರೂರವಾಗಿ, ಗಂಡು ಜಾತಿಯ ಪುರುಷಹಂಕಾರಕ್ಕೆ ಎಣೆಯೇ ಇಲ್ಲವೇ ಎಂದು ಅಸಹ್ಯ ಹುಟ್ಟುವ ಪ್ರಮಾಣಕ್ಕೆ ದಾಳಿ ನಡೆದಾಗ ಸಹಜವಾಗಿ ಮಧ್ಯಮ ವರ್ಗದವರೂ ಸೇರಿದಂತೆ ಎಲ್ಲರಲ್ಲೂ ಅಪಾರವಾದ ಸಿಟ್ಟು, ಅಸಹನೆಯನ್ನು ಮೂಡಿಸಿದೆ. ದೆಹಲಿಯ ಬೀದಿಗಳಲ್ಲಿದ್ದವರಲ್ಲಿ ಎಡಪಂಥೀಯ ಸಂಘಟನೆಗಳ ಕಾರ್ಯಕರ್ತರಿಂದ, ಕ್ರೇಜಿವಾಲ್ ಪಡೆಯವರೆಗೆ ಬೇರೆ ಬೇರೆ ಥರದ ಎಲ್ಲರೂ ಇದ್ದರು.

ಹೀಗಾಗಿ ಇದನ್ನು ಕೇವಲ ಮಧ್ಯಮವರ್ಗದವರ ಸೆಲೆಕ್ಟಿವ್ ಪ್ರತಿರೋಧ ಎಂದು ತಳ್ಳಿ ಹಾಕುವುದೂ ಸಹ ಸಂವೇದನಾರಾಹಿತ್ಯವೇ ಆಗುತ್ತದೆ. ವರ್ಗ ಮತ್ತು ಜಾತಿ ನೆಲೆಯನ್ನು ಮಹಿಳಾ ನೆಲೆಗೆ ನೀಡಬೇಕಾದ ಮಹತ್ವ ನೀಡದೇ ಆಚೆಗೆ ಕೊಂಡೊಯ್ಯುವಂತೆಯೂ ಆಗುತ್ತದೆ.

ಜೆಸ್ಸಿಕಾ ಲಾಲ್ ಎಂಬ ರೂಪದರ್ಶಿ ಕೊಲೆಗೀಡಾದಾಗ ಮಾಧ್ಯಮಗಳು ಮತ್ತು ಮೇಲ್ಮಧ್ಯಮ ವರ್ಗ ತೋರಿದ ಅತ್ಯುತ್ಸಾಹ, ಆರುಷಿ ಎಂಬ ದಂತವೈದ್ಯರ ಮಗಳ ಸಾವಿನ ಸಂದರ್ಭದಲ್ಲಿ, ಬೇರೆ ಬೇರೆ ಊರುಗಳಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಹುಡುಗಿಯರ ಸಮಸ್ಯೆಗಳಿಗೆ ಮಾಧ್ಯಮಗಳ ಅತಿ ಉತ್ಸಾಹವನ್ನು ನಾವೆಲ್ಲರೂ ಕಂಡಿದ್ದೇವೆ. ಅದನ್ನು ಈ ದೇಶದ ಎಲ್ಲಾ ದಮನಿತ ವರ್ಗ, ಜಾತಿ, ಲಿಂಗ, ಧರ್ಮಗಳ ಜನರ ಕಷ್ಟಗಳಿಗೆದುರಾಗಿ ಇಟ್ಟು ಏಕೆ ಈ ಪಕ್ಷಪಾತ ಎಂದು ಕೇಳಬಾರದು ಎಂದೇನಲ್ಲ, ಆದರೆ ಜೆಸ್ಸಿಕಾ ಲಾಲ್‌ಗಾಗಿ ಮರುಗಿದ ಮನಸ್ಸುಗಳು ಈ ದೇಶದ ಕೋಟ್ಯಾಂತರ ಬಡ ಹೆಣ್ಣುಮಕ್ಕಳ ನಿತ್ಯದ ನೋವುಗಳಿಗೂ ಮರುಗಲಿ ಎಂದು ಹೇಳುವುದು ಇನ್ನೂ ಹೆಚ್ಚು ಸೂಕ್ತವೇನೋ?

ಅತ್ಯಾಚಾರ ತಡೆಯಲು 12 ಸೂತ್ರಗಳು

ಇದರ ಸಾವಿರಾರು ಪ್ರತಿ ಮಾಡಿಸಿ ಶೀಲಾ ದೀಕ್ಷಿತ್, ರಘುವಂಶಿ, ಬೋತ್ಸಾ ತರಹದವರಿಗೆ ಹಂಚಿಸಿದರೆ ನಿಮಗೆ ಕೋಟಿ ಕೋಟಿ ಪುಣ್ಯ...

ದೆಹಲಿಯಲ್ಲಿ ನಡೆದ ಅತ್ಯಾಚಾರದ ವಿರುದ್ಧ ದೇಶಾದ್ಯಂತ ಪ್ರತಿಭಟನೆ ನಡೆಯುತ್ತಿದೆ. ಅದೇ ಸಂದರ್ಭದಲ್ಲಿ ದೆಹಲಿಯ ಮುಖ್ಯಮಂತ್ರಿ ಶೀಲಾ ದೀಕ್ಷಿತ್ ಮತ್ತು ಅಲ್ಲಿನ ಪೊಲೀಸ್ ಕಮೀಷನರ್ ರಘುವಂಶಿ ಅತ್ಯಾಚಾರ ತಡೆಯಲು ಎರಡು ಪ್ರಮುಖ ಸಲಹೆಗಳನ್ನು ನೀಡಿದ್ದಾರೆ. ಒಂದು, ಮಹಿಳೆಯರು ಮೆಣಸಿನ ಪುಡಿಯನ್ನು ಜೊತೆಯಲ್ಲಿಟ್ಟುಕೊಂಡು ಅಪಾಯದ ಸಂದರ್ಭ ಎದುರಾದರೆ ಅದನ್ನು ಉಪಯೋಗಿಸಬೇಕು; ಎರಡು, ಸಾಧ್ಯವಾದಷ್ಟು ಸಂಜೆಯಾಗುತ್ತಿದ್ದಂತೆ ಮನೆ ಸೇರಿಕೊಳ್ಳಬೇಕು. ಆಂಧ್ರದ ಸಚಿವ ಬೋತ್ಸಾ ಸತ್ಯನಾರಾಯಣ ಸಹ ಇಂತಹುದೇ ಅಭಿಪ್ರಾಯಗಳನ್ನು ಹೇಳಿದ್ದಾರೆ.

ಅತ್ಯಾಚಾರ ತಡೆಯಲು ಇಂತಹ ಅತ್ಯಪೂರ್ವವಾದ ಸಲಹೆಗಳನ್ನು ಬೇರೆ ಬೇರೆ ದೇಶಗಳಲ್ಲಿ ಈಗಾಗಲೇ ನೀಡಲಾಗಿದೆ. ಅಂತಹುದನ್ನು ಕೇಳಿಕೇಳಿ ಸ್ಫೂರ್ತಿಗೊಂಡು, ಆನ್ ಬಾರ್ಟೋವ್ ಎಂಬಾಕೆ ಲೈಂಗಿಕ ಕಿರುಕುಳ ತಡೆಯಲು 10 ಸೂತ್ರಗಳು ಎಂಬ ಒಂದು ಪಟ್ಟಿಯನ್ನು ಬರೆದಿದ್ದರು. ಇವತ್ತಿನ ಭಾರತೀಯ ಸಂದರ್ಭವನ್ನು ಗಮನದಲ್ಲಿಟ್ಟುಕೊಂಡು, ಅವನ್ನು ಮಾರ್ಪಡಿಸಿ ಈ ಕೆಳಕಂಡಂತೆ ಬರೆಯಲಾಗಿದೆ. ಮೆಣಸಿನಪುಡಿ ಸೇರಿದಂತೆ ಇನ್ನಾವುದೇ ವಿಧಾನಕ್ಕಿಂತ ಇದಕ್ಕೆ ಹೆಚ್ಚಿನ ಗ್ಯಾರಂಟಿ ಇದೆ.

1. ಯಾರಾದರೂ ಒಂಟಿಯಾಗಿ ತಮ್ಮಷ್ಟಕ್ಕೆ ತಾವೇ ಹೋಗುತ್ತಿದ್ದರೆ... ಅವರನ್ನು ಅವರಷ್ಟಕ್ಕೇ ಹೋಗಲು ಬಿಡಿ.

2. ನಿಮ್ಮ ಜಮೀನು/ತೋಟದಲ್ಲಿ ಕೆಲಸಕ್ಕೆ ಬಂದಿರುವವರು, ಕೂಲಿಯನ್ನು ಪಡೆದುಕೊಂಡು ಜಮೀನಿನ ಕೆಲಸ ಮಾಡಲು ಮಾತ್ರ ಬಂದಿದ್ದಾರೆ ಎಂಬುದನ್ನು ನೆನಪಿಟ್ಟುಕೊಳ್ಳಿ.

3. ಲಾಕ್ ಮಾಡಿರದ ಯಾವುದೇ ಮನೆಯ ಬಾಗಿಲು ಅಥವಾ ಕಿಟಕಿಯನ್ನು ನಿಮ್ಮಷ್ಟಕ್ಕೆ ನೀವೇ ತೆರೆಯಲು ಹೋಗಬೇಡಿ.

4. ನಿಮ್ಮ ಮನೆಯಲ್ಲಿ ಆಟವಾಡುತ್ತಿರುವ ಮಗು ಅಥವಾ ಓಡಾಡಿಕೊಂಡಿರುವ ಯಾವುದೇ ವಯಸ್ಸಿನ ಹೆಣ್ಣು ಮಗುವಿನ ಸಮೀಪ ಹೋದಾಗ ನಿಮಗೆ ಮೈಮುಟ್ಟಬೇಕು ಅನ್ನಿಸುವುದಾದರೆ ನೀವು ಮನೆಯಿಂದ ಹೊರಗೆಹೋಗಿ ಬಿಡಿ. ಆ ಮಗುವಿಗೆ 'ಅಂಕಲ್‌ಗಳೆಂದರೆ ಎಲ್ಲರೂ ಒಳ್ಳೆಯವರಲ್ಲ, ನಾನೂ ಸೇರಿ. ಹಾಗೇನಾದರೂ ನಾನು ನಿನ್ನ ಮೈಮುಟ್ಟಿದರೆ ನೀನು ಕೂಡಲೇ ಜೋರಾಗಿ ಕಿರುಚಬೇಕು; ಒಂದು ವೇಳೆ ಕಿರುಚಲು ಸಾಧ್ಯವಾಗದೇ ಇದ್ದರೆ, ನಂತರ ನಾನೇನು ಮಾಡಿದೆ ಎಂಬುದನ್ನು ಕನಿಷ್ಠ ಐದು ಜನಕ್ಕಾದರೂ ಹೇಳು' ಎಂದು ಹೇಳಿಕೊಡಿ.

5. ನಿಮ್ಮ ಜೊತೆ ಕುಡಿಯುತ್ತಾ ಕುಳಿತಿರುವ ಇತರರ ಡ್ರಿಂಕ್ಸ್‌ನೊಳಗೆ ಮತ್ತು ಬರಿಸುವ ಔಷಧ ಬೆರೆಸಬೇಡಿ.

6. ನಿಮ್ಮ ಹೆಂಡತಿಯ ಅನುಮತಿ ಇಲ್ಲದೇ ಆಕೆಯ ಮೈಮುಟ್ಟಲು ನಿಮಗೆ ಹಕ್ಕಿಲ್ಲ ಎಂಬುದನ್ನು ಪ್ರತೀದಿನ ಬೆಳಗ್ಗೆ, ಮಧ್ಯಾಹ್ನ ಹಾಗೂ ಸಂಜೆ ನಿಮಗೆ ನೀವು ಹೇಳಿಕೊಳ್ಳಿ.

7. ದಾರಿಯಲ್ಲಿ ಯಾರದ್ದಾದರೂ ಸ್ಕೂಟಿ, ಕಾರ್ ಕೆಟ್ಟುಹೋಗಿದ್ದು ನಿಮ್ಮ ಸಹಾಯ ಕೇಳಿದರೆ ಅವರ ಮೇಲೆ ಯಾವ ರೀತಿಯ ದಾಳಿಯನ್ನೂ ಮಾಡಬಾರದು ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಿ.

8. ನೀವು ಒಂದು ಲಿಫ್ಟ್‌ನ ಒಳಗೆ ಇದ್ದು, ಅದರೊಳಗೆ ಇನ್ನೊಬ್ಬ ವ್ಯಕ್ತಿ ಬಂದರೆ ಅವರಿಗೆ ಕಿರುಕುಳ ನೀಡಬೇಡಿ. ಒಂದು ವೇಳೆ ಎಂದಾದರೂ ಕಿರುಕುಳ ನೀಡಬೇಕೆಂದು ನಿಮಗೆ ಅನ್ನಿಸಿದ್ದರೆ ಲಿಫ್ಟ್ ಬಿಟ್ಟು ಮೆಟ್ಟಿಲು ಹತ್ತಿ ಹೋಗಿ.

9. ಒಂದು ವೇಳೆ ಬೇರೆಯವರಿಗೆ ಯಾವುದೇ ರೀತಿಯ ಕಿರುಕುಳ ನೀಡದೇ ಇರುವುದು ನಿಮ್ಮಿಂದ ಸಾಧ್ಯವಾಗದೇ ಇದ್ದರೆ, ನಿಮ್ಮನ್ನು ತಡೆಯಲು ಸಾಧ್ಯವಾಗುವ ಸ್ನೇಹಿತರೊಬ್ಬರನ್ನು ನಿಮ್ಮ ಜೊತೆಯಲ್ಲೇ ಇರಿಸಿಕೊಳ್ಳಿ.


10. ಸದಾ ಪ್ರಾಮಾಣಿಕರಾಗಿರಿ. ನೀವು ಲೈಂಗಿಕವಾಗಿ ಮುಂದುವರೆಯುವ ವ್ಯಕ್ತಿಯನ್ನು ನಂಬಿಸಲು ಮೊದಲು ಬಹಳ ಕಾಳಜಿ ತೋರುವ ಸ್ನೇಹಿತನಂತೆ ನಟಿಸಬೇಡಿ. ಸಾಧ್ಯವಾದರೆ ನೀವು ಅವರಿಗೆ ಏನೇನು ಮಾಡಬೇಕೆಂದು ಬಯಸುತ್ತೀರಿ ಎಂಬುದನ್ನು ಅವರಿಗೆ ತಿಳಿಸಿ. ಅವರು ಓಡಿಹೋಗಲು ಸಾಧ್ಯವಿರುವಷ್ಟು ಮೊದಲೇ ತಿಳಿಸಿ. ಇಲ್ಲದಿದ್ದರೆ ನೀವು ಅವರ ಮೇಲೆ ಅತ್ಯಾಚಾರ ಮಾಡಬಯಸುತ್ತೀರಿ ಎಂಬುದು ಅವರಿಗೆ ಗೊತ್ತಾಗದೇ ಹೋಗಬಹುದು.

11. ಸದಾ ನೆನಪಿಡಿ: ಸಂಪೂರ್ಣ ಎಚ್ಚರದಲ್ಲಿದ್ದು ನಿಮ್ಮೊಂದಿಗೆ ಮಾತನಾಡುವ ಸ್ಥಿತಿಯಲ್ಲಿರದ ಯಾರೊಂದಿಗೂ ನೀವು ಲೈಂಗಿಕ ಸಂಬಂಧ ಮಾಡಬಾರದು.

12. ಒಂದು ವೇಳೆ 'ಆಕಸ್ಮಾತ್ತಾಗಿ' ನೀವು ಯಾರ ಮೇಲಾದರೂ ಅತ್ಯಾಚಾರ ಮಾಡಬಹುದು ಅಥವಾ ಲೈಂಗಿಕ ಕಿರುಕುಳ ನೀಡಬಹುದು ಅನ್ನಿಸಿದರೆ, ಸದಾ ನಿಮ್ಮ ಜೊತೆ ಒಂದು ವಿಷಲ್ (ಪೀಪಿ) ಇಟ್ಟುಕೊಳ್ಳಿರಿ. ನೀವು ಹಾಗೇನಾದರೂ ಮುಂದುವರೆದರೆ ಅದನ್ನು ನಿಮ್ಮ ಜೊತೆಯಲ್ಲಿರುವ ವ್ಯಕ್ತಿಗೆ ಕೊಡಿ, ಆಗ ಅವರು ಅದನ್ನು ಜೋರಾಗಿ ಊದಲು ಅನುಕೂಲವಾಗುತ್ತದೆ.

ಇದನ್ನು ಓದಿದ ಪ್ರತೀ ಗಂಡಸೂ ಸಾವಿರ ಪ್ರತಿಯನ್ನು ಪ್ರಿಂಟ್ ಹಾಕಿಸಿ, 15 ವರ್ಷ ದಾಟಿದ 1000 ಜನ ಗಂಡಸರಿಗೆ ಹಂಚಬೇಕು.

ಕ್ಯಾಲೆಂಡರ್ ಮಾದರಿಯಲ್ಲಿ ಮುದ್ರಿಸಿ, ಲ್ಯಾಮಿನೇಟ್ ಮಾಡಿಸಿದರೆ ಪುಣ್ಯ ಇನ್ನೂ ಜಾಸ್ತಿಯೇ ಆಗುತ್ತದೆ. ಧರ್ಮಸ್ಥಳದ ಮಂಜುನಾಥ, ಉಡುಪಿಯ ಶ್ರೀ ಕೃಷ್ಣ, ತಿರುಪತಿ ತಿಮ್ಮಪ್ಪ, ಶಬರಿಮಲೆ ಅಯ್ಯಪ್ಪ ಸೇರಿದಂತೆ ಎಲ್ಲಾ ಗಂಡು ದೇವರುಗಳಿರುವ ದೇವಸ್ಥಾನಗಳಲ್ಲಿ ಫ್ಲೆಕ್ಸ್ ಮಾಡಿಸಿ ಹಾಕಿಸಿದರಂತೂ ಧರ್ಮರಾಯ ನಡೆದುಹೋದಂತೆ ನೀವು ವೈಕುಂಠಕ್ಕೆ ಕಾಲ್ನಡಿಗೆಯಲ್ಲೇ ಹೋಗಬಹುದು.



ಅಬ್ಬಾ ಪುರುಷಹಂಕಾರವೇ?


ಮಹಿಳೆಯೊಬ್ಬಳ ಮೇಲೆ ಅತ್ಯಾಚಾರ ನಡೆದಾಗ ಪ್ರತೀ ಗಂಡಸೂ ಮುಟ್ಟಿ ನೋಡಿಕೊಳ್ಳಬೇಕು. ಇದರಲ್ಲಿ ತನ್ನದೂ ಒಂದು ಪಾಲಿದೆ ಅಂತ ಅವನಿಗೆ ಅನ್ನಿಸಬೇಕು. ಆದರೆ ಆ ಮಹಿಳೆ ಹಾಕಿಕೊಂಡಿದ್ದ ಬಟ್ಟೆ ಎಂತಹುದು, ಆಕೆ ಆ ಹೊತ್ತಿನಲ್ಲಿ ಏಕೆ ಹೊರಗೆ ಹೋಗಬೇಕಿತ್ತು ಎಂದು ಹೇಳುವವರಿಗೆ ಪ್ರಜಾತಂತ್ರದ ಪ್ರಜ್ಞೆ ಇಲ್ಲದಿದ್ದರೆ ಹಾಳಾಗಲಿ ವಾಸ್ತವದ ಅರಿವೂ ಇರುವುದಿಲ್ಲ ಅಥವಾ ಇದ್ದರೂ ಅವರ ಪುರುಷಹಂಕಾರದ ಮುಸುಕು ಅವರಿಗೆ ಅದನ್ನು ತೋರಿಸುವುದಿಲ್ಲ. ವಾಸ್ತವವೇನೆಂದರೆ (ಮತ್ತು ಇದನ್ನು ಸಾವಿರಾರು ಬಾರಿ ಹೇಳಲಾಗಿದೆ) ಎರಡು ವರ್ಷದ ಮಗುವಿನ ಮೇಲೆ ಅತ್ಯಾಚಾರ ನಡೆಯುತ್ತದೆ. ಅಂಕಿಅಂಶಗಳು ಹೇಳುವುದೂ 'ಸಂಪೂರ್ಣ ಬಟ್ಟೆ ಹಾಕಿಕೊಂಡಿರುವ' ಮಹಿಳೆಯರ ಮೇಲೆ ಆಗುವ ಅತ್ಯಾಚಾರಗಳೇ ಹೆಚ್ಚು. 'ಗಂಡಸಿಗೆ ಒಂದು ಹೆಣ್ಣು ಎಷ್ಟು ಬಟ್ಟೆ ಹಾಕಿಕೊಂಡಿದ್ದಾಳೆ ಎಂಬುದು ಮುಖ್ಯವಲ್ಲ, ಏಕೆಂದರೆ ಆತ ಮಾನಸಿಕವಾಗಿ ಆಕೆಯನ್ನು ವಿವಸ್ತ್ರಳಾಗಿಸುತ್ತಿರುತ್ತಾನೆ' ಎಂಬ ಮಾತನ್ನು ಯಾರೋ ಹೇಳಿದ್ದಾರೆ.

ಅಷ್ಟು ಮಾತ್ರವಲ್ಲ, ಹೆಚ್ಚಿನ ಪ್ರಮಾಣದ ಲೈಂಗಿಕ ಕಿರುಕುಳಗಳು ಅತ್ಯಂತ ಹತ್ತಿರದ ಬಂಧುಗಳು (ತಂದೆ, ಅಣ್ಣ, ಮಾವ, ಚಿಕ್ಕಪ್ಪ, ದೊಡ್ಡಪ್ಪ, ತಾತ), ಕೌಟುಂಬಿಕ ಸ್ನೇಹಿತರಿಂದಲೇ ನಡೆಯುತ್ತವೆ. ಮತ್ತು ರಾತ್ರಿ ಹೊತ್ತು ಬೀದಿ ತಿರುಗುವಾಗ ಅಲ್ಲ; ಮನೆಯೊಳಗೇ ನಡೆಯುತ್ತವೆ ಇಷ್ಟೆಲ್ಲಾ ಇದ್ದೂ ಶೀಲಾ ದೀಕ್ಷಿತ್‌ರಂತಹ 'ಹೆಣ್ಣು-ಮಗಳು' ಸಹ ಹೆಣ್ಣು ಮಕ್ಕಳಿಗೇ ಬುದ್ಧಿ ಹೇಳುವುದು ಏನನ್ನು ತೋರಿಸುತ್ತದೆ? ಪುರುಷಾಧಿಪತ್ಯದ ಮೌಲ್ಯಗಳು ಈ ನಾಡಿನೊಳಗೆ ಎಷ್ಟು ಬಲಿಷ್ಠವಾಗಿದೆ ಎಂಬುದನ್ನಷ್ಟೇ ತೋರಿಸುತ್ತದೆ.

ಆದರಲ್ಲೂ ಬಡವರು, ದಲಿತರು, ಆದಿವಾಸಿಗಳು, ಹಿಂದುಳಿದ ವರ್ಗಗಳಿಗೆ ಸೇರಿದ ಹೆಣ್ಣುಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಅತ್ಯಾಚಾರಕ್ಕೆ ಒಳಗಾಗುವುದು ಈ ಸಮಸ್ಯೆಗೆ ಇರುವ ವರ್ಗ ಹಾಗೂ ಜಾತಿ ನೆಲೆಯನ್ನೂ ತೋರಿಸುತ್ತದೆ. ತನ್ನ ಸ್ವಾಭಿಮಾನವನ್ನು ಪ್ರದರ್ಶಿಸುವ ಮಹಿಳೆಗೆ ಶಹಬ್ಬಾಸ್‌ಗಿರಿ ದಕ್ಕುವ ಬದಲಿಗೆ ಇಂತಹ ಕಿರುಕುಳ ಲಭಿಸುತ್ತದೆ. ಆಕೆ ಅಸರ್ಟೀವ್ ಆದಷ್ಟೂ ದಾಳಿಯ ಪ್ರಮಾಣ ಹೆಚ್ಚಾಗುತ್ತದೆ; ಏಕೆಂದರೆ ಅದು ಪುರುಷಹಂಕಾರವನ್ನು ಕೆರಳಿಸುತ್ತದೆ.

ಸಾರ್ವಜನಿಕ ಸ್ಥಳದಲ್ಲಿ ಮಹಿಳೆಯರನ್ನು ಇಲ್ಲವಾಗಿಸುವುದಲ್ಲ ಪರಿಹಾರ. ಇನ್ನೂ ಹೆಚ್ಚೆಚ್ಚು ಮಹಿಳೆಯರು ಸಾರ್ವಜನಿಕ ಸ್ಪೇಸ್‌ಗಳಿಗೆ ಬರುವುದು ಮಾತ್ರ ಇದಕ್ಕೆ ಪರಿಹಾರ.

ಆದರ ಜೊತೆಗೇ ಛತ್ತೀಸ್‌ಗಢ, ಈಶಾನ್ಯ ಭಾರತ, ಕಾಶ್ಮೀರಗಳಲ್ಲಿ ಈ ದೇಶದ ಸೈನಿಕರು ಭೀಕರವಾದ ಅತ್ಯಾಚಾರಗಳನ್ನು ಅಲ್ಲಿನ ಮಹಿಳೆಯರ ಮೇಲೆ ನಡೆಸುತ್ತಿದ್ದಾರೆ ಎಂಬುದನ್ನು ಮರೆಯದಿರೋಣ. ಇರೋಂ ಶರ್ಮಿಳಾ 10 ವರ್ಷಕ್ಕೂ ಹೆಚ್ಚಿನ ಕಾಲದಿಂದ ನಡೆಸುತ್ತಿರುವ ಉಪವಾಸ ಸತ್ಯಾಗ್ರಹವು 'ಸಶಸ್ತ್ರ ಪಡೆಗಳ ವಿಶೇಷಾಧಿಕಾರ ಕಾಯ್ದೆ'ಯ ವಿರುದ್ಧವಾಗಿದೆ. ಈ ಕಾಯ್ದೆಯ ಬಲದಿಂದಲೂ ಅಲ್ಲಿ ಸೈನಿಕರು ಅತ್ಯಾಚಾರವೆಸಗಿ ಪಾರಾಗಲು ಸಾಧ್ಯವಾಗುತ್ತಿದೆ. ನಮ್ಮ ಸರ್ಕಾರಗಳಿಗೆ ಇರುವ ಅಹಂಕಾರ ಸಹ (ಎಷ್ಟೇ ಪ್ರಭಾವಶಾಲಿ ಮಹಿಳೆಯರು ಮುಖ್ಯ ಸ್ಥಾನಗಳಲ್ಲಿದ್ದರೂ) ಗಂಡಸಿನ ಅಹಂಕಾರವೇ ಅಲ್ಲವೇ? ಅತ್ಯಾಚಾರದ ವಿರುದ್ಧ ತರುವ ಯಾವುದೇ ಕಾಯಿದೆಯನ್ನು ಇವರೆಲ್ಲರಿಗೂ ಅನ್ವಯವಾಗುವಂತೆ ವಿಸ್ತರಿಸುವ ಅಗತ್ಯವಿದೆ. ಮಹಿಳೆಯರ ಕುರಿತು ಶೂನ್ಯ ಸಂವೇದನೆ ಹೊಂದಿರುವ ನ್ಯಾಯಾಧೀಶರೂ ಸೇರಿದಂತೆ.



ಕಂಪನಿ ಸುರು ಮಾಡಿದ ಮ್ಯಾಲೆ ನಾಟಕ ಆಡ್ತಯಿರಬೇಕಾಯ್ತದೆ

ಕಟ್ಟೆಪುರಾಣ

• ಬಿ.ಚಂದ್ರೇಗೌಡ

ಕಾಳಮಾವನಿಗೆ ಯಾವ ಸುದ್ದಿಯೂ ಬೇಕಿರಲಿಲ್ಲ. ...ವರೂ ಮನಸ್ಸಿಗೆ ಹಿತಕೊಡುವ, ಸಮಾಧಾನವುಂಟು ...ಮಾಡುವ ಸಂಗತಿಗಳು ಬೇಕಿತ್ತು. ಆದರೆ ಅಂತಹ ...ಷಯಗಳೇ ಇರಲಿಲ್ಲ. ಆದ್ದರಿಂದ ಸುಮ್ಮನೆ ಕುಳಿತಿದ್ದ. ...ಗ ಬಂದ ಉಗ್ರಿ,

"ಗೊತ್ತಾಯ್ತೇನೆ ಜುಮ್ಮಿ ಸುದ್ದಿ?" ಎಂದ.

"ಅದ್ಯಾವುದಪ್ಪ ನಾನು ಕಾಣದ್ದು?" ಎಂದಳು.

"ನೀನು ಪಂಚಾತಿ ಮೆಂಬರಾಗಿದ್ರೂ ತಿಳಕಂಡಿಲ್ಲ ...ದ್ರೇ, ಬರಿ ಅತ್ತಗೆ ರಾಜಿನಾಮೆಯ."

"ರಾಜಿನಾಮೆ ಯಾಕೆ ಬರೀಲಿ ಸರಿಯಾಗೇಳ್ಳ."

"ರಾತ್ರಿ ಯಾರೋ ಕಾರಿನಲ್ಲಿ ಬಂದು ಚಂದ್ರೇಗೌಡನೆದ್ದಿ ...ತಗಂಡೋಗಿದ್ದರಂತೆ" ಎಂದು ಉಗ್ರಿ ಹೇಳುತ್ತಿದ್ದಂತೆ ...ಟ್ಟರಿ ಕಣ್ಣುಬಿಟ್ಟ ಕಾಳಮಾವ,

"ಇದೇನ್ಲ ಇಂತ ಸುದ್ದಿ ಹೇಳತಿ? ನಿಜವೇನ್ಲ?" ಎಂದ.

"ಊ ಕಣಮಾವ. ನ್ಯನ್ನೆ ರಾತ್ರಿಲೇ ಹೊತ್ತಗಂಡೋದರಂತೆ. ...ನೆ ಬಾಗಲಿಗೂ ಬೀಗ ಹಾಕ್ಯದೆ" ಎಂದು ತುಟಿ ...ರೆಯಲ್ಲಿ ನಗು ತಡೆದುಕೊಂಡು ಹೇಳಿದ.

"ಅಲ್ಲಯ್ಯ, ಆ ಡೆಲ್ಲಿಲಿ ಏನೊ ಹೆಣ್ಣುಮಗಳ ಮ್ಯಾಲೆ ...ಲಾತ್ಕಾರ ನ್ಯಡಿತು ಅಂತ ಮಾತಾಡಿದ್ರಿ. ಈಗ ನಮ್ಮೂರಲ್ಲೇ ...ಅಂತ ಕ್ಯಲಸಾಗ್ಯದೆ ಅಂದ್ರೆ ಏನೇಳನ. ನಡಿ ನೋಡನ. ...ದ್ಯಾವ ನನ್ನ ಮಗ ಇಂತ ಕ್ಯಲಸ ಮಾಡಿದೋನು. ...ವುನ್ನ ಹಿಡಕಂಡು ಬಂದು ಹಿಡ ಮಾಡನ ನಡಿ" ...ನ್ನುತ್ತಿದ್ದಂತೆ ಹಠಾತ್ತನೆ ಸೀರ ಎದ್ದೇಬಿಟ್ಟ.

"ತಡಿ ಮಾವ, ಈ ಮುಂಡೆಮಗನ ಮಾತ ಕಟಗಂಡು ...ನು ಅಂಗಾಡಬ್ಯಾಡ. ಆ ಚಂದ್ರೇಗೌಡನೆದ್ದಿ ಪುಟ್ಟಲಕ್ಷ್ಮೀ ...ಳದೋಳು. ಅವುಳ ಕಾಂಗ್ರೆಸ್ಸಿನವು ಹೊತಗಂಡೋಗ್ಯವೆ. ...ವುಳದೊಂದೋಟಿಂದ ಪಂಚಾತಿ ಅವುರ ಕೈಗೋಯ್ತದೆ ...ದ್ಕೆ" ಎಂದಳು ಜುಮ್ಮಿ.

"ಸರಿ, ನಿನ್ಯಾಕೊತಗಂಡೋಗಿಲ್ಲ?" ಎಂದ ಸೀರ.

"ಇವುಳ್ಯಾರೊತಗಂಡೋದರೂ? ಚಂದ್ರನೆದ್ದಿ ಒಳ್ಳೆ ...ದರ್‍ರಾಗ್ಯವುಳೆ. ಅದ್ಕೆ ಹೊತಗಂಡೋಗ್ಯವುರೆ. ಅವುಳಿಗೆ ...ಕಾದ ಮೇನತ್ತು ಮಾಡಿ ಕರಕಂಡು ಬತ್ತರೆ."

"ತಲಿಯಲ್ಲ ಮಾತಾಡಬ್ಯಾಡ ಸುಂಕಿರ್ಲ. ಅಲ್ಲ ...ಮಾವ ನಾನು ಕಾಂಗ್ರೆಸ್ಸಿನೋಳು. ಕಾಂಗ್ರೆಸ್ಸಿಗೆ ಓಟು ...ಮಾಡಿಕತ್ತಿನಿ. ಚಂದ್ರನೆದ್ದಿ ದಳದೋಳಲವೆ. ಅದ್ಕೆ ಅವುಳ ...ಹೊತಗಂಡೋಗಿ ಯರಡದಿನ ಮಡಿಕಂಡಿದ್ದು ಓಟು ...ಮಾಡೋ ಟೇಮಿಗೆ ಕರಕಂಡು ಬಂದು ಮಾಡಿಸಿಗತ್ತರೆ" ...ಎಂದಳು ಜುಮ್ಮಿ.

"ಥೂ ಸುಂಕಿರ್ಲ, ಹೇಳಬ್ಯಾಡ ಅತ್ತಗೆ. ಹೊತ್ತಗಂಡೋಗಿ ...ಹೊತ್ತಗಂಡು ಬಂದು ಓಟು ಮಾಡಿಸಿಗಳದು ...ರಾಜಕಾರಣವೇನ್ಲೆ?" ಎಂದು ಕಾಳಮಾವ ಹೇಳುವಾಗ ...ಉಗ್ಗಿ ಬಂದ ವಾಟಿಸ್ಸೆ,

"ಒಲವೊ ಬಸ್ಸಲ್ಲಿ ಎಮ್ಮೆಲ್ಲೆಗಳ ಕರಕಂಡೋಗಿ, ...ರೆಸಾರ್ಟಲ್ಲಿ ಇಟ್ಟುಕೊಂಡು ಚುನಾವಣೆ ದಿನ ಕರಕೊಂಡು ...ಬಂದು ಓಟಾಕಿಸಿಕೊಳ್ಳೊದು ಒಳ್ಳೆ ರಾಜಕಾರಣನೆ ದೊಡ್ಡಪ್ಪ" ...ಎಂದ.

"ತಂದ ಇವನೊಂದು ಹಳೆ ಸುದ್ದಿಯ."

"ಹಳೆ ಸುದ್ದಿ ಅಲ್ಲ ದೊಡ್ಡಪ್ಪ ಡೆಮಾಕ್ರಸೀಲಿ ಮುಂದೆ ...ಯಾವಾಗಲೂ ಇರುವಂಥದ್ದೆ. ಅಂತದೆ ಈ ಕಿಡ್ನಾಪ್ ...ಕೇಸು. ನಾನು ರಾಜಕಾರಣಕ್ಕೆ ಬಂದ ಕಾಲದಲ್ಲಿ, ಆಂಧ್ರದ ...ದೆಂಡ್ಯ ಭಾಸ್ಕರರಾವ್ ಅನ್ನೋನು ಎಮ್ಮೆಲ್ಲೆ ಕಿಡ್ನಾಪ್ ...ಮಾಡಿದ್ದ. ಅಮ್ಯಾಲೆ ಮಹಾರಾಷ್ಟ್ರದ ದೇಶಮುಖನೂ ...ಮಾಡಿದ್ದ. ಹಿಂಗೆ ನಮ್ಮ ಅಕ್ಕಪಕ್ಕದೋರೂ ಮಾಡಿದ್ರು. ನಮ್ಮಲ್ಲಿ ಇಂತ ಕ್ಯಲಸವ ಬಾಳ ಚನ್ನಾಗಿ ಮಾಡಿದೋನು ಕುಮಾರಣ್ಣ. ಅವತ್ತೆ ಕರ್ನಾಟಕದ ವಿಧಾನಸಭೆ ಪಂಚಾತಿ ಲೆವೆಲ್ಲಿಗೆ ಇಳದದ್ದು."

"ಇನ್ನೊಂದು ತಮಾಸಿ ಗೊತ್ತೆ? ಚಂದ್ರನೆದ್ದಿ ನನ್ನನ್ನೆ ಅಧ್ಯಕ್ಷೆ ಮಾಡಿ ಅಂತ ಕುಂತವಳಂತೆ. ಇದಕ್ಕೇನೇಳ್ತಿರೀ?" ಎಂದ ಉಗ್ರಿ.


"ಮಾಡೇ ಮಾಡ್ತರೆ ಕಣೊ ಉಗ್ರಿ. ಯಾಕೆ ಅಂದ್ರೆ ಅವುಳಿಗೆ ಓದಕ್ಕೆ ಬರಿಯಕ್ಕೆ ಬರದಿಲ್ಲ. ಇಡೀ ನಮ್ಮ ಕರ್ನಾಟಕದಲ್ಲಿ ಸಾವುರಾರು ಜನ ಪಂಚಾಯ್ತಿ ಅಧ್ಯಕ್ಷರು ಹೈದರಾಲಿ ರಿಲೇಶನ್‌ಗಳು ಗೊತ್ತೆ."

"ಅಂಗರೆ ಸಾಬರ ಜನವೇ ಜಾಸ್ತಿಯಿದ್ದರೇನ್ಲ?"

"ಸಾಬರ ಜನಲ್ಲ ಕಣಕ್ಕ ಯಬ್ಬೆಟ್ಟನೋರು. ಅಂತ ಹೈದಾಲಿನೂ ಯೆಬ್ಬೆಟ್ಟು ಗಿರಾಕಿ. ಆದ್ರು ಒಳ್ಳೆ ಆಡಳಿತಗಾರ. ಯಾಕಂದ್ರೆ ಯಬ್ಬೆಟ್ಟಿನಲ್ಲೂ ಯರಡು ವಿಧಾನ ಅದೆ. ಒಂದು ಒಳ್ಳೆ ಹೆಬ್ಬೆಟ್ಟು, ಇನ್ನೊಂದು ಮೂರ್ಖ ಹೆಬ್ಬೆಟ್ಟು. ಈಗ ಕಿಡ್ನಾಪ್ ಆಗಿರೊ ಯಬ್ಬೆಟ್ಟು ಮೂರ್ಖತನದ ಪರಮಾವಧಿ ಯಬ್ಬೆಟ್ಟು. ಹುಡುಕಿದ್ರೆ ಅವಳು ಈಶ್ವರಪ್ಪನಿಗೂ ರಿಲೇಶನ್ ಆಗಬಹುದು."

"ಅಂಗರೆ ಈಶ್ವರಪ್ಪನ ಸಮಂದಿನೆ ಅವುಳು?"

"ಸಮಂದ ಯಂತದು ಅಂದ್ರೇ ಗೋಲ್ಡ ರಿಲೇಶನ್ನ



ಕಣಕ್ಕ. ಈಶ್ವರಪ್ಪ ಎಮ್ಮೆಲ್ಲೆ ಆದಮ್ಯಾಲೆ ನಾಕು ಬೆಟ್ಟಿಗೂ ಉಂಗರ ಹಾಯ್ಕಂಡ. ಇವಳು ಪಂಚಾಯ್ತಿ ಮೆಂಬರಾದ ಮ್ಯಾಲೆ ಮೂರುಂಗುರ ಮಾಡಿಸಿ ಹಾಯ್ಕಂಡ್ಳು. ಸಾಮಾನ್ಯವಾಗಿ ಪುಟಗೋಸಿ ರಾಜಕಾರಣಿಗಳಿಗೆ ಅಧಿಕಾರ ಬಂದೇಟಿಗೆ ಆಂಕಾರ ಬತ್ತದೆ. ಆಸ್ತಿ ಮಾಡ್ತವೆ, ಸಿಗಾಯ್ಕತ್ತವೆ."

"ಈಶ್ವರಪ್ಪುನ್ನ ಹಿಡದಾಕಿದರಂತಲ್ಲೊ? ಬೇಕಾದೊಟು ಚಿನ್ನ, ಒಡವೆ, ದುಡ್ಡು ಕಾಸು ಸಿಕ್ಕಿದ್ದತಂತೆ. ನಿಜವೆ?"

"ನಿಜವಾದ ಮಾಲು ಸಿಕ್ಕಿಲ್ಲ ಕಣೊ ಉಗ್ರಿ. ನನ್ನ ಅಂದಾಜಿನ ಪ್ರಕಾರ ಕೋಟಿಗಳೇ ಸಿಗಬೇಕಿತ್ತು. ಆದ್ರೆ ಸಿಕ್ಕಿರೊ ಮಾಲೆಷ್ಟು ಅಂದ್ರೆ, ಅದ್ಕೆ ಈಶ್ವರಪ್ಪ ಸಾಕ್ಷಿ ಒದಗ್ಸತ್ತಾನೆ. ಆದ್ಕೆ ಅವುನು ನನ್ನ ಮ್ಯಾಗಲ ರೈಡಿಂದ ಬಾಳ ಸಂತೋಸಾಗ್ಯದೆ ಅಂದಿರದು."

"ಸಂತೋಸಾಗ್ಯದೆ ಅಂದಿದ್ದನೆ?"

"ಊ ಮತ್ತೆ ಇಡೀ ಹಸ್ತನೆ ಹಿಡಿಯದು ಬುಟ್ಟು ಬೆಳ್ಳಿಡಕಂಡ್ರೆ, ನಗದಿಲವೆ ಅವುನು. ಈಗಿಡದಿರೊ ಮಾಲಿಗೆ ಲ್ಯಕ್ಕ ಕೊಡ್ತನೆ, ತಪ್ಪಿಸಿಗತ್ತನೆ. ಆದ್ಕೆ ಅವುನು ನಗಾಡಿರದು. ಅವುನು ಯಾವ ತರದ ಕುರುಬರೋನು ಅನ್ನಕಂಡಿದ್ದಿರಿ ನೀವು?"

"ಯಾವ ತರದೋನು ನೀನೆ ಹೇಳೊ ನಮಿಗೆ ಗೊತ್ತಿಲ್ಲ."

"ಅವುನು ಮಾಜಿ ಬಳ್ಳಾರಿ ಪ್ರಜೆ. ಆದ್ರಿಂದ ರೆಡ್ಡಿ ರಾಮುಲು ಗುಣಗಳು ಅವೆ. ಶಿವಮೊಗ್ಗದಲ್ಲಿ ಬ್ರಾಹ್ಮಣರು ಮತ್ತು ಲಿಂಗಾಯತರ ಜೊತೆ ರಾಜಕಾರಣ ಮಾಡಬೇಕಾಗ್ರಿಂದ, ಆ ಜನಾಂಗದ ಗುಣಗಳೂ ಅವೆ. ಜೊತೆಗೆ ಒಂದು ಖಾಕಿ ಚೆಡ್ಡಿ, ಬಿದುರು ದೊಣ್ಣೆನೂ ಮನೆಲದೆ. ಇದೊ ಮೋಸ್ಟು ಡೈನ್‌ಜರೆಸ್ ವೆಪನ್ನು. ಆಮೇಲೆ ಅವರ ಜಗದ್ಗುರು ಪೇಜಾವರ ಸ್ವಾಮಿ. ಆದ್ದರಿಂದ ಈಶ್ವರಪ್ಪ ಎಡೂರಪ್ಪನಿಗಿಂತ್ಲೂ ಅಪಾಯಕಾರಿ ಮನ್ಸ. ಆದ್ರು ಒಂದು ಸಂತೋಸದ ಸಮಾಚಾರ ಏನಪ್ಪ ಅಂದ್ರೆ, ಅವುನು ಇಂತ ಸರಕಾರದಲ್ಲಿ ಮಂತ್ರಿಯಾಗಿದ್ದು ಕಂಡು, ಉಪಮುಖ್ಯಮಂತ್ರಿಯಾಗಿ, ಪಾರ್ಟಿ ಪ್ರೆಸಿಡೆಂಟಾಗಿದ್ರೂ ಕೂಡ ಅವುನ ಮೇಲೆ ರೈಡಾಯ್ತಲ್ಲ ಇದಕ್ಕಿಂತ ಒಳ್ಳೆ ಸುದ್ದಿ ಇಲ್ಲ ಕಣೊ ಉಗ್ರಿ."

"ಅಂಗರೆ ಜೈಲಿಗೊಯ್ತನೇನ್ಲ ಅವುನು?"

"ಅಂಥಾ ಎಡೂರಪ್ಪನೇ ಹೋಗಿಬಂದ ಮ್ಯಾಲೆ ಇವುನದ್ಯಾವ ಲೆಕ್ಕ. ಅಕಸ್ಮಾತ್ ಹೋದ್ರೂ ಅವುಮಾನೇನೂ ಆಗದಿಲ್ಲ, ಪಿತೂರಿಯಿಂದ ಒಳಗೋದೆ ಅನ್ನಕಂಡೇ ಬತ್ತರೆ. ಯಾಕಂದ್ರೆ ಈಶ್ವರಪ್ಪನೂ ಈ ಎಡೂರಪ್ಪನ ಗರಿಡಿಲೇ ಬೆಳದೊನು."

"ಎಡೂರಪ್ಪ ವಿಧಾನಸಭೆಗೆ ನುಗ್ಗಕ್ಕೊಗಿದ್ನಂತೆ ನಿಜವೆ?" ಎಂದ ಸೀರ.

"ಊ ಚಿಗಪ್ಪ, ಕಂಪನಿ ಸುರುಮಾಡಿದ ಮ್ಯಾಲೆ ನಾಟಕ ಆಡ್ತಾಯಿರಬೇಕಾಯ್ತದೆ. ಇಲ್ಲ ಅಂದ್ರೆ ಕಲಾನಿಧಿಗಳು ಬೇರೆ ಕಂಪನಿ ಹುಡಿಕ್ಯಂಡು ಒಂಟೋಯ್ತದೆ. ಯಾಕಂದ್ರೆ ಆ ಕಡೆ ದೇವು ಕಂಪನಿ ಅದೆ. ಈ ಕಡೆ ರೆಡ್ಡಿ ರಾಮುಲು ಕಂಪನಿ ಅದೆ. ಕಾಂಗ್ರೆ ಕಂಪನಿಯಂತೂ ಸ್ಟ್ರಾಂಗಾಗ್ಯದೆ. ಇಂತ ಟೈಮಲ್ಲಿ ಎಡೂರಪ್ಪ ಸುಮ್ಮನಿರಕ್ಕಾಗದಿಲ್ಲ, ಆದ್ರಿಂದ ವಿಧಾನಸೌಧಕ್ಕೆ ಮುತ್ತಿಗೆ ಹಾಕಿದ್ದ."

"ಅಂತ ನಾಟಕ ಮಾಡದಕಿಂತ ತನ್ನ ಕಡೆ ಶಾಸಕರು ಹೋಗಿ ರಾಜ್ಯಪಾಲರಿಗೆ ರಾಜಿನಾಮೆ ಕೊಟ್ಟರಾಯ್ತಪ್ಪ, ಶೆಟ್ರು ಚಟ್ಟ ರಡಿಯಾಗೋಯ್ತದೆ."

"ಅದು ಯಾರಿಗೂ ಬೇಕಿಲ್ಲ ಕಣೊ ಉಗ್ರಿ. ಅವುರಂಗೇ ಇರಬೇಕು, ಇವುನು ಹಿಂಗೇ ಇರಬೇಕು. ಅಂತ ನಾಟಕ ಈಗ ನ್ಯಡಿತಾಯಿರೊದು. ಇದೇನು ಹೊಸದಲ್ಲ, ಆಗ ಹೆಗಡೆ ವಿರುದ್ಧ ದ್ಯಾವೇಗೌಡ್ರು ಆಡಿದ್ದ ನಾಟಕನೆ ಎಡೂರಪ್ಪ ಆಡ್ತಾಯಿರದು."

"ದ್ಯಾವೇಗೌಡರ್‍ಯಾಕೊ ಸುಮ್ಮನಾದರಲ್ಲಾ, ಮಗ್ಗಲು ಕೊಟ್ರೊ ಯಂಗೆ?"

"ಇದೇನು ಚಿಗಪ್ಪ ಹಿಂಗಂತಿ? ಅವುರಾಗ್ಲೆ ರಾಯಚೂರು ಕಡಿಂದ ಥರ್ಮಲ್ ಚಾರ್ಜ್ ತಗಂಡಂಗೆ ಬತ್ತಾ ಅವ್ರುರೆ. ಇವತ್ತಿಗೂ ನಮ್ಮ ಕಾಳದೊಡಪ್ಪ ಆರುಕಟ್ಟಿ ಕೊಟ್ರೆ ಯಂಗೆ ವಲಹುಳತನೋ, ಅದೇತರ ಗೌಡ್ರು ಕರ್ನಾಟಕನೆ ಉತ್ತಕಂಡು ಬತ್ತಾವ್ರೆ. ಯಾಕಪ್ಪ ಅಂದ್ರೆ ಮಕ್ಕಳ ಪವರ್‌ಗೆ ತರಬೇಕು. ಮಕ್ಕಳು ಅಂದ್ರೆ ಅಷ್ಟೊಂದು ಇಷ್ಟ ಅವ್ರಿಗೆ."

"ಅವುರಿಗೇನೊ ಆರೇಳು ಮಕ್ಕಳವೆ. ಅಮೆರಿಕದಲ್ಲಿ ಒಬ್ಬೊಬ್ಬರಿಗೆ ಒಂದೊಂದೇ ಮಗುವಂತೆ. ಅಂತದ್ರಲ್ಲಿ ಯಾವುದೊ ತಲಿಕೆಟ್ಟ ಮುಂಡೆದು ಇಸುಗೂಲಿಗೆ ನುಗ್ಗಿ ಇಪ್ಪತ್ತು ಮುವ್ವತ್ತು ಮಕ್ಕಳ ಸಾಯಿಸಿದನಂತಲ್ಲಾ ಆ ಮಕ್ಕಳ ಅಪ್ಪಾ ಅವ್ವ ಕತೆಯೇಳು" ಎಂದ ಉಗ್ರಿ.

"ಅಯ್ಯೋ, ಅದಕೆ ಮಲ್ಲಾಗರು ಬರ. ಅದ್ಯಾಕ್ಲ ಅಂಗೆ ಸಾಯಿಸ್ತು" ಎಂದಳು ಜುಮ್ಮಿ.

"ಅಮೆರಿಕದಲ್ಲಿ ಒಂದೊಂದು ಸಥಿ ಅಂತ ಕಾಯಲ ಮಕ್ಕಳಲ್ಲಿ ಕಾಣಸಿಗತ್ತೆ ಕಣಕ್ಕ. ಅದೊಂತರ ದೇಶ. ಮಕ್ಕಳಿಗೆ ಎಷ್ಟು ಸ್ವತಂತ್ರ ಕೊಟ್ಟದೆ ಅಂದ್ರೆ, ಮಕ್ಕಳಿಗೆ ಮಡುದ್ರೆ ಪೊಲೀಸ್‌ನೋರಿಗೆ ಫೋನು ಮಾಡಿ ಅಪ್ಪನ್ನೆ ಒಳಗಾಕುಸಬವುದು. ಅಷ್ಟೆ ಅಲ್ಲ ಅವ್ವನ್ನೂ ಜೈಲಿಗಾಕಸಬವುದು."

"ಅಂಥಾ ದೇಸವೇನ್ಲ ಅದು?"

"ಊ ಕಣಕ್ಕ. ನೀನು ಮಕ್ಕಳ ಜೊತೆ ಮನಿಕಂಡು ಅವುರ ಪಟ್ಟೆ ಸವುರತ ಕತೆ ಹೇಳತಿ. ಅಲ್ಲಿ ಅವುಡಗರ ಬ್ಯಾರೆ ರೂಮಲ್ಲಿ ಮನುಗುಸ್ತರೆ. ಆ ಮಕ್ಕಳಿಗೆ ಯಂತ ಸಮಸ್ಯೆ ಇರತದೆ ಅಂದ್ರೆ ಅವು ಅರ್ಧ ತಬ್ಬಲಿಗಳಾಗಿರತವೆ."

"ಅರ್ಧ ತಬ್ಬಲಿ ಅಂದ್ರೆ ಯಂಗಲಾ?"

"ಒಂದುಡಗನಿಗೆ ಅವ್ವ ಇರತಳೆ. ಅಪ್ಪ ಡೈವರ್ಸ್ ತಗಂಡೊ ಇನ್ಯಾವಳ ಜೊತೆನೊ ಇರತನೆ. ಇಲ್ಲ ಅವ್ವ ಆಗ್ಲೆ ಬೇರೆ ಮಬ್ಬನ ಜೊತೆ ಇರತಳೆ. ಅಲ್ಲಿ ತಾಯಿ ಪ್ರೀತಿ ಇರತದೆ, ತಂದೆ ಪ್ರೀತಿ ಸಿಗದಿಲ್ಲ, ತಂದೆ ಜಾಗದಲ್ಲಿ ಇನ್ಯಾರೊ ಇದ್ದಕಂಡು, ಅವ್ವನ ಜೊತೆ ಮನಿಕತ್ತನೆ. ಅದ ಸಯಿಸಿಗಳೊ ಮಕ್ಕಳಾದ್ರೆ ಸರಿ. ಇಲ್ಲ ಈ ಉಗ್ರಿ ಅಂತವಾದ್ರೆ ಇಂತ ಹತ್ಯೆ ನ್ಯಡದೋಯ್ತದೆ. ಅದಕಿಂತ್ಲೂ ಆ ಅಮೆರಿಕದ ನನ್ನ ಮಕ್ಕಳು, ಮಕ್ಕಳಿಗೆ ಆಟ ಆಡಕ್ಕೆ ಕೊಡೊ ಸಾಮಾನು ಪಿಸ್ತೂಲು, ಗನ್ನು, ಮೆಶಿನ್‌ಗನ್ನು, ಟ್ಯಾಕರ್ರು. ಬರಿ ಇಂತವುನೆಯಾ. ಇನ್ನ ತಗಿಯೋ ಸಿನುಮನೂ ಅಂತವೆಯಾ. ಈ ತರ ಇರುವಾಗ ಮಕ್ಕಳು ಕಸಬ್ ತರ ಆಗಿಬುಡ್ತವೆ."

"ನಾವು ಮಕ್ಕಳ ಜೊತೆ ಮಕ್ಕಳಾಗಿದ್ರೆ ಹಿಂಗಾಗೊಲ್ಲ ಕಣೊ" ಎಂದ ಉಗ್ರಿ.

"ಏನೇ ಆಗ್ಲಿ, ನಮ್ಮ ಮಕ್ಕಳೇ ಸರಿ ಕಂಡ್ಯ" ಎಂದ ಕಾಳಮಾವ.

"ಇಷ್ಟು ದಿನಕಾರ ನನ್ನನ್ನ ಒಪ್ಪಿಗಂಡಲ್ಲ ದೊಡ್ಡಪ್ಪ, ಅಷ್ಟೇ ಸಾಕು. ಬುಡು ನಾವು ಕುಡಿಬವುದು, ಪಾನ್‌ಪರಾಗ್ ತಿನ್ನಬವುದು, ವಲ್ಗರ್ ಮಾತಾಡಬಹುದು. ಆದ್ರೆ ಜೀವ ತಗಿಯೋ ಕ್ಯಲಸ ಮಾಡದಿಲ್ಲ."


"ಕಾಳಮಾವ ಹೇಳಿದ್ದು ಮಕ್ಕಳಿಗೆ ಕಂಡ್ಯ, ನಿನಿಗಲ್ಲ!!" ●

ಗ್ರಹಿಕೆಯ ಮುಖ

'ಚಲಿಸುವ ಬೆರಳು ಬರೆಯುತ್ತದೆ, ಬರೆದು ಮುಂದೆ ಸಾಗುತ್ತದೆ' ಎಂದು ಬರೆದ ಉಮರ್‌ಖಯ್ಯಾಮ್ ಕೋಟ್ಯಂತರ ವರ್ಷಗಳ ಮನುಷ್ಯನ ಜೀವನದ ನಿರರ್ಥಕತೆಯನ್ನು ಹೇಳಲು ಯತ್ನಿಸಿದ. ಮನುಷ್ಯನ ಬದುಕು ಅಂಥ ಅರ್ಥದಿಂದ ಕೂಡಿರಲು ಸಾಧ್ಯವಿಲ್ಲ ಎನ್ನಿಸುವುದು ಯಾಕೆಂದರೆ, ಆತ ಸದಾ ತನ್ನ ಜೀವನದ ಅರ್ಥಪೂರ್ಣತೆಯ ಬಗ್ಗೆ ಕೊಚ್ಚಿಕೊಳ್ಳುತ್ತಿರುತ್ತಾನೆ. ಅವನ ಹುಂಬತನವನ್ನು ನೋಡಿದಷ್ಟೂ ಆತನ ಪ್ರತಿಭೆಯ, ಜಾಣತನದ, ಸಾಧನೆಯ ಶೂನ್ಯತೆಯೇ ನನ್ನಂಥವರನ್ನು ಕಾಡತೊಡಗುತ್ತದೆ. ಈ ಸಾಲುಗಳನ್ನು ನಾನು ಬರೆಯುತ್ತಿದ್ದಾಗಲೇ ಯೋಗಪ್ಪನವರ್ ಕಳಿಸಿದ 'ಕ್ಯಾಮರಾ ಲ್ಯೂಸಿಡಾ' ಎಂಬ ಪುಸ್ತಕ ನನ್ನ ಗಮನ ಸೆಳೆಯುತ್ತಿದೆ. ಇದರ ಹಾಳೆಗಳನ್ನು ತಿರುವುತ್ತಿದ್ದಾಗ ಕ್ಯಾಮರಾದ ಯಕ್ಷಿಣಿ ನನ್ನನ್ನು ವಿಸ್ಮಯಗೊಳಿಸುತ್ತಿದೆ. ನಾನು ಸಿನಿಮಾ ಕೂಡ ತೆಗೆದವನು ಎನ್ನುವುದು ನಿಮಗೆ ಗೊತ್ತಿರಬಹುದು; ಮೂವಿ ಕ್ಯಾಮರಾದ ಲಾಂಗ್‌ಶಾಟ್, ಮಿಡ್‌ಶಾಟ್, ಕ್ಲೋಸಪ್‌ಗಳು ಕೇವಲ ಒಂದೆರಡೇ ಗಂಟೆಗಳಲ್ಲಿ ಒಬ್ಬ ನಟಿಯ ಆತ್ಮವನ್ನು ಬಿಚ್ಚಿಡುವುದು ನನ್ನನ್ನು ಬೆರಗುಗೊಳಿಸಿದ ಅನೇಕ ಅಂಶಗಳಲ್ಲಿ ಒಂದು. ಹಾಗೆಯೇ ಈ ಕ್ಯಾಮರಾ ಮತ್ತು ಫೋಟೋಗ್ರಫಿ. ನಾನೆಂದೂ ಫೋಟೋಗ್ರಾಫರ್ ಎಂದು ಹೇಳಿಕೊಂಡಿಲ್ಲ; ಮತ್ತು ನಾನು ತೆಗೆದ ಫೋಟೋಗಳನ್ನು ಬಚ್ಚಿಟ್ಟುಕೊಂಡುಬಿಡುತ್ತೇನೆ. ಸುಮಾರು ಹದಿನೈದು ವರ್ಷಗಳ ಹಿಂದೆ ಒಂದು ಒಳ್ಳೆಯ ಕ್ಯಾಮರಾ ಕೊಂಡುಕೊಂಡು ಪ್ರಯಾಣ ಮಾಡುವಾಗಲೆಲ್ಲ ಫೋಟೋ ತೆಗೆಯುತ್ತಿದ್ದೆ. ರೈತರು, ಭಿಕ್ಷುಕರು, ನಾಯಿ, ಹಸು, ದೇವಸ್ಥಾನಗಳು– ಆಗ ಬಹಳ ಎಕ್ಸ್‌ಪರ್ಟ್ ರೀತಿಯಲ್ಲಿ ಜೂಮ್‌ಲೆನ್ಸ್, ಟೆಲಿ ಲೆನ್ಸ್, ವೈಡ್ ಆಂಗಲ್ ಲೆನ್ಸ್ ಮುಂತಾದವನ್ನು ಬಳಸಿ, ಅಪರ್ಚರ್ ಎಂದರೆ ಏನೆಂದು ಅಭ್ಯಾಸ ಮಾಡಿ ಅನೇಕ ಗಂಟೆಗಳ ಕಾಲ ಕಪ್ಪುಬಿಳುಪು ಫೋಟೋಗಳನ್ನು ಪ್ರಿಂಟ್ ಮಾಡಲು ಯತ್ನಿಸಿದೆ. ಅಷ್ಟೇ ಬೇಗ ಆ ಅಭ್ಯಾಸ ನನ್ನ ಅನೇಕ ಕೆಲಸಗಳ ಮಧ್ಯೆ ಹೊರಟುಹೋಯಿತು. ಕ್ಯಾಮರಾ ಕೂಡ ಎಲ್ಲೋ ಹೋಯಿತು. ನಾನು ತೆಗೆದ ಚಿತ್ರಗಳೂ ಕಳೆದುಹೋದವು. ಈಚೆಗೆ ಫೋಟೋಗ್ರಾಫರ್ ಒಬ್ಬ ನನ್ನನ್ನು ನಿಮಿಷಗಳವರೆಗೆ ಗೊತ್ತಿದಂತೆ ಸಿಬ್ಬಿಸಿ, ಫೋಟೋ ತೆಗೆದ. ನನ್ನಲ್ಲಿರಬಹುದಾದ charm, ಚಂಚಲತೆ, ಜಾಣತನ ಮುಂತಾದವು ಒಂದೂ ಅವರ ಫೋಟೋದಲ್ಲಿ ಕಾಣಲಿಲ್ಲ, ನಾಲ್ಕೈದು ವರ್ಷಗಳ ಹಿಂದೆ ಕೊಂಡುಕೊಂಡು ಒಂದು ಸಲವೂ ನಾನು ಬಳಸದೆ ಇದ್ದ ಕ್ಯಾಮರಾ ಎತ್ತಿಕೊಂಡು ನೋಡಿದೆ. ಎಲ್ಲ ಮರೆತುಹೋಗಿತ್ತು, ಫಿಲಂರೋಲನ್ನು ಲೋಡ್ ಮಾಡುವುದು, ತೆಗೆಯುವುದು ಕೂಡ ಮರೆತಿರುವುದನ್ನು ಕಂಡು ಬೆಚ್ಚಿ ಫಿಲಂ ಮತ್ತು ಕ್ಯಾಮರಾವನ್ನು ಸ್ಟುಡಿಯೋಗೆ ಕಳಿಸಿ ಲೋಡ್ ಮಾಡಿಸಿದೆ. ಅನ್‌ಲೋಡ್ ಮಾಡಲೂ ಭಯವಾಗಿ ಸ್ಟುಡಿಯೋಗೆ ಕಳಿಸಿ ಪ್ರೋಸೆಸ್ ಮಾಡಿಸಿ ಪ್ರಿಂಟ್ ಮಾಡಿಸಿದೆ. ಇಷ್ಟೆಲ್ಲ ಆದರೂ ನಾನು ತೆಗೆಯಲೇಬೇಕೆಂದಿದ್ದ ವ್ಯಕ್ತಿಗಳ ಮುಖ, ಅವರ ಭಾವನೆ, ವೈಶಿಷ್ಟ್ಯ ಇವುಗಳಿಗೆ ನಾನು ಸ್ಪಂದಿಸುವುದನ್ನು ಮರೆತಿರಲಿಲ್ಲ. ಬೇಕೆಂತಲೇ ಖ್ಯಾತ ಫೋಟೋಗ್ರಾಫರ್‌ನಿಂದ ಒಂದು ವ್ಯಕ್ತಿಯ ಫೋಟೋ ತೆಗೆಸಿ ನಾನು ನನ್ನದೇ ಆದ ರೀತಿಯಲ್ಲಿ ತೆಗೆದೆ. ಆತನಿಗೆ ನಾನು ತೆಗೆದದ್ದು ನೋಡಿ ಆಶ್ಚರ್ಯವಾಯಿತು. ಅವನಿಗೆ ಬೆಳಕು, ಭಾವನೆ, ಫ್ರೇಮಿಂಗ್ ಮತ್ತು ಎಲ್ಲ ಕಲೆಗೆ ಬೇಕಾದ ಕಾಳಜಿಯ ಬಗ್ಗೆ ಗೊಣಗಿದೆ. "ಪ್ರೀತಿ ಇರಬೇಕು, ಕೊನೇಪಕ್ಷ ದ್ವೇಷವಾದರೂ..." ಅಂದೆ.



ಈ ನನ್ನ ಪುಟ್ಟ ಟಿಪ್ಪಣಿಯ ಜೊತೆಗೆ ಯೋಗಪ್ಪನವರ ಕಾಗದದ ಸಾಲುಗಳನ್ನು ಕಾಣಿಸುವೆ: "ನೀವು ಮತ್ತೆ ಯಾವಾಗಾದರೂ ಫೋಟೋಗ್ರಫಿಯ ಬಗ್ಗೆ ಬರೆದಾಗ Roland Barthes ನ Camera Lucida ಪುಸ್ತಕದ ಪುಟ 114 ರಲ್ಲಿಯ ಭಾವಚಿತ್ರವನ್ನು ಉಪಯೋಗಿಸಬೇಕೆನ್ನುವುದು ನನ್ನ ಆಶೆಯಾಗಿದೆ. ಆ ಪುಸ್ತಕವನ್ನು ಈ ಪತ್ರದ ಜೊತೆಗೆ ಕಳುಹಿಸಿಕೊಟ್ಟಿದ್ದೇನೆ" ಎಂದು ಯೋಗಪ್ಪ ಬರೆದಿದ್ದಾರೆ. ಆ ಪುಸ್ತಕದ 114ನೇ ಪುಟದಲ್ಲಿರುವ ಅದ್ಭುತ ಪದ್ಯದಂತಿರುವ ನಾಲ್ಕು ಸಾಲುಗಳು ನಿಮಗೆ ಇಷ್ಟವಾಗಬಹುದು:




"He is looking nothing;
he retains within himself
his love and his fear:
that is the Look...

● ಏಪ್ರಿಲ್ 22, 1998

ಮುಟ್ಟಿನ ರಜೆ!

ಬಾಲ್ಯದಲ್ಲಿ 'ಮುಟ್ಟು' ಎಂದರೆ 'ಸ್ಪರ್ಶ' ಎಂದಷ್ಟೆ ತಿಳಿದಿದ್ದೆ. ಕಾಲಾನಂತರ 'ಮುಟ್ಟು'. ಅಂದರೆ ಮುಟ್ಟಬೇಡ ಎಂಬ ನಿಷೇದಾರ್ಥವೂ ಇದೆ ಎಂಬುದು ತಿಳಿಯಿತು. ಮೈಸೂರು ಮಲ್ಲಿಗೆಯಲ್ಲಿ ಕೆ.ಎಸ್.ನರಸಿಂಹಸ್ವಾಮಿಯವರ ರಾಯರು ದೂರದ ಊರಿಂದ ಏದುತ ಇಳಿಯುತ ರಾತ್ರಿ ವೇಳೆಗೆ, ಸುಂದರ ಸ್ವಪ್ನಗಳನ್ನು ಕಾಣುತ್ತ ಮಾವನ ಮನೆಗೆ ಬಂದಾಗ 'ಪದುಮಳು ಒಳಗಿಲ್ಲ' ಎಂಬ ಮಾತುಗಳನ್ನು ಕೇಳಿ ಭಯಂಕರ ನಿರಾಶೆಯಾಗಿರಬೇಕು. ಈಗಿನವರಿಗೆ ರಾಯರ ಸಂಕಟ ಅರ್ಥ ಆಗಲಾರದು. ಅರವತ್ತು ಎಪ್ಪತ್ತು ವರ್ಷಗಳ ಹಿಂದೆ ಗೃಹಿಣಿ ಚಾಪೆ, ಚೊಂಬಿನೊಂದಿಗೆ ಮನೆಯ ಮೂಲೆ ಸೇರಿದರೆಂದರೆ ಹೊರಗೆ ಆಗಿದ್ದಾರೆ ಎಂಬುದು ಜಗಜ್ಜಾಹೀರು ಆಗುತ್ತಿತ್ತು, ಈಗ ಅಂತಹ ದೃಶ್ಯಗಳೇ ಅಪರೂಪ. ಜನರೂ ಸುಧಾರಿಸಿದ್ದಾರೆ. ಮುಟ್ಟನ್ನು ಕುರಿತಂತೆ ಅಜ್ಞಾನ ಕಡಿಮೆ ಆಗಿದೆ. ಆದರೂ ಕೆಲವು ಕಡೆ ಇನ್ನೂ ಅದು ತನ್ನ ಬೇರುಗಳನ್ನು ಹಾಗೇ ಬಿಟ್ಟುಕೊಂಡಿದೆ.



ದೇವಸ್ಥಾನಗಳು ಪವಿತ್ರ ಸ್ಥಳಗಳು. ಅವುಗಳನ್ನು ಸ್ವಚ್ಛವಾಗಿ ಇಟ್ಟುಕೊಳ್ಳಬೇಕು. ಅಲ್ಲಿಗೆ ಹೋಗುವವರ ಮನಸ್ಸು, ದೇಹ ಶುದ್ಧವಾಗಿರಬೇಕು. ಮುಟ್ಟು ಅಂದರೆ ಮೈಲಿಗೆ. ಹೀಗಾದ ಮಹಿಳೆ ದೇವಸ್ಥಾನ ಪ್ರವೇಶಿಸಿದರೆ ಅದೂ ಅಪವಿತ್ರವಾಗುತ್ತದೆ. ಇದು ಬಹಳಷ್ಟು ಆಸ್ತಿಕ ಮಹಾಶಯರನ್ನು ಕಾಡುವ ಸಂಗತಿ. ಆದರೆ ಮುಟ್ಟಾದ ಹೆಂಗಸರನ್ನು ಗುರುತಿಸುವುದು ಹೇಗೆ? ಇಂತಹ ಹೊಲಸು ಹೆಂಗುಸು ದೇವಾಲಯ ಪ್ರವೇಶಿಸಿದರೆ ಭಗವಂತನಿಗೆ ಕೋಪ ಬರುವುದಿಲ್ಲವೆ? ತನ್ನ ಕೋಪವನ್ನು ಭಕ್ತರ ಮೇಲೆ ತೋರಿಸಿಕೊಳ್ಳದೆ ಇರುತ್ತಾನೆಯೆ? ಎಂಬುದೆಲ್ಲರ ಭಯದಿಂದ ಕೆಲವು ದೇವಸ್ಥಾನಗಳಿಗೆ ಮಹಿಳೆಯರ ಪ್ರವೇಶ ನಿಷೇಧಿಸಲಾಗಿದೆ. ಎಲ್ಲ ದೇವಸ್ಥಾನಗಳಲ್ಲೂ ಈ ವ್ಯವಸ್ಥೆ ಇಲ್ಲ. ಆದರೂ ಮುಟ್ಟಾದವರು ದೇವಾಲಯ ಪ್ರವೇಶಿಸುವುದಿಲ್ಲ, ಹಾಗೇನಾದರೂ ಪ್ರವೇಶಿಸಿದರೆ ಭಗವಂತನ ಕೋಪಕ್ಕೆ ಗುರಿಯಾಗಬೇಕೆಂಬ ಭಯ ಅವರನ್ನು ಕಾಡುತ್ತದೆ. ನಮ್ಮ ಮನೆಯ ಬಳಿ ಓರ್ವ ಮಹಿಳೆ ಇದ್ದಾರೆ. ಅವರಿಗೊಂದು ಆಸೆ ಇತ್ತು, ಸಾಯುವುದರೊಳಗೆ ಕಾಶಿ ವಿಶ್ವನಾಥನ ದರ್ಶನ ಮಾಡಬೇಕು ಎಂಬುದು. ಅಂತಹ ಅನುಕೂಲ ಇರಲಿಲ್ಲ. ಸಮಯಕ್ಕಾಗಿ ಕಾಯ್ದರು. ಯಾವುದೋ 'ಸಾಮೂಹಿಕ ಯಾತ್ರೆ'ಯಲ್ಲಿ ಅವಕಾಶ ದೊರೆಯಿತು. ಕಾಶಿಗೆ ತಲುಪಿದರು. ವಿಶ್ವನಾಥನ ದರ್ಶನಕ್ಕೆ ಹೋಗಬೇಕು. ಎಲ್ಲ ಸಿದ್ಧತೆಗಳೂ ನಡೆದಿದ್ದವು. ಅಷ್ಟರಲ್ಲಿ ಅವರ ತೊಡೆಗಳು ಒದ್ದೆಯಾದ ಅನುಭವ. ಮಂಕಾದರು. ಅವರು ಮುಟ್ಟಾಗಿದ್ದರು! ಜನರ ನೂಕುನುಗ್ಗಲು. ನಿರ್ಭಯ, ನಿಸ್ಸಂಕೋಚವಾಗಿ ಭಗವಂತನ ದರ್ಶನ ಮಾಡಿಬರಬಹುದಾಗಿತ್ತು. ದೇವರದರ್ಶನಕ್ಕಿಂತ ದೇವಾಲಯದ ಪಾವಿತ್ರ್ಯ ಆಕೆಗೆ ಮುಖ್ಯ ಆಗಿತ್ತು. ತನ್ನೊಬ್ಬಳ ಪ್ರವೇಶದಿಂದ ಇಡೀ ದೇವಾಲಯ ಅಪವಿತ್ರ ಆಗುವುದನ್ನು ಬಯಸಲಿಲ್ಲ. ಆ ದಯಾಮಯನ ಇಚ್ಛೆಯೇ ಹೀಗಿರಬೇಕೆಂದುಕೊಂಡರು. ಜೀವಮಾನದ ಆಸೆ ಪೂರೈಸಲಾಗದೆ ಹಿಂತಿರುಗಿದರು.

ನಮ್ಮ ಊರಿನಲ್ಲಿ ಅಂಗನವಾಡಿ ಕೇಂದ್ರ ಇದೆ. ಅದು ದೇವಸ್ಥಾನದ ಒಳಗೆ ನಡೆಯುತ್ತಿತ್ತು, ಉತ್ತಮ ರೀತಿಯಲ್ಲೇ ನಡೆದುಕೊಂಡು ಬರುತ್ತಿತ್ತು. ಕಾರ್ಯಕರ್ತೆಯರು ಲವಲವಿಕೆಯಿಂದ ಇರುತ್ತಿದ್ದರು. ನನಗೆ ಒಂದು ಸಂಶಯ ಕಾಡಿತು. ಸಿಬ್ಬಂದಿ ಎಲ್ಲ ಮಹಿಳೆಯರು. ಮುಟ್ಟಾಗುವ ವಯಸ್ಸಿನವರು. ಕೆಲಸದ ದಿವಸಗಳಲ್ಲಿ ಇವರು ಮುಟ್ಟೇ ಆಗುವುದಿಲ್ಲವೆ? ರಜಾ ದಿನಗಳಲ್ಲಿ ಮಾತ್ರ ಮುಟ್ಟಾಗುತ್ತಾರೆಯೇ? ಇದು ಅಸಾಧ್ಯದ ಮಾತು. ಅಂದಮೇಲೆ ಇವರು ಮುಟ್ಟಾದ ದಿನಗಳಲ್ಲೂ ದೇವಾಲಯ ಪ್ರವೇಶಿಸಬೇಕು. ಆಗ ಅದಕ್ಕೆ ಮೈಲಿಗೆಯಾಗುತ್ತದೆ ಎಂಬ ಭಯ ಇವರನ್ನು ಕಾಡುತ್ತಿಲ್ಲವೆ? ಅಥವಾ ವಿಜ್ಞಾನ ಇದೊಂದು ನೈಸರ್ಗಿಕ ಕ್ರಿಯೆ, ಪಾವಿತ್ರ್ಯತೆಯ ಪ್ರಶ್ನೆ ಯಾವುದೂ ಇಲ್ಲ ಎಂದು ಹೇಳಿರುವುದನ್ನು ನಂಬಿದ್ದಾರೆಯೇ? ಈ ಮಟ್ಟಿಗಾದರೂ ಸುಧಾರಣೆ ಆಗಿರುವುದು ಸಂತೋಷ ತಂದಿತು. ಇದೇ ಸತ್ಯವಾಗಿರಲಿ ಎಂದು ಮನಸ್ಸಿನಲ್ಲೇ ಹಾರೈಸುತ್ತ ಅಂಗನವಾಡಿ ಕಾರ್ಯಕರ್ತೆಯೊಬ್ಬರ ಎದುರು ನನ್ನ ಸಂಶಯವನ್ನು ಬಿಚ್ಚಿಟ್ಟೆ.

"ಮುಟ್ಟಾದಾಗಲೂ ಗುಡಿ ಒಳಕ್ಕೋಗೋದು ಪಾಪ ಅಲ್ವಾ ಸಾ."


"ಹಂಗಂತೀರಾ, ಹಂಗಾದಾಗ ಏನ್ಮಾಡ್ತೀರಿ?"

"ರಜ ಹಾಕ್ತಿವಿ ಸಾ."

"ಎಂಥ ರಜ?"

"ಮುಟ್ಟಿನ ರಜ ಸಾ!"

ನ್ಯಾಯದೇವತೆಗೆ ಜೈ



ಅಣಕ

• ಎಚ್.ಎಲ್.ಕೇಶವಮೂರ್ತಿ

ಕಷ್ಟದಲ್ಲಿರುವವರ ನೋವುನಲಿವು ವಿಚಾರಿಸಿ ಸಾಂತ್ವನ ಹೇಳಿದರೆ ಅವರಿಗೂ ಏನೋ ಒಂದು ರೀತಿಯ ಸಮಾಧಾನ ಆಗುತ್ತಲ್ವಾ. ಪಾಪ ಯಡ್ಯೂರಪ್ಪನವರು ಈಗ ಸಂಕಷ್ಟದಲ್ಲಿದ್ದಾರೆ ಅನ್ನಿಸಿತು. ಅವರಿಗೂ ಅದ ಮಾಡಿ ಬರಾನ ಅಂತ ಅವರ ಮನೆಗೆ ಹೋದೆ. ಮನೆಯಲ್ಲೇ ಇದ್ದರು. ದೇವರಪೂಜೆ ಮಾಡುತ್ತಿದ್ದರು. ಆಸ್ತಿಕ ಮನುಷ್ಯ. ತಾನು ಏನು ಒಳ್ಳೆಯದು ಕೆಟ್ಟದ್ದು ಮಾಡಿದ್ದರೂ ಅದು ನಾನು ಮಾಡಿದ್ದಲ್ಲ, ಆ ದಯಾಮಯ ಮಾಡಿಸಿದ್ದು ಎಂದು ನಂಬಿರೋರು. ಎಚ್ಚರವಾಗಿರುವ ಬಹಳ ಕಾಲ ಆತನ ಸನ್ನಿಧಿಯಲ್ಲೇ ಕಳೆಯುವುದು ಸಹಜವೇ ಆಗಿತ್ತು.

ಯಡ್ಯೂರಪ್ನೋರು ದೇಶದಲ್ಲಿರೋ ಎಲ್ಲಾ ದೇವಾಲಯಗಳನ್ನೂ ಸುತ್ತಿ ಬಂದಿರೋರು. ಯಾವ ಯಾವ ದೇವರ ತೂಕ ಎಷ್ಟು ಅಂತ ಅಳೆದು ಬಿಸಾಕಿರೋರು. ಮನೆಯಲ್ಲಿ ಯಾವ ದೇವರ ವಿಗ್ರಹ ಇಟ್ಟು ಪೂಜೆ ಮಾಡುತ್ತಿರಬಹುದು ಎಂಬ ಕುತೂಹಲ ಮೂಡಿತು. ದೇವರ ಮನೆಯ ಒಳಗೆ ಕಣ್ಣು ಹಾಯಿಸಿದೆ. ಕಣ್ಣಿಗೆ ಕಪ್ಪು ಬಟ್ಟೆ ಕಟ್ಟಿಕೊಂಡು ಕೈಯಲ್ಲಿ ತಕ್ಕಡಿ ಹಿಡಿದು ನಿಂತಿರುವ ನ್ಯಾಯದೇವತೆಯ ಬೃಹತ್ ವಿಗ್ರಹ ಕಣ್ಣಿಗೆ ಬಿಡಿಯಿತು. ಅದು ಬಿಟ್ಟರೆ ಮತ್ತೆ ಯಾವ ದೇವರ ವಿಗ್ರಹಗಳೂ ಇರಲಿಲ್ಲ! ನ್ಯಾಯದೇವತೆಗೆ ಈ ಪಾಟಿ ಅಭಿಮಾನ ಇಟ್ಟುಕೊಂಡರೆಂಬ ಅವರನ್ನು ಕಂಡು ಕುತೂಹಲ ಕೆರಳಿತು. ಹೊರಲಾರದಷ್ಟು ಆರೋಪಗಳ ಹೊರೆ ಅವರ ಮೇಲೆ ಅದಿಕಿಕೊಂಡಿದೆ. ಅಂತಹದ್ದರಲ್ಲಿ ನ್ಯಾಯದೇವತೆ ಆರಾಧಿಸುತ್ತಿದ್ದಾರಲ್ಲಾ, ಈ ಮನುಷ್ಯ ನಿರಪರಾಧಿಯೇ? ಅಥವ ನ್ಯಾಯದೇವತೆಯ ಮನಸ್ಸನ್ನು ಒಲಿಸಿಕೊಳ್ಳುವ ಪರಿಯೇ? ಗೊಂದಲ ಆಯಿತು. ಪೂಜೆ ಮುಗಿಯುವವರೆಗೆ ಕಾಯ್ದು ಕುಳಿತೆ. ಅಪ್ಪನವರು ಪೂಜೆ ಮುಗಿಸಿ ಬಂದರು. ಪ್ರಸನ್ನವದನರಾಗಿದ್ದರು. ನಾನು ನನ್ನ ಮನಸ್ಸಿನ ಗೊಂದಲ ವಿವರಿಸಿದೆ. ಅವರು 'ಈ ನ್ಯಾಯದೇವತೆಯ ಕೃಪೆಯಿಂದಲೇ ನಾನು ಇಷ್ಟು ನಿರಾಳವಾಗಿ ಇರುವುದು' ಎಂದರು.

"ಅಲ್ಲಾ ಸಾರ್ ಭ್ರಷ್ಟಾಚಾರ ಆರೋಪ ಹೊತ್ತು...."

"ಜೈಲು ಸೇರಿದ್ದೆ. ಈ ತಾಯಿ ದಯದಿಂದ ಜಾಮೀನು ಸಿಕ್ಕಿತು. ಈಗ ನಿಶ್ಚಿಂತನಾಗಿದ್ದೇನೆ."

"ನಿಶ್ಚಿಂತೆಯಿಂದ ಹೇಗಿರುತ್ತಿರಿ ಸಾರ್? ವಿಚಾರಣೆ ನಡೆಯುತ್ತೆ. ಅದನ್ನು ಎದುರಿಸಬೇಕಲ್ಲಾ."

"ವಿಚಾರಣೆ ನಡೆಯುತ್ತೆ. ಅದೇ ಶಿಕ್ಷೆ ಅಲ್ಲವಲ್ಲಾ. ತೀರ್ಪು ಬರುತ್ತಾ? ಬರುತ್ತೆ. ನೂರೆಂಟು ಅಡಚಣೆಗಳನ್ನು ದಾಟಿ ಅದು ಬರಬೇಕು. ಅದು ಬರುವುದು ಯಾವಾಗ... ಹಲವಾರು ದಶಕಗಳ ನಂತರ! ಎಲ್ಲಾ ನ್ಯಾಯದೇವತೆಯ ಕೃಪೆ" ಎನ್ನುತ್ತಾ ಎರಡೂ ಕೈಗಳನ್ನು ಎತ್ತಿ ಆ ದೇವಿಗೆ ನಮಸ್ಕರಿಸಿದರು.

ನ್ಯಾಯದೇವತೆಯ ಪೂಜೆ ಅರ್ಥಪೂರ್ಣ ಅನ್ನಿಸಿತು. ■

ಪ್ರಳಯಾಭಿಲಾಷಿಗಳ ಆಸ್ತಿ ಮೇಲೆ ಕಣ್ಣು ಹಾಕಬೇಡಿ ಹುಷಾರ್...

ನಿಮ್ಮ ಗೌರಿ ಮೇಡಮ್ ಹಾಗು ಇತರ ಸ್ನೇಹಿತರು ಪ್ರಳಯಾಂತಕರ ಆಸ್ತಿಗಾಗಿ ಆಸೆ ಪಟ್ಟಂತೆ ತಮಾಷೆಗಾಗಿ ಬರೆದುಕೊಂಡಿದ್ದಾರೆ. ಅಯ್ಯೋ ನಿಮ್ಮ ಬುದ್ಧಿಗಿಷ್ಟು, ಅವರ ಆ ಆಸ್ತಿ ಸಂಪತ್ತೆಲ್ಲ ನಿಮ್ಮಂತಹ ನಾಸ್ತಿಕರಿಗೆ ಕೇವಲ ಕನ್ನಡಿಯೊಳಗಿನ ಗಂಟಿನಂತೆ ದಕ್ಕಲಾರದ ವಸ್ತುಗಳಷ್ಟೆ.

ಹಿಂದೊಮ್ಮೆ ಬ್ರಹ್ಮಾಂಡ ಜ್ಯೋತಿಷಿಯೊಬ್ಬ ಎಲ್ಲೆಲ್ಲಿ ಯಾವ್ಯಾವ ಜಾಗ ಹಾಗು ಯಾರು ಯಾರು ಈ ಪ್ರಳಯದಿಂದ ನಾಶವಾಗುತ್ತಾರೆ ಹಾಗು ಯಾವ ಯಾವ ಬ್ರಹ್ಮಾಂಡನಂತಹ ಪುಣ್ಯಾತ್ಮರುಗಳೆಲ್ಲ ಉಳಿಯುತ್ತಾರೆ ಎಂಬುವುದನ್ನೆಲ್ಲ ಕಣ್ಣಿಗೆ ಕಟ್ಟುವಂತೆ ವಿವರಿಸಿದ್ದ. ಅವನಂಥವರ ಪ್ರಕಾರ ಈ ಪ್ರಳಯದಲ್ಲಿ ಎಲ್ಲರೂ ಸಾಯಲಾರರು. ಈ ಸಾವುಹಾನಿಯೆಂಬ ದುರಂತದಲ್ಲೂ ಸೆಲೆಕ್ಷನ್ ಎಂಬುದು ಇದೆಯಂತೆ. "ನೋಡು ನೋಡು ಕಣ್ಣಾರೆ ನಿಂತಿಹಳು ನಗುನಗುತಾ ಚಾಮುಂಡಿ ನಿಂತಿಹಳು?" ಎಂಬ ಜನಪ್ರಿಯ ಭಕ್ತಿಗೀತೆಯೊಂದು ಇಂತದನ್ನೇ ಹೇಳುತ್ತದೆ. "ನಂಬಿರುವ ಭಕ್ತರ ರಕ್ಷೆಗಾಗಿ ನಂಬದಿಹ ದುಷ್ಟರ ಶಿಕ್ಷೆಗಾಗಿ" ಅಂದರೆ 'ನಾಸ್ತಿಕರೆಲ್ಲ ಶಿಕ್ಷಾರ್ಹ ದುಷ್ಟ'ರಂತೆ. ಈಗ ಗೊತ್ತಾಯಿತೇ ಪ್ರಳಯ ಎಂಬುದು ಎಲ್ಲರಿಗೂ ಅಲ್ಲವಂತೆ. ಹಾಗಾಗಿ ಆ ಪುಣ್ಯವಂತರ ಆಸ್ತಿ ಮೇಲೆ ನಿಮಗೇಕೆ ಕಣ್ಣು? ಪ್ರಳಯದಲ್ಲಿ ನಾಶವಾಗುವ ನಮ್ಮಂಥವರ ಆಸ್ತಿ ಅವರಿಗೆ ಸಿಗಬೇಕಾದದ್ದು ಅವರ ಪ್ರಕಾರ ಹೆಚ್ಚು ನ್ಯಾಯ.



ಸುಮಾರು ಒಂದು ದಶಕದ ಹಿಂದೆ ಬಿ.ವಿ.ವೈಕುಂಠರಾಜುರವರ ವಾರಪತ್ರಿಕೆಯಲ್ಲಿ, ಆನಂತರ ತರಂಗದಲ್ಲಿ ನರೇಂದ್ರನೋ-ಸುರೇಂದ್ರನೋ ಎಂಬುವವನು 'ಪ್ರಳಯ' ಕುರಿತು ಬರೆದ ಲೇಖನ ಬಹಳ ಸುದ್ದಿ ಮಾಡಿತ್ತು, ತರಂಗದ ಪ್ರತಿಗಳು ಸಾಕಾಗದೇ ಜೆರಾಕ್ಸ್ ಪ್ರತಿಗಳೂ ಆಗ ಮುದ್ರಿತವಾಗಿದ್ದವು. ನಂತರ ಆತನ ಪ್ರಳಯ ಪುಸ್ತಕ್ಕಂತೂ ಡಿಮ್ಯಾಂಡೋ ಡಿಮ್ಯಾಂಡ್ ಬಂದಿತ್ತು, ಆದರೆ ಆತ ಹೇಳಿದಂತೆ 2000 ದಂದು ಪ್ರಳಯ ಆಗಲೇ ಇಲ್ಲ, ಆತನ ಬರಹ ಓದಿದ ಕೋಟ್ಯಾಂತರ ಜನರಲ್ಲಿ ಒಬ್ಬಾತನೂ ಆತನ ಮನೆಹಾಳ ಘನಂದಾರಿ ಕೆಲಸಕ್ಕೆ ಉಗಿಯಲೂ ಹೋಗಲೂ ಇಲ್ಲ,

ಅವನಂತಹ ಪ್ರಳಯಾಂತಕರು ಪ್ರಳಯವನ್ನು 2000ಕ್ಕೆ, ಇವತ್ತು 2012ಕ್ಕೆ, ನಾಳೆ ಮತ್ತೊಂದು ದಿನಕ್ಕೆ ಎಂದು ಮುಂದೂಡುತ್ತಲೇ ಹೋಗಿದ್ದಾರೆ. ಇಂತಹ ವಂಚನೆಗೆ ಕೊನೆ ಖಂಡಿತಾ ಇಲ್ಲ,

ಲಂಕೇಶ್ ಬಳಗದ ಎಲ್ಲರಿಗೂ ಹೊಸ ವರ್ಷದ ಶುಭಾಷಯಗಳು.

-ರವಿ ಪುತ್ತೂರ, ದಕ



ಛೇ! ನಮ್ಮಂಥವರಿಗೆ ಪ್ರಳಯ ಪ್ರಿಯರ ಆಸ್ತಿ ಸಿಗಲಿಲ್ಲವಲ್ಲಾ!!!

ಇತ್ತೀಚಿಗೆ 'ಚಂದನ' ಚಾನೆಲ್‌ನಲ್ಲಿ ಪಾವಗಡದ ಪ್ರಕಾಶ್‌ರಾವ್ ಎಂಬಾತ ತನ್ನ ಪುರಾಣ ಬಿಚ್ಚಿದ್ದಾನೆ. ಕುತೂಹಲಕ್ಕೆ ಈ ಕಾರ್ಯಕ್ರಮವನ್ನು ಒಂದಿಷ್ಟು ನೋಡಿದ ನನ್ನ ಮೈ ಉರಿಯಲಾರಂಭಿಸಿತು. ಈತನ ಪ್ರಕಾರ ಎಲ್ಲ ಗಂಡಹೆಂಡತಿಯರು ಗಂಡು ಮಗುವನ್ನೇ ಬಯಸುತ್ತಾರಂತೆ. ಅದು ಸರಿ ಕೂಡ ಅಂತೆ. ಅದಕ್ಕೆ ಆತ ಕೊಡುವ ಲಾಜಿಕ್ 'ಪುತ್ರ' ಎನ್ನುವ ಪದದಲ್ಲಿ 'ಪುಥ್' ಎನ್ನುವ ನರಕದ ಹೆಸರಿದ್ದು ಆ ನರಕದಿಂದ ಹೆತ್ತವರನ್ನು ಪಾರು ಮಾಡಲು 'ಪುತ್ರ' ಬೇಕಂತೆ. ಆತನ ತಲೆಯಲ್ಲಿ ಲದ್ದಿ ಇದೆ ಎಂದು ಧಾರಾಳವಾಗಿ ಹೇಳಬಹುದು. 'ಪುತ್' ಎನ್ನುವುದು 'ಪುತ್ರಿ' ಎಂಬ ಪದದಲ್ಲೂ ಇದೆ ಎಂಬುದು ಈ ಪಂಡಿತನಿಗೆ ಗೊತ್ತಿಲ್ಲ ನೋಡಿ!

ಇಂತಹವನ ಮಾತನ್ನು ಭಕ್ತಿಯಿಂದ ಕೇಳುವ ಗೊಡ್ಡು ಪುರಾಣಪ್ರಿಯರು ಪ್ರಳಯವಾಗಿ ನಾಶವಾಗಿದ್ದರೆ ಚೆನ್ನಾಗಿತ್ತೇನೋ?! ಛೇ! ನಮ್ಮಂಥವರಿಗೆ ಅವರ ಆಸ್ತಿಯೂ ಸಿಗಲಿಲ್ಲ!!!

- ರಂಗಸ್ವಾಮಿ, ಮೈಸೂರು

ರೇಪ್ ಮತ್ತು ಮರ್ಡರ್ ಆದ ಸೌಜನ್ಯ ಹಿಂದೂ ಅಲ್ಲವೇ?


ಬಿಜೆಪಿಗಳು, ಆರೆಸ್ಸೆಸ್ಸಿಗಳು, ಎಬಿವಿಪಿಗಳು ದೆಹಲಿಯಲ್ಲಿ ಅತ್ಯಾಚಾರಕ್ಕೊಳಗಾದ ಯುವತಿಯ ಪರವಾಗಿ ದೊಡ್ಡ ದನಿಯಲ್ಲಿ ಅರಚಿಕೊಳ್ಳುತ್ತಿದ್ದಾರೆ.

ಆದರೆ ಧರ್ಮಸ್ಥಳದಲ್ಲಾದ ಸೌಜನ್ಯ ಮೇಲಿನ ಅತ್ಯಾಚಾರ ಮತ್ತು ಕೊಲೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಇವರೆಲ್ಲ ಯಾಕೆ ಎಲ್ಲ ರಂಧ್ರಗಳನ್ನು ಮುಚ್ಚಿಕೊಂಡು ಕೂತಿದ್ದಾರೆ?

ಸತ್ತ ಸೌಜನ್ಯ ಹಿಂದೂ ಅಲ್ಲವೇ?


- ರವಿಕುಮಾರ್, ಹಾಸನ


ಸೌಜನ್ಯಳಿಗಾದ ಘೋರ ಅನ್ಯಾಯದ ವಿರುದ್ಧ ಇಲ್ಲಿನ ಯುವಜನರ ಆಕ್ರೋಶ ಏಕೆ ಭುಗಿಲೆದ್ದಿಲ್ಲ? ಜನ



ಅಪ್ಪುಗೋಳ್ ಸಾಹಸ ಮಾಡುತ್ತಾರಾ?

'ಸಂಗೊಳ್ಳಿ ರಾಯಣ್ಣ' ಚಿತ್ರ ನಿರ್ಮಿಸಿ ಕನ್ನಡ ಚಿತ್ರರಂಗದಲ್ಲಿ ಹೊಸ ದಾಖಲೆಯನ್ನೇ ಬರೆದ ನಿರ್ಮಾಪಕ ಆನಂದ್ ಅಪ್ಪುಗೋಳ್ 2013ರಲ್ಲಿ ಮತ್ತೊಂದು ಹೊಸ ಸಾಹಸಕ್ಕೆ ಕೈಹಾಕಲು ಸಿದ್ಧತೆ ನಡೆಸುತ್ತಿದ್ದಾರೆ. ಎಲ್ಲವೂ ಅಪ್ಪುಗೋಳ್ ಅವರು ಬಯಸಿಕೊಂಡಂತೆ ನಡೆದರೆ 'ಸಂಗೊಳ್ಳಿ ರಾಯಣ್ಣ' ಚಿತ್ರದ ಶತದಿನೋತ್ಸವದ ಸಂದರ್ಭದಲ್ಲಿ ಅವರು ತಮ್ಮ ಹೊಸ ಚಿತ್ರವನ್ನು ಘೋಷಿಸಲಿದ್ದಾರೆ.






ಭಾರತೀಯ ಚಿತ್ರರಂಗದ ಇತಿಹಾಸದಲ್ಲಿ ಅನೇಕಾನೇಕ ದಾಖಲೆಗಳನ್ನು ಬರೆದ, ಭಾರತೀಯ ಚಿತ್ರೋದ್ಯಮಕ್ಕೆ ಒಂದು ಹೊಸ ದಿಕ್ಕನ್ನೇ ತೋರಿಸಿದ 'ಶೋಲೆ' ಚಿತ್ರವನ್ನು ಕನ್ನಡದಲ್ಲಿ ರೀಮೇಕ್ ಮಾಡಬೇಕೆಂಬುದು ಅಪ್ಪುಗೋಳ್ ಅವರ ಆಶಯವಂತೆ. ಈ ಕಾರಣಕ್ಕಾಗಿ ಅವರು ಈಗಾಗಲೇ 'ಶೋಲೆ' ಹೆಸರನ್ನು ಚೇಂಬರ್‌ನಲ್ಲಿ ರಿಜಿಸ್ಟರ್ ಕೂಡಾ ಮಾಡಿದ್ದಾರಂತೆ.

ಈ ಚಿತ್ರದ ಎರಡು ಮುಖ್ಯ ಪಾತ್ರಗಳಿಗೆ ಸುದೀಪ್ ಮತ್ತು ದರ್ಶನ್ ಆಯ್ಕೆಯಾಗಿದ್ದಾರೆ ಎಂಬ ಗುಲ್ಲು ಈಗಾಗಲೇ ಎಲ್ಲೆಡೆ ಹರಡಿದೆ. ಇವರಿಬ್ಬರ ಜೊತೆ ಅಪ್ಪುಗೋಳ್ ಗುಪ್ತವಾಗಿ ಸಮಾಲೋಚನೆ ಮಾಡಿ ಅವರು ಒಪ್ಪಿಗೆ ನೀಡಿದ ನಂತರವೇ ಚೇಂಬರ್‌ನಲ್ಲಿ ಸಿನಿಮಾದ ಹೆಸರು ರಿಜಿಸ್ಟರ್ ಮಾಡಿದ್ದಾರೆ ಎಂಬ ಸುದ್ದಿಯೂ ಕೇಳಿಬರುತ್ತಿದೆ. ಈ ಚಿತ್ರವನ್ನು ದರ್ಶನ್ ಸಹೋದರ ದಿನಕರ್ ತೂಗುದೀಪ್ ನಿರ್ದೇಶಿಸುವ ಸಾಧ್ಯತೆಯೂ ಇದೆ.


ಇದೆಲ್ಲ ನಿಜವಾಗಿದ್ದರೆ ಆ ಸಿನಿಮಾ ಖಂಡಿತವಾಗಿಯೂ ಕನ್ನಡ ಚಿತ್ರರಂಗದ ಇತಿಹಾಸದಲ್ಲೇ ಅತ್ಯಂತ ಅದ್ದೂರಿಯ ಮತ್ತು ಬಹು ತಾರಾಗಣದ ಚಿತ್ರವಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಅದಲ್ಲದೆ, ಸುದೀಪ್ ಮತ್ತು ದರ್ಶನ್ ಮೊದಲ ಬಾರಿಗೆ ಬೆಳ್ಳಿತೆರೆಯ ಮೇಲೆ ಜೊತೆಯಾಗಿ ಕಾಣಿಸಿಕೊಳ್ಳುವುದೇ ಕನ್ನಡ ಚಿತ್ರರಂಗದ ಮಟ್ಟಿಗೆ ಒಂದು ದೊಡ್ಡ ಸುದ್ದಿಯೇ ಸರಿ. ಯಾಕೆಂದರೆ ಇವರಿಬ್ಬರೂ ಈಗ ಕನ್ನಡ ಚಿತ್ರರಂಗದ ಬಾಕ್ಸ್ ಆಫೀಸ್ ಡಾರ್ಲಿಂಗ್‌ಗಳು. ಈ ಕಾರಣಕ್ಕಾಗಿಯೇ ಸಿನಿಮಾ ಹಂಚಿಕೆದಾರರು ಈ ಚಿತ್ರವನ್ನು ಖರೀದಿಸಲು ತಾ ಮುಂದು, ನಾ ಮುಂದು ಎಂದು ಪೈಪೋಟಿ ನಡೆಸಿದರೂ ಆಶ್ಚರ್ಯಪಡಬೇಕಾಗಿಲ್ಲ. ಇದೆಲ್ಲ ಖಂಡಿತವಾಗಿಯೂ ಈ ಚಿತ್ರಕ್ಕೆ ಪ್ಲಸ್ ಪಾಯಿಂಟ್ ಆಗಬಹುದು.

ಆದರರ್ಥ ಈ ಸಿನಿಮಾ ಖಂಡಿತವಾಗಿಯೂ ಹಿಟ್ ಆಗುತ್ತದೆ ಎಂದು ಭವಿಷ್ಯ ನುಡಿಯುವುದು ಕಷ್ಟ. ಯಾಕೆಂದರೆ ಈ ಚಿತ್ರಕ್ಕೆ ಕೈಹಾಕುವುದು ಎಂದರೆ ಒಂದು ರೀತಿಯಲ್ಲಿ ಸೆರಗಿನಲ್ಲಿ ಬೆಂಕಿಯುಂಡೆ ಕಟ್ಟಿಕೊಂಡಂತೆ. ಒಂದು ಜನಪ್ರಿಯ ಚಿತ್ರವನ್ನು ರೀಮೇಕ್ ಮಾಡುವುದರಲ್ಲಿ ಸ್ವಲ್ಪ ಹೆಚ್ಚುಕಮ್ಮಿಯಾದರೂ ನಿರ್ಮಾಪಕನಿಗೆ ಸೋಲು ಕಟ್ಟಿಟ್ಟ ಬುತ್ತಿ. ಮೂಲಚಿತ್ರವನ್ನು ಕನ್ನಡದ ಬಹುತೇಕ ಪ್ರೇಕ್ಷಕರು ನೋಡಿರುವುದರಿಂದ ಅದಕ್ಕಿಂತ ಉತ್ತಮವಾಗಿ ಚಿತ್ರ ನಿರ್ಮಾಣವಾಗಬೇಕು, ಜೊತೆಗೆ ಕಲಾವಿದರು ಮೂಲಚಿತ್ರದ ಕಲಾವಿದರಿಗಿಂತ ಮನೋಜ್ಞವಾಗಿ ನಟಿಸಬೇಕು. ಎಲ್ಲ ಸ್ತರದಲ್ಲೂ ಚಿತ್ರ ಚೆನ್ನಾಗಿ ಮೂಡಿಬರಬೇಕು. ಅದೆಲ್ಲ ಸ್ವಲ್ಪ ಕಷ್ಟವೇ. ಕೆಲವರ್ಷಗಳ ಹಿಂದೆ ಹಿಂದಿ ಮತ್ತು ತೆಲುಗು ಸಿನಿಮಾಗಳ ಖ್ಯಾತ ನಿರ್ದೇಶಕ ರಾಮ್ ಗೋಪಾಲ್ ವರ್ಮಾ 'ಶೋಲೆ' ಸಿನಿಮಾವನ್ನು ರೀಮೇಕ್ ಮಾಡಲು ಹೋಗಿ ಮಣ್ಣುಮುಕ್ಕಿದ ತಾಜಾ ಉದಾಹರಣೆ ಈಗ ಎಲ್ಲರ ಮುಂದಿದೆ.





ಅಲ್ಲಾ 'ಸಂಗೊಳ್ಳಿ ರಾಯಣ್ಣ' ತರಹದ ಅದ್ದೂರಿ ಚಿತ್ರವನ್ನು ಧೈರ್ಯವಾಗಿ ಕೈಗೆತ್ತಿಕೊಂಡಿದ್ದ ಅಪ್ಪುಗೋಳ್ ಅವರು ಈಗ ಅದ್ಯಾಕೆ ರೀಮೇಕ್ ಚಿತ್ರವನ್ನು ಮಾಡಲು ಹೊರಟಿದ್ದಾರೆ ಎಂಬುದೇ ಯಾರಿಗೂ ಅರ್ಥವಾಗುತ್ತಿಲ್ಲ.



...ರೋಧಿಗಳ ವಿರುದ್ಧ ನಮ್ಮ ಜನರ ಎಲ್ಲ ರಂಧ್ರಗಳೂ ...ಂದ್ ಆಗಿರುವುದರ ಹಿಂದಿನ ಗುಟ್ಟೇನು?

- ಕಸ್ತೂರಿ, ತುಮಕೂರು

ದೆಹಲಿಯ ಯುವತಿಯ ಮೇಲಾದ ಸಾಮೂಹಿಕ ...ತ್ಯಾಚಾರ ಮತ್ತು ದಾಳಿಯ ವಿರುದ್ಧ ಎಲ್ಲರೂ ...ಕ್ರೋಶಿತರಾಗಿದ್ದಾರೆ. ಆದರೆ ಕರ್ನಾಟಕದ ಮತ್ತು ...ಂಗಳೂರಿನ ಜನರ್‍ಯಾರೂ ನಮ್ಮ ರಾಜ್ಯದಲ್ಲಿರುವ ...ರ್ಮಸ್ಥಳದಲ್ಲಿ ಸೌಜನ್ಯ ಎಂಬ ಅಮಾಯಕ ಯುವತಿಯ ...ೇಲಾದ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ ವಿರುದ್ಧ ...ಕಾರವೆತ್ತುತ್ತಿಲ್ಲ. ಗೌರಿ ಲಂಕೇಶ್ ಪತ್ರಿಕೆ ಮಾತ್ರ ಆ ...ಮಾಯಕ ವಿದ್ಯಾರ್ಥಿನಿಗಾದ ಅನ್ಯಾಯದ ವಿರುದ್ಧ ದನಿ ...ತ್ತಿದೆ. ನಾವೆಲ್ಲರೂ ಎಚ್ಚೆತ್ತುಕೊಂಡು ಸೌಜನ್ಯಳಿಗೆ ನ್ಯಾಯ ...ಗುವಂತೆ ಹೋರಾಡಬೇಕಿದೆ. ಯಾಕೆಂದರೆ ಅತ್ಯಾಚಾರ ...ಹಲಿಯಲ್ಲೇ ನಡೆಯಲಿ, ಧರ್ಮಸ್ಥಳದಲ್ಲೇ ನಡೆಯಲಿ ...ದು ಅತ್ಯಾಚಾರವೇ.

- ಅಭಿನಂದನ ಬಳ್ಳಾರಿ, ಬೆಂಗಳೂರು


'ಧರ್ಮಸ್ಥಳ- ದಗಲುಬಾಜಿ ದಂಧೆಗಳು' ಎಂಬ ...ರಹದರಿ ತಾವು ಬರೆದಿರುವುದೆಲ್ಲ ಸತ್ಯ. ಇವೆಲ್ಲವುಗಳ ...ಗ್ಗೆ ನಮ್ಮ ಊರಿನಾದ್ಯಂತ ಗೊತ್ತಿದ್ದರೂ ಕೂಡ ಅದನ್ನು ...ಜ್ಯಾದ್ಯಂತ ಪ್ರಚುರಪಡಿಸಲು ಯಾವುದೇ ಮಾಧ್ಯಮಗಳು ...ಧೈರ್ಯ ತೋರಿಸಿರಲಿಲ್ಲ. ಧರ್ಮಸ್ಥಳದಲ್ಲಿ ನಮ್ಮ ...ಪಾಪ್ರಭುತ್ವ ವ್ಯವಸ್ಥೆ ಎಷ್ಟು ಹದಗೆಟ್ಟಿದೆ ಎಂಬುದಕ್ಕೆ ಕೈಗನ್ನಡಿಯಾಗಿದೆ.

ಇಂತಹ ಪರಿಸ್ಥಿತಿಯಲ್ಲೂ ತಮ್ಮ ಪತ್ರಿಕೆ ಇಂತಹ ರಿಸ್ಕ್ ತೆಗೆದುಕೊಂಡು ಇಲ್ಲಿ ನಡೆದಿರುವ ವಂಚನೆ, ಕೊಲೆ ಇತ್ಯಾದಿಗಳ ಬಗ್ಗೆ ಸ್ಪಷ್ಟವಾಗಿ ಪ್ರಕಟಿಸಿದೆ. ಅದಕ್ಕಾಗಿ ನನ್ನೂರಿನ ಅನೇಕಾನೇಕ ಪ್ರಜ್ಞಾವಂತ ನಾಗರಿಕರ ಪರವಾಗಿ ತುಂಬು ಹೃದಯದ ಅಭಿನಂದನೆಗಳು. ಇಂತಹ ಇನ್ನೂ ಅನೇಕಾನೇಕ ಸತ್ಯಗಳು ತಮ್ಮ ಪತ್ರಿಕೆಯಿಂದ ಹೊರಬರಲಿ ಎಂದು ಹಾರೈಸುತ್ತೇನೆ.

-ಅಶೋಕ್ ದೇವಾಡಿಗ, ಬೆಳ್ತಂಗಡಿ

ಭಾರತದ ಸೋಲಿಗೆ ಧೋನಿ ಮಾತ್ರ ಹೊಣೆಯಲ್ಲ

'ಬಿಡಿ ಚಿತ್ರಗಳು ಅಂಕಣದಲ್ಲಿ ಪಾರ್ವತೀಶ ಅವರು (ಜನವರಿ 2, 2013ರ ಸಂಚಿಕೆ) ಭಾರತ ಕ್ರಿಕೆಟ್ ತಂಡದ ನಾಯಕ ಮಹೇಂದ್ರ ಧೋನಿ ಅವರನ್ನು ದೂರಿದ್ದಾರೆ. ಆದರೆ ಭಾರತ ತಂಡದ ಸೋಲಿಗೆ ಧೋನಿ ಅವರೊಬ್ಬರೇ ಹೊಣೆಯಲ್ಲ ಎಂಬುದನ್ನು ಅವರು ಮರೆತಿದ್ದಾರೆ. ಕ್ಯಾಚ್ ಬಿಟ್ಟರೂ ಹಲ್ಲು ಕಿಸಿಯುವ ಹಾಗು ಅಗತ್ಯ ದೇಹ ಭಾಷೆ ಇರದ ಸೆಹ್ವಾಗ್, ರಟ್ಟೆ ಸೋತವರಂತೆ ಬೌಲಿಂಗ್ ಮಾಡುವ ಜಹೀರ್ ಮತ್ತು ಇಶಾಂತ್, ಆಟ ಕೈ ಕೊಟ್ಟರೂ ನಿವೃತ್ತಿಯನ್ನು ಘೋಷಿಸಿ ತಂಡ ತೊರೆಯದ ಭಂಡ ತೆಂಡೂಲ್ಕರ್, ಫೀಲ್ಡ್ ಮಾಡಲು ಬಾರದ ಮತ್ತು ಹೋರಾಟದ ಛಲವಿರದ ಕೆಲವು ಮುದಿ ಎತ್ತುಗಳನ್ನು ಧೋನಿ ಹೇಗೆ ತಾನೇ ಕೃಷಿ ಮಾಡಬಲ್ಲರು?



ಮಿಗಿಲಾಗಿ ಬ್ಯಾಟಿಂಗ್, ಬೌಲಿಂಗ್ ಹಾಗೂ ಫೀಲ್ಡಿಂಗ್ ವಿಭಾಗಗಳಲ್ಲಿ ಇಂಗ್ಲೆಂಡ್ ತಂಡ ನಮ್ಮ ತಂಡಕ್ಕಿಂತ ಉತ್ತಮವಾಗಿತ್ತು. ಆದ್ದರಿಂದ ಭಾರತ ಸೋಲದೆ ಅನ್ಯಮಾರ್ಗವಿರಲಿಲ್ಲ.

ತೂತು ಬಿದ್ದ ದೋಣಿಯಲ್ಲಿ ಎಂತಹ ಚಾಣಾಕ್ಷ ನಾವಿಕನೂ ದಡ ಸೇರಿಸಲಾರ.

- ಎನ್.ಕೆ.ವರದರಾಜ್, ಕೋಲಾರ

ಈ ವಾರದ ಸಂಚಿಕೆ (ಜನವರಿ 2, 2013) ಸೂಪರ್ ಆಗಿದೆ. ಮೈಸೂರಿನ ವಂಚಕ ರಾಮದಾಸನ ಗೂಂಡಾಗಿರಿ, ವಂಚನೆಯ ಬಗ್ಗೆ ಸರಿಯಾಗಿಯೇ ಬರೆದಿದ್ದೀರಿ. ಹಾಗೆಯೇ ಗೋಮುಖ ವ್ಯಾಘ್ರ ಎಂಎಲ್‌ಸಿ ಮಧುಸೂದನ ಮತ್ತು ನಯವಂಚಕ ಜಿ.ಟಿ.ದೇವೇಗೌಡನ ಬಗ್ಗೆಯೂ ಪತ್ರಿಕೆ ತನಿಖಾ ವರದಿಗಳನ್ನು ಪ್ರಕಟಿಸಲಿ.

- ಅಹಮದ್ ಪಾಶಾ, ಮೈಸೂರು

'ಲೈಫ್ ಆಫ್ ಪೈ' ಚಿತ್ರದ ಬಗ್ಗೆ ರಾ.ಸೋಮನಾಥ್ ಅವರು ಬರೆದ ಲೇಖನ ಇಂದಿನ ಸಿನಿಮಾ ವಿಮರ್ಶಕರು ನಾಚುವಂತಿದೆ.

-ಮಹಾದೇವ್, ಎಸ್‌ಎಂಎಸ್ ಮೂಲಕ

ಕೆನೆತ್ ಆ್ಯಂಡರ್‌ಸನ್ ಮತ್ತು ಜಿಮ್ ಕಾರ್ಬೆಟ್‌ನ ಸಾಹಿತ್ಯವನ್ನು ಮುಗಿಬಿದ್ದು ಓದಿರುವೆನು. ಡೋನಾಲ್ಡ್ ಆ್ಯಂಡರ್‌ಸನ್ ಬಗ್ಗೆ ಪತ್ರಿಕೆಯಲ್ಲಿ ಬಂದ ಲೇಖನಗಳು ಖುಷಿ ಕೊಟ್ಟವು. ಈ ಬಗ್ಗೆ ಬರಲಿರುವ ಪುಸ್ತಕಕ್ಕಾಗಿ ಕಾಯುತ್ತಿದ್ದೇನೆ. ಎಲ್ಲಾ ಪುಸ್ತಕಗಳು ಕೂಡಲೇ ಪ್ರಕಟವಾಗಲಿ.

- ಮನೋಜ್, ಮಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.

ತಾರಾ ವಿಫಲತೆ



ಚಲನಚಿತ್ರ ಅಕಾಡಮಿ ಅಧ್ಯಕ್ಷೆ ತಾರಾ ಅನುರಾಧ ನೇತೃತ್ವದಲ್ಲಿ ನಡೆದ ಮೂರನೆ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ಹಾಗೂಹೀಗೂ ನಡೆಯಿತು.

ತಾರಾ ಅಕಾಡಮಿಯ ಅಧ್ಯಕ್ಷೆ ಆಗಿರುವುದರಿಂದ ಮತ್ತು ಆಕೆ ಮೂಲತಃ ಕಮರ್ಷಿಯಲ್ ಕಲಾವಿದೆಯಾದರೂ ಗಾಂಧಿನಗರದ ಎಲ್ಲಾ ಗುಂಪುಗಳಿಗೆ ಸೇರುವ ಹಾಗು ಎಲ್ಲರೂ ಇಷ್ಟಪಡುವ ನಟಿಯಾಗಿರುವುದರಿಂದ ಆಕೆಯ ನೇತೃತ್ವದ ಚಿತ್ರೋತ್ಸವದಲ್ಲಿ ಕನ್ನಡ ಚಿತ್ರೋದ್ಯಮದವರ ಭಾಗವಹಿಸುವಿಕೆ ಹೆಚ್ಚು ಸಂಖ್ಯೆಯಲ್ಲಿರಬಹುದೆಂಬ ನಿರೀಕ್ಷೆ ಇತ್ತು.

ಆದರೆ ಚಿತ್ರೋತ್ಸವದ ಉದ್ಘಾಟನೆಗೂ ಕಮರ್ಷಿಯಲ್ ಸಿನಿಮಾ ಜಗತ್ತಿನ ಪ್ರಮುಖ ಕಲಾವಿದರು ಗೈರುಹಾಜರಾದರು. ದೊಡ್ಡ ದೊಡ್ಡ ನಟನಟಿಯರು ವಿಷಯ ಬಿಡಿ, ನಿನ್ನೆಮೊನ್ನೆ ಬಂದ ಚಿಕ್ಕಪುಟ್ಟ ನಾಯಕನಾಯಕಿಯರೂ ಅತ್ತ ಕಡೆ ತಿರುಗಿಯೂ ನೋಡಲಿಲ್ಲ. ಪರಿಣಾಮವಾಗಿ ಕಲಾತ್ಮಕ ಸಿನಿಮಾ ಜಗತ್ತಿನ ಅದೇ ಹಳೆ ಮುಖಗಳು ಅಲ್ಲಿ ಕಾಣಿಸಿದವೆ ಹೊರತು ಹೊಸ ಮುಖಗಳು ಅಲ್ಲಿ ಕಾಣಿಸಲೇ ಇಲ್ಲ.


ಅಷ್ಟೇ ಯಾಕೆ, ತಾರಾ ಪ್ರತಿನಿಧಿಸುವ ಬಿಜೆಪಿಯ ನಾಯಕರು, ಮಂತ್ರಿಗಳು, ಶಾಸಕರೂ ಚಿತ್ರೋತ್ಸವದಿಂದ ನಾಪತ್ತೆಯಾಗಿದ್ದರು. ಮಾತ್ರವಲ್ಲ ಮುಖ್ಯಮಂತ್ರಿ ಚಂದ್ರು, ಜಗ್ಗೇಶ್, ಶ್ರುತಿ, ಶ್ರೀನಾಥ್, ರವಿಕಿರಣ್, ಸುಂದರರಾಜ್ ಹೀಗೆ. . . ಬಿಜೆಪಿಯಲ್ಲಿ ಸಕ್ರಿಯರಾಗಿರುವ ನಟನಟಿಯರೂ ಅಲ್ಲಿ ಕಾಣಿಸಿಕೊಳ್ಳಲಿಲ್ಲ.

ಒಟ್ಟಾರೆಯಾಗಿ ಇಡೀ ಉದ್ಯಮವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಎಲ್ಲರನ್ನು ಒಟ್ಟು ಸೇರಿಸಿ ಈ ಉತ್ಸವ ನಡೆಸುವಲ್ಲಿ ತಾರಾ ವಿಫಲರಾಗಿದ್ದಾರೆ ಎಂದು ಹೇಳಬಹುದು. ಆದರೆ ಆರು ತಿಂಗಳ ಗರ್ಭಿಣಿ ತಾನು ಎಂಬುದನ್ನು ಮರೆತು ತಾರಾ ಕೆಲಸ ಮಾಡಿದ ರೀತಿ ಮಾತ್ರ ಅಭಿನಂದನೀಯ.



ಸ್ಟ್ರಗ್ಲರ್
ಪ್ರಿಯಾ ಹಾಸನ್

ಲಕ್ಕಿ(ಚಿತ್ರ)ಗೆ ದಾರಿಬಿಟ್ಟ ವರದನಾಯಕ



2013ರ ಮೊದಲ ಶುಕ್ರವಾರದಂದು ಶಿವರಾಜ್‌ಕುಮಾರ್ ನಾಯಕನಾಗಿ ನಟಿಸಿರುವ 'ಲಕ್ಕಿ' ಚಿತ್ರ ಮತ್ತು ಸುದೀಪ್ ಅತಿಥಿನಟನಾಗಿ ನಟಿಸಿರುವ 'ವರದ ನಾಯಕ' ಚಿತ್ರ ಒಟ್ಟಿಗೆ ಬಿಡುಗಡೆಯಾಗುವ ಸುದ್ದಿ ಕೇಳಿಬಂದಿತ್ತು. ಅಷ್ಟೇ ಅಲ್ಲ, ಸುದೀಪ್ ಮತ್ತು ಶಿವಣ್ಣ ನಡುವಿನ ಮನಸ್ತಾಪದಿಂದಾಗಿ ಹೀಗೆ ಆಗುತ್ತಿದೆ ಎಂಬ ಸುದ್ದಿಯೂ ಹರಡಿತ್ತು.

ದೊಡ್ಡ ನಿರೀಕ್ಷೆಯ ಈ ಎರಡು ಚಿತ್ರಗಳು ಒಟ್ಟಿಗೆ ಬಿಡುಗಡೆಯಾದರೆ ಖಂಡಿತವಾಗಿ ಎರಡೂ ಚಿತ್ರಗಳಿಗೆ ತೊಂದರೆಯಾಗುತ್ತದೆ; ಕನ್ನಡ ಚಿತ್ರಗಳಿಗೆ ಕನ್ನಡ ಚಿತ್ರಗಳೇ ಪೈಪೋಟಿ ನೀಡುತ್ತಿರುವುದು ಸರಿಯಲ್ಲ; ಹೀಗೆ ಕನ್ನಡ ಚಿತ್ರಗಳನ್ನು ಕನ್ನಡ ಚಿತ್ರಗಳೇ 'ಕಿಲ್' ಮಾಡುತ್ತಿರುವುದನ್ನು ತಾರಾ ಸಮರ, ಸ್ಟಾರ್ ವಾರ್ ಎಂದು ಕರೆಯುವುದು ಶೋಚನೀಯ ತರಹದ ಮಾತುಗಳೂ ಗಾಂಧಿನಗರದಲ್ಲಿ ಕೇಳಿಬಂದವು.

ಆದರೆ ಕೊನೆಗೆ ಬಂದ ಸುದ್ದಿಯ ಪ್ರಕಾರ 'ವರದ ನಾಯಕ' ಚಿತ್ರದ ಬಿಡುಗಡೆಯನ್ನು ನಟ ಸುದೀಪ್ 18ಕ್ಕೆ ಮುಂದೂಡಿದರು. ಇದು ನಿಜಕ್ಕೂ ಸಿಹಿ ಸುದ್ದಿ.



ಕೋಮಲ್ ನಿಟ್ಟುಸಿರಿಗೆ ರೀ...ಸನ್

ಹಾಸ್ಯ ನಟ ಕೋಮಲ್ ಅವರ ವೃತ್ತಿ ಜೀವನದ ಸೂಪರ್ ಹಿಟ್ ಚಿತ್ರ 'ಗೋವಿಂದಾಯ ನಮಃ'. ಈಗ ಅದೇ ಕೋಮಲ್ ಮತ್ತು ಪರೋಲ್ ನಾಯಕ ನಾಯಕಿಯಾಗಿ ನಟಿಸಿರುವ 'ನಂದೀಶ' ಬಿಡುಗಡೆಯಾಗುತ್ತಿದೆ. ಈ ಚಿತ್ರ ಕೂಡ 'ಗೋವಿಂದಾಯ ನಮಃ' ತರಹ ಬಾಕ್ಸ್ ಆಫೀಸ್‌ನಲ್ಲಿ ಹಣ ಕೊಳ್ಳೆ ಹೊಡೆಯಬಹುದು ಎಂಬ ನಿರೀಕ್ಷೆ ಚಿತ್ರ ತಂಡದವರದ್ದು.

ಕೋಮಲ್ ನಿರ್ಮಿಸಿರುವ ಮತ್ತು ನಾಯಕನಾಗಿ ನಟಿಸಿರುವ 'ನಂದೀಶ' ಚಿತ್ರವನ್ನು ಸಾಯಿಪ್ರಕಾಶ್ ನಿರ್ದೇಶಿಸಿದ್ದಾರೆ. ಅವರ ಪ್ರಕಾರ "ಇದು ವೆಜಿಟೇರಿಯನ್ ಮತ್ತು ನಾನ್ ವೆಜಿಟೇರಿಯನ್ ಹೀಗೆ ಎರಡೂ ವರ್ಗದವರಿಗೆ ಇಷ್ಟವಾಗಲಿರುವ ಚಿತ್ರ". ಅಂದರೆ, ಪಡ್ಡೆ ಹುಡುಗರಿಗೂ, ಸಂಸಾರಸ್ಥರಿಗೂ ಇಷ್ಟವಾಗುತ್ತದೆ ಎಂಬುದು ಅವರ ಮಾತಿನ ಗೂಡಾರ್ಥ.

'ಗೋವಿಂದಾಯ ನಮಃ' ಹಿಟ್ ಆದನಂತರ ಕೋಮಲ್ ಚಿತ್ರಗಳಿಗೆ ಒಂದು ರೀತಿಯ ಡಿಮಾಂಡ್ ಬಂದುಬಿಟ್ಟಿದೆ. ಇದರ ಬಗ್ಗೆ ಕೋಮಲ್ ಭಾವುಕರಾಗಿ ಹೇಳಿದ್ದು ಹೀಗೆ: "ನನ್ನ ಚಿತ್ರಗಳು ಬೆಳಗ್ಗಿನ ದೇಖಾವೆ ಹೌಸ್‌ಫುಲ್ ಆಗುವುದಿಲ್ಲಾ ಎಂಬ ಕೊರಗಿತ್ತು. "'ಗೋವಿಂದಾಯ ನಮಃ' ಚಿತ್ರಕ್ಕೆ ಬೆಳಗ್ಗಿನ ದೇಖಾವೆ ಹೌಸ್‌ಫುಲ್ ಬೋರ್ಡ್‌ಅನ್ನು ಥಿಯೇಟರ್ ಮುಂದೆ ನೇತು ಹಾಕಿದ್ದಾರೆ. ಟಿವಿ ಚಾನೆಲ್‌ಗಳ ಒಬಿ ವ್ಯಾನ್‌ಗಳು ಬಂದಿವೆ" ಎಂದು ನನ್ನ ಗೆಳೆಯರು ಹೇಳಿದಾಗ ನಾನು ಅವರನ್ನು ನಂಬಲೇ ಇಲ್ಲ, ಆದರೆ ಅವರು ಹೇಳಿದ್ದು ನಿಜ ಎಂದು ಗೊತ್ತಾದಾಗ ನಾನೂ ಹೀರೋ ಆದನ್ನೆಲ್ಲಾ ಎಂದು ಖುಷಿ ಪಟ್ಟೆ." ಕೋಮಲ್ ಪ್ರಕಾರ 'ಗೋವಿಂದಾಯ ನಮಃ' ಚಿತ್ರ ಸುಮಾರು ಎಂಟು ಕೋಟಿ ರೂಪಾಯಿ ಲಾಭ ಮಾಡಿತಂತೆ.

ಅಂದಹಾಗೆ, ಈ ಬಾರಿ ಕೋಮಲ್ ನಿಟ್ಟುಸಿರು ಬಿಡಲು ಇನ್ನೊಂದು ಬಲವಾದ ಕಾರಣವಿದೆ. ಅದೇನೆಂದರೆ, ಇದೇ ಮೊದಲ ಬಾರಿಗೆ ಕೋಮಲ್ ಚಿತ್ರಕ್ಕೆ ಪ್ರತಿಸ್ಪರ್ಧಿಯಾಗಿ ಕನ್ನಡದ ಅಥವಾ ಪರಭಾಷೆಯ ಯಾವುದೇ ಚಿತ್ರ ಬಿಡುಗಡೆಯಾಗುತ್ತಿಲ್ಲ. ಇದು ಖಂಡಿತವಾಗಿಯೂ ಕೋಮಲ್ ಪಾಲಿಗೆ ಶುಭ ಶಕುನ ಎಂದು ಹೇಳಬಹುದು.

ಕೊನೇ ಮಾತು: 'ನಂದೀಶ' ಚಿತ್ರ ಮಲೆಯಾಳಂನ ಸಿನಿಮಾವೊಂದರ ರೀಮೇಕ್ ಎಂಬುದನ್ನು ಕೋಮಲ್ ಆಗಲಿ, ಸಾಯಿಪ್ರಕಾಶ್ ಆಗಲಿ ಅಪ್ಪಿತಪ್ಪಿಯೂ ಹೇಳಲೇ ಇಲ್ಲ.



ಭಿನ್ನಾಭಿಪ್ರಾಯ ತಂದ ವಿಷಯ

ಕೋಮಲ್ ಮತ್ತು ಅವರ ಸಹೋದರ ನಟ ಜಗ್ಗೇಶ್ ನಡುವೆ ಸಣ್ಣಪುಟ್ಟ ಭಿನ್ನಾಭಿಪ್ರಾಯ ತಲೆದೋರಿ ಅವರಿಬ್ಬರ ಸಂಬಂಧ ಸಂಪೂರ್ಣವಾಗಿ ಕೆಟ್ಟುಹೋಗಿದೆ.

ಇದು ಗಾಸಿಪ್ ಅಲ್ಲ, ಗಾಳಿ ಸುದ್ದಿಯೂ ಅಲ್ಲ, ಬದಲಾಗಿ ನಿಜವಾದ ಸುದ್ದಿ. ಇದನ್ನು ಮೊನ್ನೆ ಪತ್ರಕರ್ತರ ಮುಂದೆ ಬಿಚ್ಚಿಟ್ಟದ್ದು ಬೇರೆ ಯಾರೂ ಅಲ್ಲ, ಸ್ವತಃ ಕೋಮಲ್ ಅವರೇ. ಸುಮಾರು ಆರು ತಿಂಗಳ ಕಾಲ ಈ ಇಬ್ಬರು ಸಹೋದರರು ಪರಸ್ಪರ ಮಾತನಾಡುವುದಿರಲಿ, ಒಬ್ಬರ ಮುಖವನ್ನು ಇನ್ನೊಬ್ಬರು ನೋಡುತ್ತಲೂ ಇರಲಿಲ್ಲ.

ಆದರೆ, ಸಮಾಧಾನದ ವಿಷಯ ಯಾವುದೆಂದರೆ ಅವರಿಬ್ಬರೂ ಈಗ ತಮ್ಮ ನಡುವಿನ ಭಿನ್ನಾಭಿಪ್ರಾಯವನ್ನು ಬಗೆಹರಿಸಿಕೊಂಡು ಮತ್ತೆ ಅದೇ ಹಳೆಯ ಅಪೂರ್ವ ಸಹೋದರರು ಎಂದೆನಿಸಿದ್ದಾರೆ.

ಕೋಮಲ್ ಹೇಳುವ ಪ್ರಕಾರ "ನಾನು ಕೆಲವು ನೈಜ ವಿಷಯಗಳನ್ನು ಅಣ್ಣ ಜಗ್ಗೇಶ್‌ಗೆ ಹೇಳಿದರೆ ಆತ ಅದನ್ನು ಅರ್ಥಮಾಡಿಕೊಳ್ಳುತ್ತಿರಲಿಲ್ಲ, ಅದಕ್ಕೆ ಸರಿಯಾಗಿ ಕೆಲವರು ಅದನ್ನೇ ನನ್ನ ಮತ್ತು ನನ್ನ ಅಣ್ಣನ ನಡುವೆ ಫಿಟ್ಟಿಂಗ್ ಇಡಲು ಉಪಯೋಗಿಸಿಕೊಂಡರು. ಕೊನೆಗೆ ಇಬ್ಬರೂ ಸುಮಾರು ಆರು ತಿಂಗಳು ಮಾತನಾಡುವುದನ್ನು ಬಿಟ್ಟುಬಿಟ್ಟಿದ್ದೆವು. ಕೊನಗೆ ಅಪ್ಪ ತೀರಿದ ಸಂದರ್ಭದಲ್ಲಿ ನಾನೇ ಹೋಗಿ ಮಾತನಾಡಿ 'ಅಣ್ಣಾ ಈಗ ನಿನಗೆ ಗೊತ್ತಾಯಿತಲ್ವ? ನಾನು ಹೇಳಿದ್ದು ನಿಜವಲ್ವ?' ಎಂದು ಕೇಳಿದೆ. ಈಗ ಆತನಿಗೂ ಅರ್ಥವಾಗಿದೆ. ಇನ್ನು ಮುಂದೆ ನಮ್ಮ ಮುಂದೆ ಫಿಟ್ಟಿಂಗ್ ಇಡಲು ಯಾರಿಂದಲೂ ಸಾಧ್ಯವಿಲ್ಲ."

ಆದರೆ ಅವರ ನಡುವೆ ಭಿನ್ನಾಭಿಪ್ರಾಯ ತಂದ ವಿಷಯ ಯಾವುದು ಎಂದು ಅವರು ಹೇಳಲಿಲ್ಲ. ಅದು ಜಗ್ಗೇಶ್ ನಿರ್ದೇಶನದ ವಿಷಯವೋ? ಅಥವಾ ಜಗ್ಗೇಶ್ ತಮ್ಮ ಮಗ ಗುರುರಾಜನನ್ನು ಹೀರೋ ಮಾಡುವ ವಿಷಯವೋ? ಗೊತ್ತಿಲ್ಲ.

ಕಾರಣಗಳು ಏನೇ ಇರಲಿ, ಅದು ನಮಗೆ ಮುಖ್ಯವಲ್ಲ. ಈ ಭಿನ್ನಾಭಿಪ್ರಾಯವನ್ನು ಗುಟ್ಟಾಗಿ ಇಡದೆ ಅದರ ಬಗ್ಗೆ ದಿಟ್ಟವಾಗಿ ಮಾತನಾಡಿದ ಕೋಮಲ್ ನಿಲುವನ್ನು ಮೆಚ್ಚಬೇಕು. ಈ ಸಹೋದರರು ಇನ್ನು ಮುಂದೆ ಒಟ್ಟಾಗಿ ಜೊತೆಯಾಗಿ ಹೊಸ ಹೊಸ ಸಾಹಸಗಳನ್ನು ಮಾಡುವಂತಾಗಲಿ ಎಂಬುದು ನಮ್ಮ ಹಾರೈಕೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26576427, Fax : 26604536, E-mail :lankesh70@rediffmail.com

ರಂಜನೆ ಬೋ

೨೦

ಜನವರಿ 16, 2013